UNIVERSAL
LIBRARY
OU_200002
UNIVERSAL
LIBRARY

# ಚಂದ್ರನಾಥ

**ಶರಚ್ಚಂದ್ರ ಚಟ್ಟೋಪಾಧ್ಯಾಯರ**

**ಕಾದಂಬರಿ**

ಕನ್ನಡಿಸಿದವರು :

**ಶ್ರೀ. ಗುರುನಾಥ ಜೋಶಿ**

ಎರಡನೆಯ ಮುದ್ರಣ

೧೯೪೪

ಸೋಲ್ ಏಜಂಟರು :

**ಸಾಹಿತ್ಯ ಭಾಂಡಾರ**

**ಹುಬ್ಬಳ್ಳಿ**

# ಪ್ರಕಾಶಕರ ಮಾತು

ಭಾರತೀಯ ಸಾಹಿತ್ಯಕ್ಕೇ ಹೊಸ ಬಗೆಯ ಕಾದಂಬರಿಗಳನ್ನೊದಗಿಸಿದ ದಿವಂಗತ ಶರಚ್ಚಂದ್ರರ ಉತ್ಕೃಷ್ಟ ಕೃತಿಗಳು ಕನ್ನಡಕ್ಕೆ ಬಂದಿವೆ. ಆದ್ದರಿಂದ ಅವರ ಸಾಹಿತ್ಯವನ್ನು ಕುರಿತು ಇಲ್ಲಿ ನಾನು ಹೆಚ್ಚು ಏನೂ ಹೇಳುವ ಅಗತ್ಯವಿಲ್ಲ. ಈ ಕಾದಂಬರಿ – ಚಂದ್ರನಾಥ – ೧೯೩೭ರಲ್ಲಿ ಧಾರವಾಡದ 'ಪ್ರೇಮ ಗ್ರಂಥಮಾಲೆ'ಯಲ್ಲಿ ಮೊದಲ ಸಲ ಪ್ರಕಟವಾಯಿತು. ಈಗ ೪-೫ ವರುಷಗಳಿಂದ ಇದರ ಪ್ರತಿಗಳೇ ದೊರಕುತ್ತಿರಲಿಲ್ಲ. ಆದ್ದರಿಂದ ಶ್ರೀ. ಗುರುನಾಥ ಜೋಶಿಯವರ ಅಪ್ಪಣೆ ಪಡೆದು ಎರಡನೆ ಆವೃತ್ತಿಯನ್ನು ಈಗ ಪ್ರಕಟಿಸಲಾಗಿದೆ. ಈ ಬಗ್ಗೆ ಒಪ್ಪಿಗೆ ಕೊಟ್ಟ ಶ್ರೀ. ಗುರುನಾಥ ಜೋಶಿಯವರಿಗೆ ಕೃತಜ್ಞತೆಗಳು.

ಮೊದಲ ಆವೃತ್ತಿಗೂ ಈ ಆವೃತ್ತಿಗೂ ಶೈಲಿಯಲ್ಲಿ – ಅಲ್ಲಲ್ಲಿ – ಸ್ವಲ್ಪ ಹೆಚ್ಚು ಕಡಿಮೆ ಇದೆ. ಇದೇ ಕಾದಂಬರಿಯ ಹಿಂದೀ ಕೃತಿಯನ್ನು ಎದುರಿಗಿಟ್ಟುಕೊಂಡು ಈ ಹೆಚ್ಚುಕಡಿಮೆಯನ್ನು ಮಾಡಿದವರು ಶ್ರೀ. ಮ. ಗೋವಿಂದರಾಯರು. ಆದ್ದರಿಂದ ಈ ತಿದ್ದುವಿಕೆಯ ಜೊತೆಗೆ ಬಂದ ಒಳಿತು ಕೆಡುಕುಗಳಿಗೆ ಗೋವಿಂದರಾಯರು ಹೊಣೆಯೆ ಹೊರತು ಭಾಷಾಂತರಕಾರರಾದ ಗುರುನಾಥ ಜೋಶಿಯವರಲ್ಲ.

ಸಾಧ್ಯವಾದರೆ ಇಂತಹ ಇನ್ನೂ ಹಲವು ಪುಸ್ತಕಗಳನ್ನು ಪ್ರಕಟಿಸುವ ಯೋಚನೆ ಇದೆ. ಅದಕ್ಕೆ ಬೇಕಾಗುವ ಹಲವು ಅನುಕೂಲತೆಗಳಲ್ಲಿ ಓದುಗರಿಂದ ಬರಬೇಕಾದ ನೆರವು ಬಹಳ ಮುಖ್ಯ. ಅದು ಸಿಗಬಹುದೆಂಬ ನಂಬುಗೆಯಿಂದ ಈ ಸಾಹಸ ಕೈಕೊಂಡಿದೆ.

ಚೆನ್ನಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಟೌನ್ ಮುದ್ರಣಾಲಯದ ಒಡೆಯರಾದ ಹೆಚ್. ಎಲ್. ಪ್ರಸಾದರಿಗೂ, ಅಲ್ಲಲ್ಲಿ ತಿದ್ದಿದ ಶ್ರೀ. ಗೋವಿಂದರಾಯರಿಗೂ ನಾವು ಆಭಾರಿಗಳು.

ಏಪ್ರಿಲ್, ೧೯೪೪
ಬೆಂಗಳೂರು

ಪ್ರಕಾಶಕ

# ಚಂದ್ರನಾಥ

ತಂದೆಯವರ ಶ್ರಾದ್ಧದ ಮುನ್ನಾದಿನವೆ ತನ್ನ ಚಿಕ್ಕಪ್ಪ ಮಣಿಶಂಕರ ಮುಖೋಪಾಧ್ಯಾಯರೊಡನೆ ವ್ಯಾಜ್ಯವಾದುದರಿಂದ ಚಂದ್ರನಾಥನ ಮನಸ್ಸು ಕಲಕಿಹೋಗಿದ್ದಿತು. ಅದಕ್ಕೋಸ್ಕರವೇ ಮರುದಿನ ಮಣಿಶಂಕರ ಮಹಾಶಯರು ಅಣ್ಣಂದಿರ ಶ್ರಾದ್ಧಕ್ಕಾಗಿ ಚಂದ್ರನಾಥನ ಮನೆಗೆ ಬಂದು ಶ್ರಾದ್ಧದ ಕಾರ್ಯದಲ್ಲಿ ಅಗ್ರಭಾಗ ವಹಿಸಿದರೂ ಊಟಮಾಡಲಿಲ್ಲ. ಅಲ್ಲದೆ ತಮ್ಮ ಮನೆಯವರಿಗೂ ಊಟ ಮಾಡಕೂಡದೆಂದು ಕಟ್ಟಾಜ್ಞೆಯನ್ನಿತ್ತಿದ್ದರು. ಬ್ರಾಹ್ಮಣ ಭೋಜನವಾದ ಬಳಿಕ ಚಂದ್ರನಾಥನು ಕೈಜೋಡಿಸಿ ಚಿಕ್ಕಪ್ಪನನ್ನು ಪರಿಪರಿಯಿಂದ ಬೇಡಿಕೊಂಡ. "ಚಿಕ್ಕಪ್ಪ, ನೀವು ನನಗೆ ತಂದೆಯ ಹಾಗೆ. ಬಾಲಕನ ತಪ್ಪನ್ನು ಮನಸ್ಸಿನಲ್ಲಿ ಹಿಡಿಯದೆ ಕ್ಷಮಿಸಬೇಕು."

"ಏನಪ್ಪಾ, ನೀವು ಕಲಕತ್ತೆಯಲ್ಲಿ ಇದ್ದುಕೊಂಡು ಅಭ್ಯಾಸಮಾಡಿ ಬಿ.ಎ., ಎಂ.ಎ. ಪಾಸಾಗಿ ವಿದ್ವಾಂಸರಾಗಿದ್ದೀರಿ, ಬುದ್ಧಿವಂತರಾಗಿದ್ದೀರಿ. ನಾವೋ, ಹಳೆಯಕಾಲದ ಪೆದ್ದರು. ನಮ್ಮೊಡನೆ ನಿಮ್ಮ ಬಳಕೆ ಹೇಗಾದೀತು? ನಮ್ಮ ನಿಮ್ಮ ನಡೆವಳಿ ಹೇಗೆ ಹೊಂದೀತು? ಶಾಸ್ತ್ರಕಾರರು ಹೇಳಿಲ್ಲವೆ - ಬೊಡ್ಡೆಯನ್ನು ಕಡಿದು ಕೊಂಬೆಗಳಿಗೆ ನೀರುಣಿಸಿರಿ ಎಂದು?" ತಂದೆಯಂತಿದ್ದ ಮಣಿಶಂಕರರು ಉತ್ತರವಿತ್ತರು.

ಈ ಶಾಸ್ತ್ರವಚನಕ್ಕೂ ಆಧುನಿಕ ವಿದ್ವಾಂಸನಿಗೂ ಹಳೆಯ ಕಾಲದ ಪೆದ್ದನಿಗೂ ಏನು ಸಂಬಂಧವಿದ್ದಿತೊ! ಚಂದ್ರನಾಥ ಚಿಕ್ಕಪ್ಪನ ಮನಸ್ಸನ್ನು ತಿಳಿದುಕೊಂಡು, ಇನ್ನು ಅವನೊಡನೆ ಯಾವ ಬಗೆಯ ಸಂಬಂಧವನ್ನೂ

ಈ ಕಿರುಮನೆಗೆ ಒಂದು ಕಿಟಕಿಯಿದ್ದಿತು. ಅದರೊಳಗಿಂದ ಅಡುಗೆಯ ಮನೆಯು ಸ್ವಲ್ಪ ಸ್ವಲ್ಪ ಕಾಣುತ್ತಿದ್ದಿತು. ಚಂದ್ರನಾಥ ಅತ್ತಕಡೆಗೆಯೆ ನೋಡುತ್ತ ಕುಳಿತುಕೊಳ್ಳುತ್ತಿದ್ದ. ಅಡುಗೆಯ ಸಾಮಗ್ರಿಯನ್ನು ನೋಡು ವುದಕ್ಕಲ್ಲ, ಅಡಿಗೆ ಮಾಡುವವಳನ್ನು ನೋಡುವುದಕ್ಕೆ. ಅವಳನ್ನು ಅದೇಕೆ ಅಷ್ಟು ನೋಡಬೇಕೆನಿಸುತ್ತಿದ್ದಿತೊ ಅವನಿಗೆ!

ಅಡುಗೆ ಮಾಡುವವಳು ವಿಧವೆ. ನೋಡುವುದಕ್ಕೆ ರೂಪವತಿ. ಆದರೆ ಅವಳ ಮುಖ ದುಃಖಾಗ್ನಿಯಲ್ಲಿ ಬೆಂದು ಬಾಡಿರುವುದೋ ಏನೋ ಎಂಬಂತೆ ತೋರುತ್ತಿದ್ದಿತು. ಹರೆಯ ಇದೆಯೆ ಇಲ್ಲವೆ ಎನ್ನುವುದು ಗೊತ್ತಾಗುತ್ತಿರ ಲಿಲ್ಲ. ಆವಳು ತನ್ನ ಕೆಲಸದಲ್ಲಿ ತಲ್ಲೀನಳಾಗುತ್ತಿದ್ದಳು. ಅವಳ ಬಳಿಯಲ್ಲಿಯೆ ಹತ್ತುವರ್ಷದ ಒಂದು ಹುಡುಗಿ ಕುಳಿತುಕೊಂಡು ಕಾಯಿಸುಲ್ಲೆ ಕೊಚ್ಚಿ ಕೊಡುತ್ತ ಅಡುಗೆಯ ಎಲ್ಲ ಸಾಮಾನು ಒದವಿಸಿಕೊಡಲು ನೆರವಾಗುತ್ತಿದ್ದಳು. ಚಂದ್ರನಾಥನ ಕಣ್ಣು ತೃಪ್ತಿಯಿಲ್ಲದೆ ಇವನ್ನೇ ನೋಡುತ್ತಿದ್ದುವು.

ಅವಳು ಮೊದಮೊದಲು ಕೆಲವು ದಿವಸ ಚಂದ್ರನಾಥನ ಎದುರಲ್ಲಿ ಹಾಯುತ್ತಿರಲಿಲ್ಲ. ಊಟಕ್ಕೆ ಬಡಿಸಿವವಳೆ ಮರೆಯಾಗುತ್ತಿದ್ದಳು. ಬಳಿಕ ಮೆಲ್ಲಮೆಲ್ಲನೆ ಎದುರಲ್ಲಿ ಬರತೊಡಗಿದಳು. ಚಂದ್ರನಾಥ ಅವಳಿಗಿಂತ ಚಿಕ್ಕ ವನು. ಕೆಲವು ದಿನಗಳ ಬಳಕೆಯ ನಂತರ ಆತ್ಮೀಯಭಾವವು ಹುಟ್ಟಿತು. ಆದುದರಿಂದ ಆವಳು ಚಂದ್ರನಾಥನಿಗೆ ಬಡಿಸುತ್ತ ಅವನೆದುರಿಗೆ ಕುಳಿತು ಕೊಳ್ಳುತ್ತಿದ್ದಳು; ತಾಯಿಯಂತೆ ಪ್ರೀತಿಯಿಂದ ಉಣಿಸುತ್ತಿದ್ದಳು.

ಚಂದ್ರನಾಥನಿಗೆ ತನ್ನ ತಾಯಿಯ ನೆನಪಿರಲಿಲ್ಲ. ತಾಯಿಯಿಲ್ಲದ ಚಂದ್ರನಾಥ ಕೆಲವು ದಿವಸ ತಂದೆಯ ತೊಡೆಯ ಮೇಲೆಯೆ ಪ್ರೀತಿಯಿಂದ ಬೆಳೆದ. ತಾಯಿಯ ಸ್ಥಾನವನ್ನು ತಂದೆ ತುಂಬಿದ್ದರೂ ಅವನಲ್ಲಿ ಈ ತೆರನಾದ ಸ್ನೇಹವಿರಲಿಲ್ಲ.

ತಂದೆಯ ಮರಣದಿಂದ ಚಂದ್ರನಾಥನ ಹೃದಯದಲ್ಲಿ ತೆರವಾದ ಸ್ಥಳವು ಮಾತೃಸ್ನೇಹದಿಂದ - ಅಭಿನವ ಮಾತೃಸ್ನೇಹಸುಧೆಯಿಂದ - ತುಂಬಿ ಅವನನ್ನು ಎರೆಯತೊಡಗಿತು.

ಒಂದು ದಿನ ಚಂದ್ರನಾಥ ಹರಿದಯಾಲರನ್ನು ಕೇಳಿದ — "ನಿಮಗೆ

ನೆಂಟರಿಷ್ಟರು, ಬಂಧುಬಳಗದವರು ಯಾರೂ ಇಲ್ಲವೆಂದು ತಿಳಿದಿದ್ದೆ; ಆದರೆ ಇವರು ಇದ್ದಾರಲ್ಲ? ಇವರಾರು?"

"ಇವಳು ಬ್ರಾಹ್ಮಣಿ'' ಎಂದರು ಹರಿದಯಾಲರು.

"ನಿಮ್ಮ ನೆಂಟರೇನು?''

"ಅಲ್ಲ.''

"ಹಾಗಾದರೆ ಇವರಾರು? ಹೇಗೆ ಬಂದರು ಇಲ್ಲಿಗೆ?"

"ಕತೆ ಬಹಳ ದೊಡ್ಡದು. ಸಂಕ್ಷೇಪದಲ್ಲಿ ಹೀಗೆ ಹೇಳಬಹುದು—ಮೂರು ವರ್ಷಗಳ ಹಿಂದೆ ತನ್ನ ಗಂಡ ಮತ್ತು ಈ ಹುಡುಗಿಯ ಜೊತೆಯಲ್ಲಿ ತೀರ್ಥಯಾತ್ರೆಗಾಗಿ ಇಲ್ಲಿಗೆ ಬಂದಿದ್ದಳು. ಇಲ್ಲಿಯೆ ಅವಳ ಗಂಡ ತೀರಿದ. ಊರಿಗೆ ಹೊರಟು ಹೋಗಬೇಕೆಂದರೆ ನೆಂಟರು, ಬಳಗದವರು ಯಾರೂ ಇದ್ದಿಲ್ಲ. ಮುಂದೆ ನಿನಗೆ ಗೊತ್ತೇ ಇದೆ; ಇಲ್ಲಿಯೆ ಇದ್ದಾಳೆ."

"ನಿಮಗೆ ಇವಳ ಗುರುತು ಹೇಗೆ ಆಯಿತು?''

"ಮಣಿಕರ್ಣಿಕಾ ಘಟ್ಟದ ಬಳಿಯಲ್ಲಿ ಭಿಕ್ಷೆ ಬೇಡುತ್ತಿದ್ದಳು.''

ಚಂದ್ರನಾಥ ಸ್ವಲ್ಪಹೊತ್ತು ಯೋಚಿಸಿ "ಇವಳ ಮನೆ ಎಲ್ಲಿದೆ ಎಂಬುದು ನಿಮಗೆ ಗೊತ್ತಿದೆಯೆ?" ಎಂದು ಕೇಳಿದ.

"ಸರಿಯಾಗಿ ಗೊತ್ತಿಲ್ಲ; ನವದ್ವೀಪದ ಬಳಿಯಲ್ಲಿ ಎಲ್ಲಿಯೊ ಇದೆ."

ಎರಡು ದಿನಗಳ ಮೇಲೆ ಊಟಕ್ಕೆ ಕುಳಿತಾಗ ಬ್ರಾಹ್ಮಣಿಯ ಮುಖ ನೋಡುತ್ತ "ನಿಮ್ಮೂರು ಯಾವುದಮ್ಮಾ? ಇಲ್ಲಿಗೆ ಹೇಗೆ ಬಂದಿರಿ?'' ಎಂದು ಕೇಳಿದ ಚಂದ್ರನಾಥ.

ಬ್ರಾಹ್ಮಣಿಯ ಮುಖ ಕಳೆಗುಂದಿತು. ಈ ಪ್ರಶ್ನೆಯ ಕಾರಣ ಅವಳಿಗೆ ತಿಳಿಯದೆ ಇರಲಿಲ್ಲ. ಈ ಮಾತು ಕೇಳಿಸಲಿಲ್ಲವೇನೋ ಎಂಬಂತೆ ಲಗುಬಗೆಯಿಂದ ಎದ್ದುನಿಂತು "ಹೋಗಿ ಹಾಲು ತೆಗೆದುಕೊಂಡು ಬರಲೋ?'' ಎಂದಳು.

ಹಾಲು ಇಷ್ಟು ಬೇಗ ತರಬೇಕಾದುದೇನೂ ಇರಲಿಲ್ಲ. ಕೊಂಚ ಯೋಚಿಸಲಿಕ್ಕೆಂದೆ ಅವಳು ಅಡುಗೆಯ ಮನೆಗೆ ಹೋದಳು. ಅಲ್ಲಿ ಅವಳ

ಮಗಳು – ಸರಯೂ – ಹಾಲು ಕಾಯಿಸುತ್ತಿದ್ದಳು. ತಾಯಿಯ ಕುಂದಿದ ಮುಖದ ಕಡೆಗೆ ಅವಳ ಲಕ್ಷ್ಯವು ಹೋಗಲಿಲ್ಲ. ತಾಯಿ ಮಗಳ ಮುಖವ ನ್ನೊಮ್ಮೆ ನೋಡಿ ಕೈಯಲ್ಲಿ ಹಾಲಿನ ಬಟ್ಟಲು ತೆಗೆದುಕೊಳ್ಳುತ್ತ ನಿಡಿದಾದ ಒಂದು ಉಸಿರಿನೊಂದಿಗೆ ಮನದಲ್ಲಿಯೆ "ದೀನದಯಾಳು, ದುಃಖಹರಣ, ಅಂತರ್ಯಾಮಿಯೆ, ಕ್ಷಮಿಸು" ಎಂದಳು. ಆಮೇಲೆ ಹಾಲಿನ ಬಟ್ಟಲು ತಂದು ಅವನ ಮುಂದಿಟ್ಟು ಕುಳಿತುಕೊಂಡಳು. ಚಂದ್ರನಾಥ ಮತ್ತೆ ಅದೇ ಪ್ರಶ್ನೆಯನ್ನು ಕೇಳಿದ.

ಒಂದೊಂದಾಗಿ ಕೇಳಿ ತಿಳಿದುಕೊಂಡ ನಂತರ ಕೊನೆಗೆ ''ನೀವು ನಿಮ್ಮ ಮನೆಗೆ ತಿರುಗಿ ಏಕೆ ಹೋಗಲಿಲ್ಲ? ಅಲ್ಲಿ ಯಾರೂ ಇಲ್ಲವೇನು?'' ಎಂದು ಕೇಳಿದ.

''ಒಂದು ತುತ್ತು ಅನ್ನ ಹಾಕುವವರು ಯಾರೂ ಇಲ್ಲ.''

ಚಂದ್ರನಾಥ ಸ್ವಲ್ಪಹೊತ್ತು ತಲೆತಗ್ಗಿಸಿಕೊಂಡು ಒಂದೊಂದೇ ತುತ್ತು ಬಾಯಲ್ಲಿ ಹಾಕಿಕೊಳ್ಳುತ್ತ ಯೋಚಿಸಿದ. ಬಳಿಕ ಕೇಳಿದ—"ಈ ಹುಡುಗಿ ಇದ್ದಾಳಲ್ಲ. ಈಕೆಯ ಲಗ್ನ ಹೇಗೆ ಮಾಡುವಿರಿ?"

''ವಿಶ್ವೇಶ್ವರನೇ ಬಲ್ಲ!'' ನಿಡಿದಾದ ಉಸಿರೊಂದನ್ನು ಹೊರಗೆಡಹಿ ಹೇಳಿದಳು.

ಚಂದ್ರನಾಥನ ಊಟವಾಗಿ ಬಿಟ್ಟಿದ್ದಿತು. ತಲೆಯನ್ನು ಮೇಲಕ್ಕೆತ್ತಿ ''ಇದುವರೆಗೆ ನಾನು ನಿಮ್ಮ ಮಗಳನ್ನು ನೋಡಿಲ್ಲ; ಆದರೆ ಹರಿದಯಾಳರು 'ಆಕೆ ಬಹಳ ಶಾಂತಸ್ವಭಾವದವಳು, ಶಿಷ್ಟಳು' ಎಂದು ಹೇಳುತ್ತಾರೆ. ನೋಡಲು ಚೆಲುವೆಯಾಗಿದ್ದಾಳಲ್ಲವೆ?'' ಎಂದ.

ಬ್ರಾಹ್ಮಣಿ ನಸುನಕ್ಕು ಎಂದಳು—''ನಾನು ತಾಯಿ. ತಾಯಿಯ ಕಣ್ಣನ್ನು ನಂಬುವುದೆಂತು? ತಾಯಿಗೆ ಮಕ್ಕಳು ಸುಂದರವಾಗಿಯೆ ಕಾಣು ತ್ತವೆ. ಆದರೂ ಸರಯೂ ಕುರೂಪಿಯಲ್ಲವೆನ್ನಬಹುದು." ಮನಸ್ಸಿನಲ್ಲಿಯೆ ''ಕಾಶಿಗೆ ಇಷ್ಟು ಜನರು ಬರುತ್ತಾರೆ, ಹೋಗುತ್ತಾರೆ. ಇಂತಹ ರೂಪವನ್ನು ಮಾತ್ರ ನಾನು ಯಾರಲ್ಲಿಯೂ ಕಂಡಿಲ್ಲ'' ಎಂದುಕೊಂಡಳು.

ಈ ಸಂಭಾಷಣೆಯಾಗಿ ಮೂರು ನಾಲ್ಕು ದಿನಗಳು ಸಂದಿದ್ದುವು. ಒಂದು ದಿನ ಮುಂಜಾವಿನಲ್ಲಿ ಚಂದ್ರನಾಥ ಸರಯೂನನ್ನು ಚೆನ್ನಾಗಿ

ನೋಡಿದ. ಇಂತಹ ರೂಪ ಪ್ರಪಂಚದಲ್ಲಿ ಸಿಕ್ಕುವುದು ದುರ್ಲಭವೆನಿಸಿತು ಅವನಿಗೆ. ಸರಯೂ ಅಡುಗೆಯ ಮನೆಯಲ್ಲಿ ಕುಳಿತು ಕಾಯಿಪಲ್ಲೆ ಹೆಚ್ಚು ತ್ತಿದ್ದಳು. ಮತ್ತಾರೂ ಅಲ್ಲಿರಲಿಲ್ಲ. ತಾಯಿ ಗಂಗಾಸ್ನಾನಕ್ಕೆ ಹೋಗಿದ್ದಳು. ಹರಿದಯಾಲರು ತಮ್ಮ ನಿತ್ಯನಿಯಮಾನುಸಾರ ಯಾತ್ರಿಕರನ್ನು ಹುಡುಕಲು ಹೋಗಿದ್ದರು.

ಚಂದ್ರನಾಥ ಸರಯೂನ ಬಳಿಗೆ ಹೋಗಿ "ಸರಯೂ ?" ಎಂದ.

ಸರಯೂ ಬೆಚ್ಚಿಬಿದ್ದು ಕಕ್ಕಾವಿಕ್ಕಿಯಾಗಿ "ಆಂ" ಎಂದಳು.

"ಅಡುಗೆ ಮಾಡಲು ಬರುತ್ತದೆಯಲ್ಲವೆ ನಿನಗೆ ?"

"ಹುಂ" ಸರಯೂ ತಲೆಯಲ್ಲಾಡಿಸಿ ನುಡಿದಳು.

"ಏನೇನು ಮಾಡಲಿಕ್ಕೆ ಬರುತ್ತದೆ ?"

ಸರಯೂ ಉತ್ತರವನ್ನೀಯಲಿಲ್ಲ. ಏಕೆಂದರೆ ಈ ಪ್ರಶ್ನೆಗೆ ಉತ್ತರ ಕೊಟ್ಟರೆ ಇನ್ನೂ ಎಷ್ಟೋ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದೀತು.

ಚಂದ್ರನಾಥನಿಗೆ ಆಕೆಯ ಭಾವನೆಗಳು ಗೊತ್ತಾದುವು. ಆದುದರಿಂದ ಅವನು ಬೇರೆ ಬಗೆಯ ಪ್ರಶ್ನೆಮಾಡಲಾರಂಭಿಸಿದ. "ನೀನು, ನಿಮ್ಮಮ್ಮ ಇಬ್ಬರೂ ಇಲ್ಲಿ ಕೆಲಸಮಾಡುತ್ತೀರಲ್ಲವೆ ?"

ಸರಯೂ ತಲೆಯಲ್ಲಾಡಿಸಿ "ಹೌದು" ಎಂದಳು.

"ತಿಂಗಳಿಗೆ ಸಂಬಳ ಎಷ್ಟು ?"

"ಅಮ್ಮನಿಗೆ ಸಂಬಳ ಸಿಕ್ಕುತ್ತದೆ; ನನಗೆ ಕೇವಲ ಊಟ ಮಾತ್ರ."

"ಊಟಕ್ಕಾಗಿ ಮಾತ್ರ ನೀನು ಕೆಲಸಮಾಡುತ್ತೀಯಾ ?"

ಸರಯೂ ಸುಮ್ಮನಾದಳು.

"ನಾನು ನಿನಗೆ ಊಟಕ್ಕೆ ಕೊಟ್ಟರೆ, ನನ್ನ ಕೆಲಸವನ್ನು ಮಾಡು ತ್ತೀಯಾ ?" ಎಂದು ಕೇಳಿದ ಚಂದ್ರನಾಥ.

ಮೆಲ್ಲಗೆ "ತಾಯಿಯನ್ನು ಕೇಳುತ್ತೇನೆ" ಎಂದಳು.

"ಹಾಂ, ಮರೆಯದೆ ಕೇಳು."

ಅದೇ ದಿನ ಹರಿದಯಾಲರೊಡನೆಯೂ ಕೆಲವು ಮಾತುಗಳನ್ನಾಡಿ ತನ್ನ ಆಳುಮಗನಿಗೆ ಚಂದ್ರನಾಥ ಹೀಗೆ ಪತ್ರ ಬರೆದ :

"ನಾನೀಗ ಕಾಶಿಯಲ್ಲಿದ್ದೇನೆ. ಇನ್ನೊಂದು ತಿಂಗಳಿನಲ್ಲಿ ಇಲ್ಲಿಯೇ

ಮದುವೆಯಾಗಬೇಕೆಂದು ನಿಶ್ಚಯಿಸಿದ್ದೇನೆ. ಮಾವಂದಿರಿಗೂ ಈ ಮಾತನ್ನು ತಿಳಿಸಿ, ರೂಪಾಯಿ, ಆಭರಣ ಇತ್ಯಾದಿ ತೆಗೆದುಕೊಂಡು ಬೇಗನೆ ಹೊರಟು ಬಾ."

ಅದೇ ತಿಂಗಳಲ್ಲಿ ಸರಯೂನ ಕೂಡ ಚಂದ್ರನಾಥನ ವಿವಾಹವಾಗಿ ಹೋಯಿತು.

ಮದುವೆಯಾದ ಮೇಲೆ ಗಂಡನ ಮನೆಗೆ ಹೊರಡುವ ಸಮಯ ಬಂದಿತು. ಆಗ ಸರಯೂ ಅಳುತ್ತ ಕೇಳಿದಳು—"ಅಮ್ಮನ ವ್ಯವಸ್ಥೆ ಹೇಗಿನ್ನು?"

"ನಮ್ಮ ಜೊತೆಯಲ್ಲಿಯೆ ಬರುವರು, ಅಲ್ಲವೆ?"

ಈ ಮಾತುಗಳು ಬ್ರಾಹ್ಮಣಿಯ ಕಿವಿಗಳ ವರೆಗೂ ಹೋದುವು. ಅವಳು ಮಗಳನ್ನು ಏಕಾಂತದಲ್ಲಿ ಕರೆದು ಹೇಳಿದಳು—"ಸರಯೂ, ಅಲ್ಲಿಗೆ ಹೋದ ಮೇಲೆ ನನ್ನನ್ನು ಯಾವಾಗಲೂ ನೆನೆಸುತ್ತಿರು; ಆದರೆ ನನ್ನ ಹೆಸರನ್ನು ಮಾತ್ರ ಉಚ್ಚರಿಸಬೇಡ. ನಾನು ಬದುಕಿರುವ ವರೆಗೂ ಕಾಶಿಯನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ. ಹಾಂ, ನೀನೊಂದು ವೇಳೆ ಇಲ್ಲಿಗೆ ಬಂದರೆ ನನ್ನ ಭೆಟ್ಟಿಯಾಗುವುದು."

ಸರಯೂ ಅಳತೊಡಗಿದಳು.

ತಾಯಿ ಸೆರಗಿನಿಂದ ಮಗಳ ಕಣ್ಣು ಒರೆಸುತ್ತ, ಅವಳನ್ನು ರಮಿಸುತ್ತ ಗಂಭೀರವಾಗಿ ಎಂದಳು—"ಮಗೂ, ಎಲ್ಲವೂ ಗೊತ್ತಿದ್ದು ಹೀಗೆ ಅಳಬೇಕೆ!"

ತಾಯಿಯ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಅಳುತ್ತ "ಅಮ್ಮಾ-" ಎಂದಳು ಸರಯೂ.

"ತಾಯಿಗಾಗಿ ತಾಯಿಯನ್ನು ಮರೆತರೆ ಮಾತ್ರ ನಿನ್ನ ಮಾತೃಭಕ್ತಿ ಶ್ರೇಷ್ಠವೆನಿಸುವುದು, ಮಗೂ."

ಚಂದ್ರನಾಥನು ಒತ್ತಾಯ ಪಡಿಸಿದರೂ ತಾನು ಕಾಶಿಯನ್ನು ಬಿಟ್ಟು ಎಲ್ಲಿಗೂ ಹೋಗಲಾರೆನೆಂದು ಬ್ರಾಹ್ಮಣಿ ಗಟ್ಟಿಯಾಗಿ ಹೇಳಿಬಿಟ್ಟಳು.

"ಎಲ್ಲಿಗೂ ಹೋಗಬಾರದೆಂಬ ಇಚ್ಛೆಯಿದ್ದರೆ ತಾವು ಕಾಶಿಯಲ್ಲಿಯೆ ವಾಸವಾಗಿರಿ. ಆದರೆ ಸ್ವತಂತ್ರವಾಗಿ ಇರಿ" ಚಂದ್ರನಾಥ ಸ್ಥಿರಚಿತ್ತದಿಂದ ನುಡಿದ.

ಆದರೆ ಬ್ರಾಹ್ಮಣಿಗೆ ಈ ಮಾತೂ ಒಪ್ಪಿಗೆಯಾಗಲಿಲ್ಲ. ಅವಳೆಂದಳು—“ ಹರಿದಯಾಲರು ನನ್ನನ್ನು ಮಗಳಂತೆ ನೋಡಿಕೊಳ್ಳುತ್ತಿದ್ದಾರೆ. ನಾನೂ ಅವರನ್ನು ತಂದೆಯಂತೆ ಭಕ್ತಿಯಿಂದ ಕಾಣುತ್ತಿದ್ದೇನೆ. ಅತಿ ಕಷ್ಟಕಾಲ ದಲ್ಲಿ ಅವರು ನನಗೆ ಆಶ್ರಯವಿತ್ತರು. ಅವರನ್ನು ಬಿಟ್ಟು ಎಲ್ಲಿಗೂ ಹೋಗಲಾರೆ.”

ಈ ದುಃಖಿನಿಯಲ್ಲಿ ಆತ್ಮಗೌರವದ ಜ್ಞಾನವನ್ನು ಚಂದ್ರನಾಥ ಕಂಡು ಕೊಂಡ. ಆಕೆ ತಾನಾಗಿ ಬಯಸಿ ಯಾರ ದಯೆಯನ್ನೂ ಸ್ವೀಕರಿಸುವುದಿಲ್ಲ ವೆಂದು ಗೊತ್ತಾದ ಮೇಲೆ ಚಂದ್ರನಾಥ ಸರಯೂ ಒಬ್ಬಳನ್ನೆ ಜೊತೆಗೆ ಕರೆದು ಕೊಂಡು ತನ್ನ ಮನೆಗೆ ಹಿಂತಿರುಗಿ ಬಂದ.

ಊರಿಗೆ ಬಂದ ಮೇಲೆ ಸರಯೂ ತನ್ನ ದೊಡ್ಡ ಮನೆಯನ್ನು ನೋಡಿ ದಳು. ಅದೆಷ್ಟೊ ಸಾಮಾನುಗಳು ಮನೆಯಲ್ಲಿದ್ದುವು. ಎಲ್ಲವನ್ನೂ ನೋಡಿ ಅವಳಿಗೆ ಹಿಡಿಸಲಾರದಷ್ಟು ಹರ್ಷ, ವಿಸ್ಮಯ! ಅವಳು ಮನದಲ್ಲಿಯೇ ‘‘ನನ್ನ ಮೇಲೆಷ್ಟು ದಯೆ, ಎಷ್ಟು ಅನುಗ್ರಹ ! ’’ ಎಂದಳು.

ಚಂದ್ರನಾಥ ಹೆಂಡತಿಯನ್ನು ಆದರದಿಂದ ಕೇಳಿದ—‘‘ಮನೆಯೆಲ್ಲ ವನ್ನೂ ನೋಡಿದೆಯಾ ? ಮನಸ್ಸಿಗೆ ಬಂದಿತೆ ?’’

ಸರಯೂ ಸ್ವಲ್ಪ ನಾಚಿ ಸೆರಗಿನಿಂದ ಮುಖ ಮುಚ್ಚಿಕೊಂಡಳು. ತಲೆ ಯನ್ನು ಬಾಗಿಸಿಕೊಂಡು ಸುಮ್ಮನೆ ನಿಂತಳು. ಹೆಂಡತಿಯ ಮನಸ್ಸಿನೊಳ ಗಿನ ಭಾವವನ್ನು ಅರಿತುಕೊಳ್ಳಬೇಕೆಂದೂ ಆಕೆಯ ಕಂಠಸ್ವರವನ್ನು ಆಲಿಸ ಬೇಕೆಂದೂ ಚಂದ್ರನಾಥನಿಗೆ ಆತುರ, ಇಚ್ಛೆ. ತನ್ನ ಎರಡೂ ಕೈಗಳಿಂದ ಆಕೆಯ ಮುಖವನ್ನು ಮೇಲಕ್ಕೆತ್ತಿ ಕೇಳಿದ—‘‘ಹೇಳು, ಮನಸ್ಸಿಗೆ ಬಂದಿತೊ ಇಲ್ಲವೋ ?”

ನಾಚಿಕೆಯಿಂದ ಅವಳ ಮುಖ ಕೆಂಪೇರಿತು. ತನ್ನರಸನು ಮೇಲಿಂದ ಮೇಲೆ ಕೇಳಲಾರಂಭಿಸಿದ್ದರಿಂದ ಹೇಗೊ ನುಡಿದುಬಿಟ್ಟಳು – “ಇದೆಲ್ಲವೂ ನಿಮ್ಮದೆಯೆ ? ’’

ಚಂದ್ರನಾಥ ನಕ್ಕು ಅದೇ ನುಡಿಗಳನ್ನು ಉಚ್ಚರಿಸಿದ—“ಹೌದು, ಇದೆಲ್ಲವೂ ನಿಮ್ಮದೆ ”

## ೩

ಹೀಗೆಯೆ ಕೆಲವು ದಿನ ಕಳೆದುಹೋದುವು. ಈಗ ಸರಯೂ ದೊಡ್ಡವ ಳಾಗಿದ್ದಾಳೆ. ಪತಿಯ ಸೇವೆ ಶುಶ್ರೂಷೆ ಮಾಡುವುದನ್ನು ಅರಿತುಕೊಂಡಿದ್ದಾಳೆ. ಹೇಳುವ ಮೊದಲೆ ತನ್ನ ಮನದೊಳಗಿನ ಮಾತುಗಳನ್ನು ಸರಯೂ ತಿಳಿದು ಕೊಂಡುಬಿಡುತ್ತಾಳೆಂದು ಚಂದ್ರನಾಥನಿಗೆ ಗೊತ್ತಾಗಿಹೋಗಿದೆ. ಅವಳು ಬರಿಯ ದಾಸಿಯೆ ಆಗಿದ್ದರೂ ಚಂದ್ರನಾಥನಿಗೆ ಇಂತಹ ದಾಸಿ ಪ್ರಪಂಚವೆಲ್ಲ ವನ್ನು ಹುಡುಕಿದ್ದರೂ ಸಿಕ್ಕುತ್ತಿರಲಿಲ್ಲ. ಕೇವಲ ದಾಸಿಯೋರ್ವಳು ಬೇಕೆಂದು ಯಾರೂ ವಿವಾಹ ಮಾಡಿಕೊಳ್ಳುವುದಿಲ್ಲ. ಪತಿ ದಾಸಿಗಿಂತಲೂ ಯಾವುದೊ ಒಂದು ಹೆಚ್ಚಿನ ವಸ್ತುವನ್ನು ಪತ್ನಿಯಲ್ಲಿ ಬಯಸುತ್ತಾನೆ. ಹೆಂಡತಿಯ ನಡತೆ ದಾಸಿಯ ನಡತೆಯಂತೆ ಇರದಿರುವುದು ಒಳಿತು ಎಂದೆನಿಸುತ್ತದೆ. ಸರಯೂನ ನಡತೆ ಅತ್ಯಂತ ಮಧುರ, ನಿರ್ದ್ವಂದ್ವ. ಆದರೆ ಅತ್ಯಂತ ಸಮೀ ಪದ ಪರಿಪೂರ್ಣವಾದ ದಾಂಪತ್ಯದ ಸುಖ ಅದರಲ್ಲಿ ಕಾಣುತ್ತಿರಲಿಲ್ಲ. ಅವರ ಮಿಲನದಲ್ಲಿ ಆದರ–ಪ್ರೀತಿಗಳಿದ್ದರೂ ಒಂದು ಬಗೆಯ ಅಂತರವಿತ್ತು. ಅದು ಯಾವ ಬಗೆಯಾಗಿಯೂ ಮಾಯವಾಗುವಂತೆ ತೋರಲಿಲ್ಲ. ಒಂದು ದಿನ ಆಕಸ್ಮಾತ್ ಚಂದ್ರನಾಥ ಕೇಳಿಬಿಟ್ಟ—"ಸರಯೂ, ನೀನು ಇಷ್ಟೇಕೆ ಹೆದರಿ ಕೊಂಡಿರುವುದು ? ನಾನೇನು ದುರ್ವ್ಯವಹಾರ ಮಾಡುತ್ತೇನೆಯೆ ?"

ಅವಳು ಮನದಲ್ಲಿಯೆ "ಈ ಮಾತಿನ ಉತ್ತರವನ್ನು ನೀವರಿಯ ಲಾರಿರಾ ?" ಎಂದುಕೊಂಡು ಯೋಚಿಸತೊಡಗಿದಳು. "ನೀವು ದೇವರು, ದೊಡ್ಡವರು. ನಾನು ತಿರಸ್ಕೃತಳು. ನೀವು ಪ್ರತಿಪಾಲಕರು. ನಾನು ಆಶ್ರಿತಳು. ನೀವು ದಾನಿ. ನಾನು ಭಿಕ್ಷುಕಿ."

ಸರಯೂನ ಹೃದಯ ಕೃತಜ್ಞತೆಯಿಂದ ತುಂಬಿ ಹೋಗಿದ್ದಿತು. ಆದುದ ರಿಂದಲೆ ಆಕೆಯ ಪ್ರೇಮವು ತಲೆಯನ್ನು ಮೇಲಕ್ಕೆತ್ತಗೊಡುತ್ತಿರಲಿಲ್ಲ. ಅದು ಅಂತಃಸಲಿಲ ಫಲ್ಗುವಿನಂತೆ ಹೃದಯದಲ್ಲಿಯೆ ಜುಳುಜುಳು ಹರಿಯುತ್ತಿದ್ದಿತು. ಒಡೆದು ಘೋರ ಗರ್ಜನೆ ಮಾಡುತ್ತ ಹೊರಬಿದ್ದು ಬರುತ್ತಿರಲಿಲ್ಲ. ಕಲಕಲ ನಿನಾದವನ್ನು ಮಾಡುತ್ತ ಅವಿಶ್ರಾಂತವಾಗಿ ಅವಿಚ್ಛಿನ್ನವಾಗಿ ಹರಿಯುತ್ತಿದ್ದಿತು. ಚಂದ್ರನಾಥನಿಗೆ ಇದು ಗೊತ್ತಿರಲಿಲ್ಲ. ಜೀವನದಲ್ಲಿ ಪರಮಾತ್ಮನನ್ನು ಹುಡು

ಕಿದರೂ ಸಿಕ್ಕದೆ ಇದ್ದ ದುರ್ಭಾಗ್ಯನಂತೆ ಚಂದ್ರನಾಥನಿಗೆ ಸರಯೂನ ಹೃದಯ ದಲ್ಲಿದ್ದ ಪ್ರೇಮವು ಹುಡುಕಿದರೂ ಕಾಣಲಿಲ್ಲ. ಆದರೆ ಅವನಿಗೆ ಈ ಹೊತ್ತು ಸರಯೂನ ಪದ್ಮದಂಥ ದೊಡ್ಡ ದೊಡ್ಡ ಕಣ್ಣುಗಳಲ್ಲಿ ಜಲಬಿಂದುಗಳು ದೀಪದ ಬೆಳಕಿನಲ್ಲಿ ಅಕಸ್ಮಾತ್ ಕಂಡುವು. ಅವನು ಕಾತರನಾದ. ಅಂತಃಕರಣವು ಉಕ್ಕೇರಿ ಬಂದಿತು. ಕೂಡಲೆ ಅವಳನ್ನು ಸೆಳೆದುಕೊಂಡ. ಅವನ ಎದೆಯ ಮೇಲೆ ತನ್ನ ತಲೆಯನ್ನಿಟ್ಟಳು ಸರಯೂ. ಅವಳ ತಲೆಯನ್ನು ತನ್ನ ಎರಡೂ ಕರಗಳಿಂದ ಮೇಲಕ್ಕೆತ್ತಿ "ಹೋಗಲಿ ಬಿಡು. ಆ ಮಾತುಗಳನ್ನು ಕಟ್ಟಿ ಕೊಂಡು ಅಳಬೇಕೆ?" ಎಂದು ರಮಿಸತೊಡಗಿದ. ಸರಯೂಗೆ ತನ್ನ ಮುಚ್ಚಿದ ಕಣ್ಣುಗಳನ್ನು ನಿಡಿದಾದ ಉಸಿರೊಂದು ಸ್ಪರ್ಶಿಸಿದಂತಾಯಿತು.

"ಒಂದು ಸಲ ನನ್ನ ಕಡೆ ನೋಡು" ಎಂದ ಚಂದ್ರನಾಥ. ಮುಚ್ಚಿದ ಕಣ್ಣುರೆಪ್ಪೆಗಳನ್ನು ಮತ್ತಿಷ್ಟು ಜೋರಿನಿಂದ ಮುಚ್ಚಿಕೊಂಡಳು ಸರಯೂ. ತನ್ನ ಇಷ್ಟದೇವತೆಯನ್ನು ನೋಡುವುದಾಗಲಿಲ್ಲ ಅವಳಿಂದ. ಕಣ್ಣೆವೆಗಳೊಳ ಗಿಂದ ಒಂದೆರಡು ಮುತ್ತಿನ ಹನಿ ಹೊರಬಿದ್ದು ಬಂದುವು ಮಾತ್ರ. ಅವು ಗಳಲ್ಲಿಯೆ ಪ್ರಿಯತಮನ ದರ್ಶನವಾಯಿತೇನೊ!

ನಿಡಿದಾದ ಉಸಿರೆಳೆದುಕೊಂಡು ಚಂದ್ರನಾಥನೆಂದ—"ಸರಯೂ, ನಿನಗೆ ಬಹಳ ಅಂಜಿಕೆಯಾಗುತ್ತದೆಯೆ? ಆದುದರಿಂದಲೇ ನೀನು ನನ್ನನ್ನು ನೋಡಲಾರೆಯಾ? ನೋಡಿದ್ದರೆ ಚನ್ನಾಗುತ್ತಿತ್ತು ಸರಯೂ. ಹೋಗಲಿ, ಒಂದು ಕೆಲಸ ಮಾಡು. ನಾನು ಮಲಗಿದಾಗ ನನ್ನನ್ನು ಚನ್ನಾಗಿ ನೋಡು; ಎಂದರೆ ನಾನು ಅಂಜಿಕೆ ಬರುವಂಥ ಪ್ರಾಣಿಯಲ್ಲವೆಂದು ಗೊತ್ತಾಗುವುದು. ನೀನು ನನ್ನ ಎದೆಯ ಮೇಲೆ ತಲೆಯನ್ನಿಟ್ಟುಕೊಂಡು ನಿಂತಿದ್ದೀಯಾ. ಎದೆಗೆ ಕಿವಿ ಹಚ್ಚಿ ಕೇಳು. ಏನೂ ನಿನಗೆ ಕೇಳಿಸುವುದಿಲ್ಲವೆ? ಇದು ವರೆಗೆ ನೀನು ನನ್ನನ್ನು ಚೆನ್ನಾಗಿ ಅರಿತುಕೊಂಡಿಲ್ಲವೆಂಬುದನ್ನು ನೋಡಿ ವ್ಯಸನವೆನಿಸುತ್ತದೆ, ಸರಯೂ."

ಸರಯೂಗೆ ಮಾತನಾಡುವುದಾಗಲಿಲ್ಲ. ಮನದಲ್ಲಿಯೇ ಸ್ವಾಮಿಯ ಚರಣಾರವಿಂದಗಳ ಮೇಲೆ ಮಸ್ತಕವನ್ನಿಟ್ಟು ವಂದಿಸಿ ಎಂದಳು—"ನಾನು ನಿಮ್ಮ ಚರಣ ದಾಸಿ. ದಾಸಿಗೆ ದಾಸಿಯಂತೆಯೆ ಇರಲು ಕೊಡಿ."

೪

ಚಂದ್ರನಾಥನ ಅತ್ತೆ ಹರಕಾಲಿಗೆ ಈಗ ಸುಖವೆನ್ನುವುದು ಉಳಿಯದಂತಾಯಿತು. ಪರಮಾತ್ಮ ಅವಳನ್ನು ದುಃಖದಲ್ಲಿಯೆ ದೂಡಿಬಿಟ್ಟಿದ್ದ. ಕೆಲವರಿಗೆ ಈ ಸಂಸಾರವು ಮುಳ್ಳುಗಳಿಂದ ತುಂಬಿದ ಅರಣ್ಯವೆನಿಸುತ್ತದೆ. ಅವರು ತಮಗಾಗಿ ಅದರೊಳಗೇ ಒಂದು ಮಾರ್ಗವನ್ನು ಹುಡುಕಿಕೊಂಡು ಮುಂದೆ ಸಾಗಬೇಕಾಗುವುದು. ಕೆಲವರಿಗೆ ಮಾರ್ಗವು ಸಿಕ್ಕುವುದು. ಇನ್ನು ಹಲವರಿಗೆ ಸಿಕ್ಕುವುದಿಲ್ಲ. ಹರಕಾಲಿಯೂ ಈ ಕಂಟಕಗಳಿಂದ ತುಂಬಿದ ಸಂಸಾರದಲ್ಲಿ ಚಿಕ್ಕದಾದ ಒಂದು ಮಾರ್ಗವನ್ನು ಹುಡುಕುತ್ತಿದ್ದಳು. ಚಂದ್ರನಾಥನ ತಂದೆ ತೀರಿಹೋದ ಮೇಲೆ ಆವಳಿಗೊಂದು ಒಳ್ಳೆಯ ಹಾದಿ ದೊರೆತಿದ್ದಿತು; ಆದರೆ ಚಂದ್ರನಾಥನ ವಿವಾಹ, ಚಂದ್ರನಾಥನ ಹೆಂಡತಿ ಸರಯೂ, ಚಂದ್ರನಾಥ-ಸರಯೂ ಅವರ ಪ್ರೇಮ, ಮೊದಲಾದುವು ಆಕೆಯ ಮಾರ್ಗದಲ್ಲಿ ಬಂಡೆಗಲ್ಲುಗಳಾದುವು. ಹರಕಾಲಿಯ ತಂಗಿಯ ಐದು ವರ್ಷದ ಹುಡುಗಿಯೊಂದು ತನ್ನ ತಂದೆಯ ಮನೆಯಲ್ಲಿ ಬೆಳೆದು ಹತ್ತು ವರುಷದ್ದಾಗಿದ್ದಿತು. ಈಗ ಆ ಮಾತು ತೆಗೆಮಕೊಂಡು ಏನು ಪ್ರಯೋಜನ? ಬಿಟ್ಟೇ ಬಿಡೋಣ ಅವನ್ನು. ಇವೆಲ್ಲ ಕಾರಣಗಳಿಂದ ಹರಕಾಲಿಯ ಮನದಲ್ಲಿ ಮೂಡಿ ಬೆಳೆಯುತ್ತಲಿದ್ದ ಸುಖಶಾಂತಿಗಳು ಕಂದಿ ಕುಂದಿಹೋದುವು.

ಈಗಲೂ ಮನೆಗೆ ಹರಕಾಲಿಯೆ ಒಡತಿ; ಆಕೆಯ ಪತಿಯೆ ಒಡೆಯ. ಎಲ್ಲವೂ ಮೊದಲಿನಂತೆಯೆ ಇದೆ. ಸರಯೂ ಅವರ ಮುಖವನ್ನೇ ನೋಡಿಕೊಂಡು ಅವರು ಹೇಳಿದಂತೆ ನಡೆಯುತ್ತಿದ್ದಾಳೆ. ಯಾವ ಬಗೆಯ ಅಹಂಭಾವವನ್ನೂ ತೋರಿಸುತ್ತಿಲ್ಲ. ಅವಳನ್ನು ನೋಡಿದರೆ ಮನೆಯಲ್ಲಿ ಇದೊಂದು ಸಾಧುವಾದ ಪ್ರಾಣಿಯೆಂದು ಎಲ್ಲರಿಗೂ ಎನಿಸುತ್ತದೆ. ಈ ಮನೆಯಲ್ಲಿ ಅವಳ ಅಧಿಕಾರ ಅವಳ ಹಕ್ಕು ಇದ್ದರೂ ಬೇರೆಯವರ ಅನುಗ್ರಹವನ್ನೇ ಅವಳು ಅವಲಂಬಿಸಿಕೊಂಡಿರಬೇಕಾಗಿದೆ. ಸರಯೂನನ್ನು ನೋಡಿದ ಕೂಡಲೆ ಹರಕಾಲಿಯ ಪತಿಗೆ ಅಪಾರವಾದ ಹರ್ಷವಾಗುತ್ತದೆ. ಅವರ ಬಾಯಿಂದ 'ನಮ್ಮ ಸೊಸೆಯೆಂದರೆ ಸ್ವರ್ಗದಿಂದ ಭೂಮಿಗೆ ಅವತರಿಸಿ ಬಂದ........' ಎಂದು ಮಾತುಗಳು ಹೊರಬೀಳುವಷ್ಟರಲ್ಲಿ ಹರಕಾಲಿ ಅವರನ್ನು ಬೆದರಿಸಿ "ಸಾಕು ಸಾಕು, ಸುಮ್ಮನಿರಿ. ತಿಳಿಯದೆ ಇದ್ದ ಮಾತಿನಲ್ಲಿ ಅಡ್ಡಬಾಯಿ ಹಾಕಬೇಡಿರಿ.

ನನ್ನ ತಂದೆ ತಾಯಂದಿರು ನಿಮಗೆ ಕೊಡುವ ಬದಲು ನನ್ನನ್ನು ಕೈಕಾಲು ಕಟ್ಟಿ ಯಾವುದಾದರೂ ಬಾವಿಯಲ್ಲಿ ಚೆಲ್ಲಿದ್ದರೆ ನೆಟ್ಟಗಾಗುತ್ತಿತ್ತು" ಎನ್ನುತ್ತಿದ್ದಳು.

ಸರಿ, ವ್ರಜಕಿಶೋರರು ಚಿಕ್ಕಮುಖದೊಂದಿಗೆ ಹೊರಕ್ಕೆ ಹೋಗಿ ಬಿಡುತ್ತಿದ್ದರು.

ಹರಕಾಲಿಗೆ ಸುಮಾರು ಮೂವತ್ತು ವರ್ಷ. ಸರಯೂಗೆ ಇನ್ನೂ ಹದಿನೈದು ತುಂಬಿರಲಿಕ್ಕಿಲ್ಲ. ಸರಯೂ ಬಂದಂದಿನಿಂದ ಅವರಿಬ್ಬರ ಮನಸ್ಸಿನಲ್ಲಿ ಒಂದಿಲ್ಲೊಂದು ಬಗೆಯ ಯುದ್ಧ ನಡೆದೇ ಇದೆ. ಎಷ್ಟು ಮನಃಪೂರ್ವಕವಾಗಿ ಯತ್ನಿಸಿದರೂ ಹರಕಾಲಿಗೆ ಜಯವು ಸಿಕ್ಕದಂತಾಗಿದೆ. ಇಷ್ಟು ಚಿಕ್ಕ ಹುಡಿಗಿಯ್ರ ಇಂತಹ ಕೆಚ್ಚು ನೋಡಿ ಅವಳಿಗೆ ಆಶ್ಚರ್ಯ. ಹೊರಗಿನವರಿಗೆ ಈ ಅಂತರ್ಯುದ್ಧದಲ್ಲಿ ಸರಯೂ ಜಯ ಸಂಪಾದಿಸಿದ್ದಾಳೆನ್ನುವುದು ಗೊತ್ತಾಗಿಲ್ಲ. ಇದನ್ನು ಅವಳು ಹೊರಕ್ಕೂ ಹಾಕಿಲ್ಲ. ತನ್ನ ವಿಜಯದ ಕೀರ್ತಿಯನ್ನು ಸ್ವಲ್ಪವಾದರೂ ತನಗಿಟ್ಟುಕೊಳ್ಳದೆ ಎಲ್ಲವನ್ನೂ ಹರಕಾಲಿಗೇ ಕೊಟ್ಟುಬಿಟ್ಟಿದ್ದಾಳೆ. ಇದರಿಂದಂತೂ ಹರಕಾಲಿ ತೀರ ಸೋತುಹೋಗಿದ್ದಾಳೆ. ಇನ್ನು ಅವಳು ಜೀವಮಾನದಲ್ಲಿ ಗೆದೆಯುವ ವಿಚಾರವನ್ನೇ ಎತ್ತುವಂತಿಲ್ಲ.

ಸರಯೂ ಮೂಕಿಯಲ್ಲ, ಹುಚ್ಚಿಯಲ್ಲ, ಎಂದು ಹರಕಾಲಿಗೆ ಗೊತ್ತು. ಎಂತೆಂತಹ ಮಾತುಗಳಿಗೂ ಅವಳು ತಲೆಬಾಗಿಸಿ ನಿಂತುಕೊಂಡೆ ಉತ್ತರವನ್ನೀಯುವಳು. ಅದನ್ನು ಕೇಳಿ ಹರಕಾಲಿ ಸ್ತಂಭಿತಳಾಗುತ್ತಾಳೆ. ಆಕೆಯೊಡನೆ ಒಪ್ಪಂದ ಮಾಡಿಕೊಳ್ಳಲಿಕ್ಕೂ ಆಗಲೊಲ್ಲದು. ತನ್ನವಳನ್ನಾಗಿ ಮಾಡಿಕೊಳ್ಳುವುದಕ್ಕೂ ಆಗಲೊಲ್ಲದು. ಸರಯೂ ಜಗಳಗಂಟಿಯೂ ಎದುರಾಡುವವಳೂ ಸ್ವಾರ್ಥಿಯೂ ನಿರ್ದಯಳೂ ಹೊಟ್ಟೆಕಿಚ್ಚಿನವಳೂ ಅಭಿಮಾನಿಯೂ ಇದ್ದುದಾಗಿದ್ದರೆ ಹರಕಾಲಿ ಬಹುಶಃ ಗೆದೆಯಬಹುದಾಗಿದ್ದಿತು. ಸರಯೂ ತನ್ನ ಬಳಿಯಲ್ಲಿದ್ದ ದಯೆಯನ್ನು ಉದಾರ ಅಂತಃಕರಣದಿಂದ ಹಂಚಿ ಬಿಟ್ಟಿದ್ದಾಳೆ; ಆದುದರಿಂದ ಬೇರೆಯವರ ದಯೆ ಬೇಡಲು ಅವಳಿಗೆ ಎಡೆಯೆ ಸಿಕ್ಕುತ್ತಿರುವುದಿಲ್ಲ. ಈ ಮನೆಯ ಸಂಪೂರ್ಣ ಒಡತಿ ತಾನೇ ಎಂದೂ ಹರಕಾಲಿ ಈ ಮನೆಗೆ ಏನೂ ಸಂಬಂಧವಿಲ್ಲೆಂದೂ ಸರಯೂಗೆ ಚೆನ್ನಾಗಿ ಗೊತ್ತು. ಅದರೂ ತಾನು ಈ ಮನೆಗೆ ಯಃಕಶ್ಚಿತಳು, ಹರಕಾಲಿಯೆ ಸರ್ವಸ್ವ ಎಂದು ತೋರುವ ಹಾಗೆ ನಡತೆಯನ್ನಿಟ್ಟುಕೊಂಡಿದ್ದಾಳೆ. ಆದುದರಿಂದ

ಹರಕಾಲಿ ಹೊಟ್ಟೆಕಿಚ್ಚಿನಿಂದ ಇನ್ನಿಷ್ಟು ಸುಟ್ಟು ಸುಟ್ಟು ಗಾಸಿಯಾಗುತ್ತಿದ್ದಾಳೆ.

ಸರಯೂ ಒಂದೇ ಒಂದು ಸ್ಥಾನವನ್ನು ತನ್ನ ಸಂಪೂರ್ಣ ಅಧಿಕಾರದಲ್ಲಿಟ್ಟುಕೊಂಡಿದ್ದಾಳೆ. ಅಲ್ಲಿ ಹರಕಾಲಿ ಯಾವ ಬಗೆಯಿಂದಲೂ ಕಾಲಿಡಲಾಗದು. ತನ್ನ ಪತಿಯ ಸುತ್ತಲೂ ಒಂದು ಅಗೋಚರವಾದ ಗೆರೆಯನ್ನೆಳೆದಿದ್ದಾಳೆ. ಅದನ್ನು ದಾಟಿಹೋಗದೆ ತನ್ನ ಪತಿಯನ್ನು ಮುಟ್ಟುವ ಹಾಗಿಲ್ಲ. ಹರಕಾಲಿ ಆ ಗೆರೆಯ ಹೊರಗಿದ್ದುಕೊಂಡು ಏನು ಬೇಕೋ ಅದನ್ನು ಮಾಡಲಿ. ಆದರೆ ಒಳಕ್ಕೆ ಹೆಜ್ಜೆಯನ್ನಿಕ್ಕಲು ಅವಳಿಗೆ ಅಧಿಕಾರವಿಲ್ಲ. ಈ ಗೇಣುದ್ದ ಹುಡುಗಿ ಯಾವುದೊ ಮಾಯಮಂತ್ರದಿಂದ ತನ್ನ ಉಗುರು ಹಲ್ಲುಗಳಲ್ಲಿಯ ವಿಷವನ್ನು ಹರಣಮಾಡಿ ಬಿಟ್ಟಿದ್ದಾಳೆನ್ನುವದು ಹರಕಾಲಿಗೆ ಚೆನ್ನಾಗಿ ಗೊತ್ತಾಗುತ್ತಲಿದೆ.

ಹೀಗೆಯೆ ಆರು ವರುಷಗಳ ದೀರ್ಘಕಾಲವು ಕಳೆದುಹೋಯಿತು. ಹನ್ನೊಂದು ವರುಷದವಳಿದ್ದಾಗ ತನ್ನ ಪತಿಯ ಮನೆಗೆ ಬಂದಿದ್ದ ಸರಯೂ ಈಗ ಹದಿನೇಳು ವರುಷದವಳಾಗಿದ್ದಾಳೆ.

೫

ವಯಸ್ಸಿಗೆ ತಕ್ಕಂತೆ ಮಾನಕೊಡಬೇಕೆಂಬ ಜ್ಞಾನ ಪುರುಷರಲ್ಲಿರುವಂತೆ—ಸ್ತ್ರೀಯರಲ್ಲಿರುವುದಿಲ್ಲ. ಪುರುಷರಲ್ಲಿ ಎಷ್ಟೋ ಅವಸ್ಥೆಗಳಿವೆ; ೧೦, ೨೦, ೩೦, ಇತ್ಯಾದಿ. ಮೂವತ್ತು ವರುಷದ ಯುವಕನೊಬ್ಬನು ತನಗಿಂತ ಚಿಕ್ಕವನಾದ ಇಪ್ಪತ್ತು ವರುಷದ ಯುವಕನೊಂದಿಗೆ ಅತ್ಯಂತ ಆದರ ಸನ್ಮಾನದಿಂದ ನಡೆದುಕೊಳ್ಳುತ್ತಾನೆ. ಆದರೆ ಸ್ತ್ರೀಯರಲ್ಲಿ ಈ ಪ್ರಕಾರದ ನಡತೆ ಕಂಡುಬರುವುದಿಲ್ಲ. ವಿವಾಹಿತರಾಗುವ ವರೆಗೆ ತಮ್ಮ ಅಕ್ಕ, ಅತ್ತಿಗೆ, ತಾಯಿ, ಅತ್ತೆ, ಮೊದಲಾದವರ ಬಳಿಯಲ್ಲಿದ್ದು ಕೆಲವು ದಿವಸ ಉಮೇದುವಾರಿಕೆ ಮಾಡಿ ಕಲಿಯಬೇಕಾದುದನ್ನೆಲ್ಲ ಕಲಿತುಕೊಳ್ಳುತ್ತಾರೆ. ಆ ಮೇಲೆ ದೊಡ್ಡವರ ಸಾಲಿನಲ್ಲಿ ಸೇರಿಕೊಂಡು ಬಿಡುತ್ತಾರೆ. ಅಲ್ಲಿಗೆ ೧೬ ವರ್ಷದ ಹೆಂಗುಸರಿಂದ ಮೊದಲುಗೊಂಡು ೬೦ ವರ್ಷದ ಮುದುಕಿಯರ ವರೆಗೆ ಎಲ್ಲರೂ ಸಮಾನಸ್ಕಂಧರು. ಸ್ಥಾನಭೇದದಿಂದ ಇದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಬಹುದಲ್ಲದೆ ಸಾಮಾನ್ಯವಾಗಿ ಅವರು ಸಮಾನ ದರ್ಜೆಯವರೆ ಆಗಿರುತ್ತಾರೆ. ಚಂದ್ರನಾಥನ ಊರಲ್ಲಿಯೂ

ಹೀಗೆಯೆ. ಅಲ್ಲಿ ಊರಿನ ಹೆಂಗುಸರೆಲ್ಲರೂ ಸರಿಸಮಾನರಾಗಿಯೆ ಇದ್ದಾರೆ. ಹರಿಬಾಲೆ ಮುದುಕಿಯಾಗಿದ್ದರೂ ಕಿರಿಯರ ಸಮಾನಳೆ. ಒಂದು ಮಧ್ಯಾಹ್ನ ಸರಯೂ ತನ್ನ ಮನೆಯಲ್ಲಿ ಪಶ್ಚಿಮದ ಕಿಟಕಿಯನ್ನು ತೆರೆದುಕೊಂಡು ಕುಳಿತು ಆಕಾಶದ ಕಡೆಗೆ ನೋಡುತ್ತಿದ್ದಳು. ಹರಿಬಾಲೆ ಒಂದು ಕೈಯಲ್ಲಿ ಮಿಠಾಯಿಯ ತಟ್ಟೆ, ಇನ್ನೊಂದು ಕೈಯಲ್ಲಿ ಹೂವಿನ ತುರಾಯಿ ಹಿಡಿದುಕೊಂಡು ಸರಯೂನ ಬಳಿ ಬಂದು ನಿಂತಳು. ಆ ತುರಾಯಿಯನ್ನು ಸರಯೂನ ಕೈಯಲ್ಲಿ ಕೊಟ್ಟು "ಇಂದಿನಿಂದ ನೀನು ನನ್ನ ಸಖಿ. ಒಂದು ಸಲ ನನ್ನನ್ನು 'ಸಖಿ' ಎಂದು ಕರೆ" ಎಂದಳು.

ಸರಯೂ ಧರ್ಮಸಂಕಟದಲ್ಲಿ ಬಿದ್ದಳು. ಆದರೂ ಅವಳು ನಸುನಕ್ಕು "ಒಳ್ಳೇದು" ಎಂದಳು.

"ಒಳ್ಳೇದು ಎಂದ ಮಾತ್ರಕ್ಕೆ ಮುಗಿಯಲಿಲ್ಲ. ನೀನು 'ಸಖಿ' ಎಂದು ಕರೆಯಲೇಬೇಕು."

ಇದಕ್ಕೆ ನೀವು ಆದರವೆಂದಾದರೂ ಹೇಳಿ, ಪ್ರೀತಿಯೆಂದಾದರೂ ಹೇಳಿ ; ಸರಯೂನ ಜೀವನದಲ್ಲಿ ಈ ಬಗೆಯ ಘಟನೆ ಸಂಭವಿಸಿರಲಿಲ್ಲ. ಆದುದರಿಂದ ಇಷ್ಟು ಅಲ್ಪಾವಧಿಯಲ್ಲಿ ಈ ಆತ್ಮೀಯ ಭಾವನೆಯನ್ನು ತನ್ನದನ್ನಾಗಿ ಮಾಡಿ ಕೊಳ್ಳದಾದಳು. ತನಗಿಂತ ಹೆಚ್ಚು ಹಿರಿಯಳಾದವಳನ್ನು ಆಲಿಂಗಿಸಿ 'ಸಖಿ' ಎನ್ನಲು ಅವಳಿಗೆ ನಾಚಿಕೆಯಾಗತೊಡಗಿತು ; ಆದರೆ ಹರಿಬಾಲೆ ಬಿಡಲಿಲ್ಲ. ಹೀಗೆನ್ನುವುದು ಅಸ್ವಾಭಾವಿಕವೆಂದೂ ಹೊಸ ರೀತಿಯೆಂದೂ ಆಕೆಗೆ ಎನಿಸಲೇ ಇಲ್ಲ. ಆದುದರಿಂದಲೇ ಸರಯೂ 'ಸಖಿ' ಎನ್ನಲು ತಡಮಾಡುವುದನ್ನು ಅವಳು ಕಂಡು ಖಿನ್ನಳಾಗಿ "ಹಾಗಾದರೆ ನನ್ನ ತುರಾಯಿ ಕೊಟ್ಟುಬಿಡಮ್ಮಾ. ಇನ್ನೊಬ್ಬರ ಬಳಿಗೆ ಹೋಗುತ್ತೇನೆ" ಎಂದಳು.

ಸರಯೂಗೆ ಏನು ಮಾಡಬೇಕೆನ್ನುವುದು ಹೊಳೆಯಲಿಲ್ಲ. ಆದರೆ ಕೊಂಚ ಕಾಲವಾದ ಮೇಲೆ ಕೋಮಲವಾದ ದನಿಯಿಂದ ಕೇಳಿದಳು—"ಸಖಿ ಯನ್ನು ಹುಡುಕಲು ಹೋಗುವೆಯಾ"

"ಓಹೋ, ನೀನು ಚೆನ್ನಾಗಿ ಮಾತಾಡುತ್ತೀ ! ಜನರು ನಿನಗೆ ಮಾತಾ ಡಲಿಕ್ಕೇ ಬರುವುದಿಲ್ಲೆಂದು ಹೇಳುತ್ತಾರೆ !"

ಸರಯೂ ನಗಲಾರಂಭಿಸಿದಳು.

" ಹಾಗಾದರೆ ಕೇಳು—ಈ ಊರಲ್ಲಿ ನಿನಗೆ ಸಖಿಯರಾರೂ ಇಲ್ಲ. ಕೆಲವರು ದೊಡ್ಡವರ ಮನೆಯೆಂದು, ಕೆಲವರು ನಿನ್ನ ಮೃತ್ತೆಯ ಮಾತಿನ ರೀತಿ ಹಾಗು ದನಿಯನ್ನು ಕೇಳಿ, ಅಂತು ನಿಮ್ಮ ಮನೆಗೆ ಯಾರೂ ಬರುವುದಿಲ್ಲೆಂದು ನನಗೆ ಗೊತ್ತು. ಇನ್ನು ನಾನು ಆಗಾಗ್ಗೆ ಬರುತ್ತೇನೆ. ಆದರೆ ನಮ್ಮಿಬ್ಬರಲ್ಲಿಯೂ ಒಂದು ಸಂಬಂಧವಾಗಬೇಕು. ಎಂತಲೆ ನಿನ್ನನ್ನು ಇವೊತ್ತು ಸಖಿಯನ್ನಾಗಿ ಮಾಡಿಕೊಂಡಿದ್ದೇನೆ. ನಾನು ಮುದುಕಿಯಾಗಿದ್ದರೂ ಇಡಿ ದಿನ ಹರಿ-ಹರಿ ಎಂದು ಜಪ ಮಾಡುತ್ತ ಕಳೆಯಲಾರೆ. ಇನ್ನು ನೀನಿದ್ದಲ್ಲಿಗೆ ದಿನಾಲು ಬರುತ್ತೇನೆ.

" ದಿನಾಲು ಬನ್ನಿ."।

ಹರಿಬಾಲೆ ಗರ್ಜಿಸಿ ನುಡಿದಳು. " 'ಬನ್ನಿ' ಏಕೆ ? ' ಸಖೀ ದಿನವೂ ಬಾ' ಎನ್ನು. 'ನೀನು' ಎನ್ನುತ್ತೀಯೋ ಇಲ್ಲವೋ ಹೇಳು."

ಸರಯೂ ಬಿದ್ದು ಬಿದ್ದು ನಕ್ಕು " ಕ್ಷಮಿಸಿರಮ್ಮಾ, ಕುತ್ತಿಗೆ ಕೊಯ್ದರೂ ನಾನು ಏಕವಚನದಲ್ಲಿ ಮಾತನಾಡಲಾರೆ " ಎಂದಳು.

ಹರಿಬಾಲೆಯೂ ನಕ್ಕು " ಒಳ್ಳೇದು, 'ನೀನು' ಎನ್ನಲಿಕ್ಕಾಗದಿದ್ದರೆ 'ನೀವು' ಎನ್ನಲೇಬೇಕು. 'ತಾವು' ಎಂದು ಎಂದೂ ಕರೆಯಬಾರದು ನೋಡು. ಹೇಳು ಹಾಗಾದರೆ ' ಸಖೀ, ನೀವು ನಿತ್ಯ ಬನ್ನಿ' ಎಂದು " ಎಂದಳು.

ಸರಯೂ ಸ್ವಲ್ಪ ನಾಚಿಕೆಯಿಂದ ತಲೆಬಾಗಿಸಿ ನಗುತ್ತ ನುಡಿದಳು – " ಸಖೀ, ನೀವು ನಿತ್ಯ ಬನ್ನಿ. "

ಈಗ ಹರಿಬಾಲೆಯದೊಂದು ದೊಡ್ಡ ಚಿಂತೆ ದೂರವಾದಂತಾಯಿತು. ಅವಳೆಂದಳು—" ಹಾಂ, ನಿತ್ಯ ಬರುವೆ, ಸಖೀ. "

ಮರುದಿನದಿಂದಲೇ ನಿತ್ಯವೂ ಹರಿಬಾಲೆ ಸರಯೂನ ಮನೆಗೆ ಬರಲಾರಂಭಿಸಿದಳು. ಕೆಲಸ ತುಂಬಿದ್ದರೂ ಬಿಟ್ಟು ಒಂದು ಸಲ ಸರಯೂನ ಮನೆಗೆ ಬಂದು ಹಾಜರಿಕೊಟ್ಟು ಹೋಗುತ್ತಿದ್ದಳು. ಅವರಿಬ್ಬರಲ್ಲಿ ನೋಳೆತ ಸಖೀಭಾವನೆ ದಿನದಿನಕ್ಕೆ ದೃಢವಾಗಿ ಬೆಳೆಯುತೊಡಗಿತು. ಸರಯೂ ಕೂಡ ಹರಿಬಾಲೆ ತನಗಿಂತ ಹಿರಿಯಳೆಂಬುದನ್ನೂ ಅವಳನ್ನು ಆಲಿಂಗಿಸಿ ಮಾತನಾಡುವುದು ನಗುವುದು ಸರಿಯಾದುದಲ್ಲವೆಂಬುದನ್ನೂ ಮರೆತುಬಿಟ್ಟಳು.

ಇವರಿಬ್ಬರ ಗೆಳೆತನವು ಹರಕಾಲಿಗೆ ಹೇಗೆನಿಸುತಿದ್ದಿತೊ ನಾವರಿಯೆವು. ಆದರೆ ಚಂದ್ರನಾಥನಿಗೆ ಈ ಗೆಳೆತನವು ಬಹಳ ಒಪ್ಪಿಗೆಯಾಯಿತೆಂದು ನಿರಾತಂಕವಾಗಿ ಹೇಳಬಹುದು. ಈ ವಿಷಯವಾಗಿ ಅವನು ಯಾವಾಗಲೂ ಮಾತನಾಡುತ್ತಿದ್ದ. ಹರಿಬಾಲೆಯ ಈ ಅಸ್ವಾಭಾವಿಕ ಗೆಳೆತನದಿಂದ ಅವನಿಗೇನೊ ಅನಂದವೆನಿಸುತಿದ್ದಿತು. ಈ ಆನಂದಕ್ಕೆ ಇನ್ನೂ ಒಂದು ಕಾರಣವಿದ್ದಿತು. ಚಂದ್ರನಾಥ ತನ್ನ ಹೆಂಡತಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದ. ಅತ್ಯಂತ ಹೃತ್ಪೂರ್ವಕವಾಗಿ ಪ್ರೀತಿಸದೆ ಇದ್ದರೂ ಅವನ ಹೃದಯದಲ್ಲಿ ಸ್ನೇಹವು ತುಂಬಿಕೊಂಡಿತ್ತು. ಮನದೊಳಗೆ ಯೋಚಿಸುತ್ತಿದ್ದ — ಒಂದೇ ಬಗೆಯಾಗಿರುವ ಹೆಂಡತಿ ಸಿಕ್ಕುವುದು ಸರ್ವರ ಸೌಭಾಗ್ಯದಲ್ಲಿ ಬರೆದಿರುವುದಿಲ್ಲ. ಇದರ ತಾತ್ಪರ್ಯವಿಷ್ಟೆ: ಒಬ್ಬರ ಹೆಂಡತಿ ಗಂಡನ ದಾಸಿಯಾಗಿರುತ್ತಾಳೆ; ಇನ್ನೊಬ್ಬರ ಹೆಂಡತಿ ಗೆಳತಿಯಾಗಿರುತ್ತಾಳೆ; ಮತ್ತೊಬ್ಬರ ಹೆಂಡತಿ ಅವರ ಒಡತಿಯಾಗಿರುತ್ತಾಳೆ. ನನ್ನ ಸೌಭಾಗ್ಯದಿಂದ ಪುಣ್ಯವತೀ ಪವಿತ್ರಮಯೀ ಸ್ನೇಹಮಯೀ ಸಾಧ್ವೀ ದಾಸಿಯು ದೊರೆತಿರುವಳೆಂದಮೇಲೆ ನಾನು ದುಃಖವನ್ನೇಕೆ ಪಡಬೇಕು? ಇದಲ್ಲದೆ ಇನ್ನೂ ಒಂದು ವಿಚಾರವು ಅವನ ಮನದಲ್ಲಿ ಆಗಾಗ್ಗೆ ಮೂಡುತ್ತಿದೆ: ಸರಯೂ ಕಳೆದ ದುಃಖಪೂರ್ಣವಾದ ಜೀವನಕತೆ. ಸರಯೂನ ಬಾಲ್ಯ ದುಃಖದಲ್ಲಿಯೆ ಕಳೆದುಹೋಗಿದ್ದಿತು. ಇದುವರೆಗೆ ಅವಳು ತನ್ನ ಜೀವನವನ್ನು ದುಃಖದಲ್ಲಿಯೇ ಕಳೆಯಬಹುದಾಗಿದ್ದಿತು. ಯಾವನಾದರೂ ಒಬ್ಬ ದುಷ್ಚರಿತ್ರನ ಕೈ ಹಿಡಿದು ಕಷ್ಟದ ಕಂಬನಿಗಳನ್ನು ಉದುರಿಸಬಹುದಾಗಿದ್ದಿತು. ಅಲ್ಲದೆ ದಾಸಿಯಾಗಿ ನಾನಾ ಬಗೆಯ ಅತ್ಯಾಚಾರಗಳನ್ನೂ ಕಷ್ಟಗಳನ್ನೂ ತಾಳಿಕೊಳ್ಳಬಹುದಾಗಿದ್ದಿತು. ಇಷ್ಟು ರೂಪ-ಲಾವಣ್ಯವಿದ್ದಮೇಲೆ ನರಕವು ಮಾರ್ಗವನ್ನು ತೆರೆದು ತನ್ನೆಡೆಗೆ ಬರಮಾಡಿಕೊಳ್ಳದೆ ಬಿಡುತ್ತಿರಲಿಲ್ಲ. ಹೀಗಾಗಿದ್ದರೆ? ಎಂಬ ವಿಚಾರಗಳು ಚಂದ್ರನಾಥನ ತಲೆಯಲ್ಲಿ ಸುಳಿಯತೊಡಗಿದೊಡನೆ ಅವನು ಗಂಭೀರನಾಗಿ, ಕರುಣಾರ್ದ್ರನಾಗಿ, ನಾಚಿಕೆಯಿಂದ ಕೆಂಪೇರಿದ ಆಕೆಯ ಮುಖಕಮಲವನ್ನು ಹಿಡಿದೆತ್ತಿ "ಸರಯೂ, ನಾನು ನಿನ್ನನ್ನು ನೋಡದೆ ಹೋಗಿದ್ದರೆ, ನಿನ್ನೊಡನೆ ಮದುವೆಯಾಗದೆ ಇದ್ದಿದ್ದರೆ, ಇಲ್ಲಿಯವರೆಗೆ ನೀನಾರ ಹತ್ತಿರ ಇರುತ್ತಿದ್ದೆ?" ಎಂದು ಕೇಳುತ್ತಿದ್ದ.

ಸರಯೂ ಈ ಮಾತುಗಳಿಗೆ ಉತ್ತರವೀಯುತ್ತಿರಲಿಲ್ಲ. ಆತನ ಎದೆಯನ್ನು ಬಿಗಿಯಾಗಿ ಅಪ್ಪುತ್ತಿದ್ದಳು. ಚಂದ್ರನಾಥನು ಅವಳ ತಲೆಯ ಮೇಲೆ ತನ್ನ ಕೈಯಿಟ್ಟು ಅವಳಲ್ಲಿ ಧೈರ್ಯ ಸಾಹಸ ತುಂಬುವಂತೆ ಮನದಲ್ಲಿಯೇ ಎಂದುಕೊಳ್ಳುತ್ತಿದ್ದ—'ಇಲ್ಲ, ನಿನಗೇತರ ಅಂಜಿಕೆ!'

ಸರಯೂ ಇನ್ನಿಷ್ಟು ಹತ್ತಿರ ಸರಿದು ಆತನನ್ನು ಅಂಟಿಕೊಳ್ಳುತ್ತಿದ್ದಳು. ನಿಜವಾಗಿಯೂ ಈ ತೆರನಾದ ಮಾತುಗಳಿಂದ ಅವಳಿಗೆ ಬಹಳ ಹೆದರಿಕೆಯಾಗುತ್ತಿದ್ದಿತು. ಚಂದ್ರನಾಥನೂ ಅವಳ ಅಂಜಿಕೆಯನ್ನು ಕಂಡು ಅವಳನ್ನು ಇನ್ನಷ್ಟು ಬಿಗಿಯಾಗಿ ಅಪ್ಪಿಕೊಳ್ಳುತ್ತಿದ್ದ. "ಇಲ್ಲ, ಸರಯೂ, ಹಾಗೇನು ಇಲ್ಲ. ನೀನು ಓರ್ವ ಬಡವೆಯ ದುಃಖಿಯ ಮನೆಯಲ್ಲಿ ಏಕೆ ಜನ್ಮವೆತ್ತಿದೆಯೆಂಬುದೆ ತಿಳಿಯುವಂತಾಗಿದೆ. ಆದರೆ ಸರಯೂ, ಸರಯೂ, ನೀನೇ ನನ್ನ ಜನ್ಮಾಂತರದ ಪತಿವ್ರತಾ ಹೆಂಡತಿ. ನೀನು ಜಗದಲ್ಲಿ ಎಲ್ಲಿಯೇ ಇದ್ದುದಾಗಿದ್ದರೂ ನಿನ್ನೆಡೆಗೆ ನಾನು ಬರಲೇ ಬೇಕಾಗುತ್ತಿದ್ದಿತು ಸರಯೂ. ನೀನೇ ನನ್ನನ್ನು ಕಾಶಿಗೆ ಕರೆಯಿಸಿದೆ. ಸರಯೂ, ನನ್ನ ಸ್ನೇಹದ ಮಣಿ" ಹೀಗೆಂದು ಮತ್ತೆಮತ್ತೆ ಬಿಗಿಬಿಗಿದು ಅಪ್ಪಿಕೊಳ್ಳುತ್ತಿದ್ದ. ಇಬ್ಬರ ನೇತ್ರಗಳಿಂದಲೂ ಸ್ನೇಹದ ಸ್ನಿಗ್ಧ ಧಾರೆ ಹರಿದು ಹೋಗುತ್ತಿದ್ದಿತು.

ಈಗ ಚಂದ್ರನಾಥನ ಹೃದಯದಲ್ಲಿ ಹರಿಯುತ್ತಿರುವ ಭಾವನೆಯನ್ನು ಸರಯೂನ ಸಮಸ್ತ ಸ್ನೇಹ, ಪ್ರೇಮ, ಸೇವೆ ಮತ್ತು ಭಕ್ತಿ ಎಲ್ಲವೂ ಒಟ್ಟು ಸೇರಿದರೂ ಸರಿಗಟ್ಟಲಾರವು. ದೀನ ದುಃಖಿಗಳ ಮೇಲೆ ದಯೆದೋರಿದರೆ, ಅವರ ಮೇಲೆ ನಮ್ಮ ಅನುಗ್ರಹವನ್ನು ಸುರಿದರೆ ಒಂದು ಬಗೆಯ ಅಭಿಮಾನ ನಮ್ಮಲ್ಲಿ ಅಂಕುರಿಸುತ್ತದೆ, ತೃಪ್ತಿಯುಂಟಾಗುತ್ತದೆ. ಅದೇ ಬಗೆಯ ಅಭಿಮಾನವೂ ತೃಪ್ತಿಯೂ ಸರಯೂನನ್ನು ಮದುವೆಯಾದಾಗ ಚಂದ್ರನಾಥನಿಗೆ ಉಂಟಾಗಿದ್ದಿತು. ಆ ಅಭಿಮಾನ, ಆ ತೃಪ್ತಿ ಗುಪ್ತವಾಗಿ ಅವನ ಹೃದಯದಲ್ಲಿ ಮೂಡಿದ್ದುವು. ಈಗ ಎಷ್ಟು ಪ್ರಯತ್ನ ಪಟ್ಟರೂ ಅವನ್ನು ಹೃದಯದಿಂದ ಪೂರ್ತಿಯಾಗಿ ಕಿತ್ತೊಗೆಯುವುದು ಸಾಧ್ಯವಿರಲಿಲ್ಲ. ಅವನ ಹೃದಯದ ಒಂದು ಮೂಲೆಯಲ್ಲಿ ಅದು ಹಾಗೆಯೇ ಬಿದ್ದುಕೊಂಡಿದ್ದಿತು. ಆದುದರಿಂದ ಆ ಭಾವವು ತಲೆಯೆತ್ತಿದಾಗ ಚಂದ್ರನಾಥನು ಸರಯೂನನ್ನು ಬಿಗಿದಪ್ಪಿಕೊಳ್ಳುತ್ತಿದ್ದ. "ಸರಯೂ, ಎಷ್ಟೊ ದಿನಗಳಿಂದ ಯಾರನ್ನು ನೀನು ನೋಡುತ್ತ

ಬಂದಿರುವೆಯೊ ಅವರನ್ನು ಇದು ವರೆಗೂ ನೀನು ಚೆನ್ನಾಗಿ ಗುರುತಿಸಿಲ್ಲ. ಗುರುತಿಸಲು ವಿಲಂಬವೇಕಾಗುತ್ತಿದೆ ನಿನಗೆ? ಇದೇ ನನಗೆ ಅಚ್ಚರಿಯ ಮಾತು, ಹೊಳೆಯದ ವಿಚಾರವಾಗಿದೆ. ನಿನ್ನನ್ನು ಕಾಶಿಯಲ್ಲಿ ನೋಡಿದ ಕೂಡಲೆ ಗುರುತಿಸಿದೆ—ನೀನು ನನ್ನವಳೇ ಎಂದು! ಎಷ್ಟೋ ಯುಗಗಳಿಂದ, ಕಲ್ಪಗಳಿಂದ, ಜನ್ಮಗಳಿಂದ ನೀನು ನನ್ನವಳು ಎಂದು! ನಾವು ಅದೇಕೊ ಅಷ್ಟುಕಾಲ ಅಗಲಿದ್ದೆವು! ಈಗ ಮತ್ತೆ ಒಂದಾಗಿ ಒಂದೆಡೆಯಲ್ಲಿ ವಾಸಿಸಲು ಬಂದಿದ್ದೇವೆ" ಎನ್ನುತ್ತಿದ್ದ.

ಸರಯೂ ಚಂದ್ರನಾಥನ ಎದೆಯ ಮೇಲೆ ತಲೆಯಿಟ್ಟು ಸೆರಗಿನಿಂದ ಮುಚ್ಚಿಕೊಂಡು ಕೋಮಲವಾದ ದನಿಯಲ್ಲಿ ಹೇಳುತ್ತಿದ್ದಳು—"ನಾನು ನಿಮ್ಮನ್ನು ಗುರುತಿಸಿಲ್ಲವೆಂದು ಯಾರು ಹೇಳುತ್ತಾರೆ?"

ಅತ್ಯಂತ ಉತ್ಸಾಹದ ಮೂಲಕ ಚಂದ್ರನಾಥನು ಸರಯೂನ ನಾಚಿಕೆಯಿಂದ ಕೆಂಪೇರಿದ ಮುಖವನ್ನು ತನ್ನ ಮುಖದ ಎದುರಿನಲ್ಲಿ ಹಿಡಿದುಕೊಂಡು ಎನ್ನುತ್ತಿದ್ದ—"ಗುರುತಿಸಿದ್ದೇಯಾ? ಹಾಗಾದರೆ ಇಷ್ಟೇಕೆ ಹೆದರಿಕೆ? ನಾನು ನಿನ್ನ ಕೂಡ ಯಾವ ಬಗೆಯ ದುರ್ವ್ಯವಹಾರವನ್ನೂ ಮಾಡುವುದಿಲ್ಲ. ಸರಯೂ, ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತೇನೆ ನಿನ್ನನ್ನು."

ಮತ್ತೆ ಸರಯೂ ತನ್ನ ಮುಖವನ್ನು ಮುಚ್ಚಿಕೊಳ್ಳುತ್ತಿದ್ದಳು. ಚಂದ್ರನಾಥ ಮತ್ತೆ ಕೇಳುತ್ತಿದ್ದ—"ಹೇಳು ಸರಯೂ; ಏಕೆ ಹೆದರುತ್ತೀ ಹೇಳು."

ಸರಯೂನ ಬಾಯಿಂದ ಉತ್ತರ ಬರುತ್ತಿರಲಿಲ್ಲ. ಸ್ವಾಮಿಯನ್ನು ಸ್ಪರ್ಶಿಸಿದ ಮೇಲೆ ಅಂಜಿಕೆಯಿಲ್ಲವೆಂದು ಸುಳ್ಳು ಹೇಗೆ ಹೇಳಬಲ್ಲಳು? ನಿಜವಾಗಿಯೂ ಅವಳಿಗೆ ಭಯವಾಗುತ್ತಿದ್ದಿತು. ಅದು ಚಂದ್ರನಾಥನ ಹೊರತಾಗಿ ಯಾರಿಗೂ ಗೊತ್ತಿರಲಿಲ್ಲ.

ಅಹುದು, ನಾವು ಮರೆತು ಬೇರೆ ಕಡೆ ಹೊರಟಿದ್ದೆವು ಈಗ. ಸ್ವಲ್ಪ ಹೊತ್ತಿನ ಹಿಂದೆ ಹರಿಬಾಲೆ ಬಂದು ಹೋಗುವುದರಿಂದ ಚಂದ್ರನಾಥನಿಗೆ ಆನಂದವಾಗುತ್ತಿದ್ದಿತೆಂದು ಹೇಳುತ್ತಿದ್ದೆವು. ಸರಯೂಗೆ ಒಬ್ಬ ಸಖಿ ದೊರೆತಳೆಂಬುದೆ ಚಂದ್ರನಾಥನ ಆನಂದಕ್ಕೆ ಕಾರಣ. ಸರಯೂಗೆ ತನ್ನ ಮನದ ದುಗುಡವನ್ನು ತೋಡಿಕೊಂಡು ಕಳೆದುಕೊಳ್ಳುವುದಕ್ಕೆ ಒಬ್ಬ ಸಖಿ ದೊರೆತಳಲ್ಲ!

ಒಂದು ದಿನ ಸರಯೂ ಮಧ್ಯಾಹ್ನ ಹರಿಬಾಲೆಯ ದಾರಿಯನ್ನೆ ನೋಡುತ್ತ ಕುಳಿತುಕೊಂಡಿದ್ದಳು. ಮೋಡಗಳು ಮುಸುಕಿದ್ದುವು, ಹನಿಗಳೂ ಮೆಲ್ಲಗೆ ಉದುರುತ್ತಿದ್ದುವು. ಹರಿಬಾಲೆ ಬರಲಿಲ್ಲ. ಮಳೆಯ ಹನಿ ಉದುರುತ್ತಿದ್ದುದರಿಂದಲೆ ಅವಳು ಬಂದಿರಲಿಕ್ಕಿಲ್ಲವೆಂದು ಸರಯೂ ಯೋಚಿಸುತ್ತಿದ್ದಳು. ಸಾಯಂಕಾಲವಾಗುತ್ತ ಬಂದಿದ್ದಿತು; ಒಬ್ಬಳೆ ಇಡಿಯ ದಿನವನ್ನು ಕಳೆದಿದ್ದಳು. ಹರಕಾಲಿಯೂ ಮನೆಯಲ್ಲಿರಲಿಲ್ಲ. ಸರಯೂ ಸ್ವಲ್ಪ ಸಾಹಸಮಾಡಿ ಚಂದ್ರನಾಥನ ಓದುವ ಮನೆಯನ್ನು ಪ್ರವೇಶಿಸಿದಳು. ವಿಶೇಷ ಕೆಲಸವಿಲ್ಲದೆ ಯಾರೂ ಈ ಕಿರುಮನೆಯಲ್ಲಿ ಹೆಜ್ಜೆಯಿಡುತ್ತಿರಲಿಲ್ಲ. ಸರಯೂ ಕೂಡ ಹಾಗೆಯೆ. ಚಂದ್ರನಾಥ ಓದುವುದನ್ನು ಬಿಟ್ಟು ತಲೆಯೆತ್ತಿ ನೋಡಿ ಎಂದ—"ಈ ಹೊತ್ತು ನಿನ್ನ ಸಖಿ ಬಂದಿಲ್ಲವೆಂದು ಕಾಣುತ್ತದೆ. ಅಲ್ಲವೆ ?"

"ಇಲ್ಲ."

"ಅದಕ್ಕೋಸ್ಕರವೆ ನಿನಗೆ ನನ್ನ ನೆನಪಾದುದು ?"

ಸರಯೂ ನಸುನಕ್ಕಳು. ಸದಾ ನೆನಪಾಗುತ್ತದೆ ; ಬರುವ ಸಾಹಸ ಮಾತ್ರ ಆಗುವುದಿಲ್ಲವೆನ್ನುವುದೆ ಅವಳ ನಗೆಯ ಭಾವವಾಗಿದ್ದಿತೇನೊ ! "ಮಳೆ ಬರತೊಡಗಿದ್ದರಿಂದ ಹರಿಬಾಲೆ ಬಂದಿರಲಿಕ್ಕಿಲ್ಲ" ಎಂದಳು.

"ಇಲ್ಲ, ಹಾಗೇನೂ ಇಲ್ಲ. ಈ ಹೊತ್ತು ಚಿಕ್ಕಪ್ಪನ ಮಗಳು ನಿರ್ಮಲೆಯನ್ನು ಯಾರೋ ನೋಡುವುದಕ್ಕೆ ಬಂದಿದ್ದಾರೆ. ಬೇಗನೆ ಅವಳ ಮದುವೆಯಾಗುವುದಿದೆ. ಅದರ ಸಿದ್ಧತೆಯಲ್ಲಿಯೆ ಮನೆಯವರು ತೊಡಗಿದ್ದಾರೆ."

"ಹೌದು, ಹೀಗೆಯೆ ಇರಬಹುದು."

ಸ್ವಲ್ಪ ಸಮಯ ಸುಮ್ಮನಿದ್ದ ಮೇಲೆ ಚಂದ್ರನಾಥನೆಂದ—"ಏನು ಹೇಳಲಿ, ಸರಯೂ ? ನಾವು ಬೇರೆಯಾದೆವು ಅವರಿಗೆ. ಇದರಿಂದ ದುಃಖವಾಗುತ್ತದೆ, ಸರಯೂ. ಅತ್ತೆಯೆಲ್ಲಿ ?"

"ಅವರೂ ಅಲ್ಲಿಗೇ ಹೋಗಿದ್ದಾರೇನೊ !"

ಚಂದ್ರನಾಥ ಮಾತನಾಡದೆ ಯೋಚಿಸತೊಡಗಿದ.

ಸರಯೂ ಬಂದು ಬಳಿಯಲ್ಲಿ ಕುಳಿತು—"ಹೇಳಬಾರದೆ ಏನು ಯೋಚಿಸುತ್ತ ಇದ್ದೀರಿ ?" ಎಂದಳು.

ಚಂದ್ರನಾಥನು ನಗಲು ಯತ್ನಿಸಿ ಸರಯೂನ ಕೈಯನ್ನು ಎಳೆದು ಕೊಂಡು ತನ್ನ ಕೈಯಲ್ಲಿರಿಸಿಕೊಳ್ಳುತ್ತ ಮೆಲ್ಲಗೆ ಮಾತಿಗೆ ಮೊದಲು ಮಾಡಿದ. "ಇಲ್ಲ, ಸರಯೂ, ಹಾಗೆ ಮತ್ತೇನೂ ಇಲ್ಲ. ನಿರ್ಮಲೆಯ ಮದುವೆ. ಅದರ ಸುದ್ದಿಯನ್ನು ಕೂಡ ನನಗೆ ಚಿಕ್ಕಪ್ಪ ಹೇಳಲಿಲ್ಲ. ಅತ್ತೆಯನ್ನು ಕರೆದು ಕೊಂಡೇ ಹೋದ. ನಾವಿಬ್ಬರೂ ಪರಕೀಯರಾದೆವಲ್ಲ! ಎಂದು ಯೋಚಿಸು ತ್ತಿದ್ದೆ."

ಚಂದ್ರನಾಥನ ದನಿಯಲ್ಲಿ ಸ್ವಲ್ಪ ವೇದನೆಯಿದ್ದಿತು. ಸರಯೂ ಅದನ್ನು ಲಕ್ಷಿಸಿ ನುಡಿದಳು—"ನನ್ನನ್ನು ಮದುವೆಯಾಗಿ ನೀವು ಇನ್ನಿಷ್ಟು ಪರಕೀಯ ರಾಗಿದ್ದೀರಿ. ಇಲ್ಲದೆ ಹೋಗಿದ್ದರೆ ಇಷ್ಟು ದಿನಗಳಲ್ಲಿ ನೀವು ಇನ್ನಷ್ಟು ಪ್ರೀತಿ ಯಿಂದ ಇರಬಹುದಾಗಿದ್ದಿತು."

ಚಂದ್ರನಾಥ ನಕ್ಕು ಎಂದ—"ಇಲ್ಲ, ಪ್ರೀತಿ ಬೆಳೆಯಿಸುವ ಅಗತ್ಯವೇನೂ ಇಲ್ಲ. ನಿನ್ನೊಡನೆ ಪ್ರೀತಿ ಬೆಳೆಯಿಸುವುದನ್ನು ಬಿಟ್ಟು ಚಿಕ್ಕಪ್ಪನೊಡನೆ ಸ್ನೇಹ ವನ್ನು ಹೆಚ್ಚಿಸಿಕೊಂಡಿದ್ದರೆ ಅಷ್ಟು ಸುಖವೇನೂ ಆಗುತ್ತಿರಲಿಲ್ಲ. ಹಾಗೆ ನೋಡಿದರೆ ನಮ್ಮಲ್ಲಿ ವೈಮನಸ್ಸೇನೂ ಇಲ್ಲ; ಚೆನ್ನಾಗಿಯೇ ಇದ್ದೇವೆ. ನಿನ್ನ ಮದುವೆಯಾಗುವ ಕಾಲಕ್ಕೆ ಚಿಕ್ಕಪ್ಪನ ಸಲಹೆ ಕೇಳಿದ್ದರೆ ನಿನ್ನೊಡನೆ ಮದುವೆಯಾಗುವುದು ಸಂಭವವಿರಲಿಲ್ಲ. ಒಂದಿಲ್ಲೊಂದು ಎಡರು ಬಂದೇ ಬರುತ್ತಿದ್ದಿತು; ಕುಲದ ಮಾತು ಏಳುತ್ತಿತ್ತು; ಇಲ್ಲವೆ ವಂಶದ ಜಗಳವಾಗು ತ್ತಿತ್ತು. ಅದೇನೇ ಇರಲಿ, ಒಂದಿಲ್ಲೊಂದು ಬಗೆಯ ಎಡರು ಬರದೆ ಇರು ತ್ತಿರಲಿಲ್ಲ."

ಒಳಗಿಂದೊಳಗೆ ಭೀತಿಯಿಂದ ನಡುಗಿದಳು ಸರಯೂ. ಅಂದಿನ ನೆರಳೂ ಮನೆಯಲ್ಲಿ ಕತ್ತಲನ್ನುಂಟು ಮಾಡಿದ್ದಿತು. ಆದುದರಿಂದ ಚಂದ್ರನಾಥ ಅವಳ ಮುಖವನ್ನು ನೋಡದಾದ. ಆದರೂ ಅವನ ಕೈಯಲ್ಲಿದ್ದ ಅವಳ ಕೈ ನಡುಗಿ ಆಕೆಯ ಅಂತರಂಗದಲ್ಲಿನ ಸಮಸ್ತ ಮಾತುಗಳನ್ನೂ ಚಂದ್ರನಾಥನಿಗೆ ಅರು ಹಿತು. ಚಂದ್ರನಾಥ ನಸುನಕ್ಕು ಕೇಳಿದ—"ನಾನು ಚಿಕ್ಕಪ್ಪನ ಸಲಹೆ ಕೇಳದೆ ಇದ್ದದ್ದು ಸರಿಯೊ ತಪ್ಪೊ ತಿಳಿದುಕೊಂಡೆಯಾ ?"

ಸ್ವಲ್ಪ ಸಮಯ ಸುಮ್ಮನಿದ್ದು ಆಮೇಲೆ ಸರಯೂ ಎಂದಳು "ನಾನು

ತಿಳಿದುಕೊಂಡಷ್ಟು ಇಷ್ಟು: ನನ್ನಂಥ ಸಾವಿರಾರು ದಾಸಿಯರ ಕೊರತೆ ನಿನಗಿರುತ್ತಿರಲಿಲ್ಲ !''

ಆಕೆಯ ಕೋಮಲವಾದ ಕರವನ್ನು ಒತ್ತುತ್ತ ಚಂದ್ರನಾಥನೆಂದ–"ಅದು ನನಗೆ ಗೊತ್ತಿಲ್ಲ. ನನಗಿರುವುದು ಒಬ್ಬಳೇ ಒಬ್ಬಳು ದಾಸಿ ಅವಳು ಇದ್ದಿಲ್ಲವಾದರೆ ಹೇಗೆ ಎಂದು ಯೋಚಿಸುತ್ತಿದ್ದೇನೆ. ನಿನಗೆ ಇಷ್ಟವಿದ್ದರೆ ಸಾವಿರಾರು ದಾಸಿಯರ ವಿಷಯ ಯೋಚಿಸಿ ನೋಡು."

ಮರುದಿನ ಹರಿಬಾಲೆ ಬಂದಳು. ಆದರೆ ಅವಳ ಮುಖದ ಮೇಲೆ ಕಳೆ ಮೊದಲಿನಂತಿರಲಿಲ್ಲ; ಬದಲಾಗಿತ್ತು. ದಿನದಂತೆ ಸರಯೂಳನ್ನು ಅಪ್ಪಿಕೊಂಡು "ಸಖೀ ಸಖೀ" ಎಂದು ಹೇಳಿಸಲು ಒತ್ತಾಯ ಪಡಿಸಲಿಲ್ಲ; ಆಡುವುದಕ್ಕೆ ಇಸ್ಪೀಟು ಬೇಡಲಿಲ್ಲ; ರಮಿಸಿ ತನ್ನನ್ನು ತಣಿಸಿಕೊಳ್ಳಲು ಯತ್ನಿಸಲೂ ಇಲ್ಲ. ಮಲಿನ ಮುಖದವಳಾಗಿ ಸುಮ್ಮನೆ ಕುಳಿತಿದ್ದಳು.

"ಸಖೀ, ನಿನ್ನೆ ನೀವೇಕೆ ಬರಲಿಲ್ಲ ?"

"ನಿನ್ನೆ ಬಹಳ ಕೆಲಸವಿತ್ತು, ಸಖೀ. ನಿರ್ಮಲೆಯ ಮದುವೆ ಇದೆಯಲ್ಲವೆ ಆ ಮನೆಯಲ್ಲಿ !"

"ಹೌದು, ಕೇಳಿದ್ದೇನೆ. ಎಲ್ಲವೂ ಗೊತ್ತಾಯಿತೆ ?"

ಹರಿಬಾಲೆ ಸರಯೂಳ ಪ್ರಶ್ನೆಗೆ ಉತ್ತರವೀಯದೆ ಅವಳ ಮುಖವನ್ನು ನೋಡುತ್ತ ಎಂದಳು—"ಸಖೀ ಒಂದು ಮಾತಿದೆ, ಕೇಳಲೇ ? ಸರಿಯಾಗಿ ಉತ್ತರ ಕೊಡುತ್ತೀಯಾ ?"

"ಅದಾವ ಮಾತು ?"

"ನಿಜ ಹೇಳಿದರೆ ಕೇಳುತ್ತೇನೆ. ಇಲ್ಲದೆ ಹೋದರೆ ಕೇಳಿ ಪ್ರಯೋಜನವೇನು ?"

ಸರಯೂ ಚಿಂತಾಯುಕ್ತಳಾಗಿ ಎಂದಳು—"ಏಕೆ, ನಿಜವನ್ನೇಕೆ ಹೇಳುವುದಿಲ್ಲ ?"

"ಸಖೀ, ನನ್ನನ್ನು ನಂಬುತ್ತೀಯಷ್ಟೆ ?"

"ಅಹುದು, ನಂಬುವುದಿಲ್ಲವೇಕೆ ?"

"ಸರಿ, ಹೇಳು ಹಾಗಾದರೆ ಚಂದ್ರನಾಥರು ನಿನ್ನನ್ನು ಎಷ್ಟು ಪ್ರೀತಿಸುತ್ತಾರೆ ?"

ಸರಯೂಗೆ ಸ್ವಲ್ಪ ನಾಚಿಕೆಯಾಯಿತು. "ನನ್ನನ್ನು ಕಂಡರೆ ಅವರಿಗೆ ತುಂಬಾ ಕನಿಕರ" ಎಂದಳು.

"ಅಲ್ಲ, ಕನಿಕರದ ಮಾತು ಕೇಳುವುದಿಲ್ಲ ನಾನು. ನಾನು ಕೇಳುವುದು ನಿನ್ನನ್ನು ಬಹಳವಾಗಿ ಪ್ರೀತಿಸುತ್ತಾರೊ ಇಲ್ಲವೊ ಎಂದು."

ಸರಯೂ ನಕ್ಕುಬಿಟ್ಟಳು. ಆ ಮೇಲೆ "ನನ್ನನ್ನು ಎಷ್ಟು ಪ್ರೀತಿಸುತ್ತಾರೆಂಬುದು ನನಗೆ ಹೇಗೆ ಗೊತ್ತಾಗಬೇಕು ?" ಎಂದಳು.

"ನಿಜವಾಗಿಯೂ ನಿನಗೆ ಗೊತ್ತಿಲ್ಲವೆ ?"

"ಇಲ್ಲ."

ನಿಜವಾಗಿಯೂ ಸರಯೂಗೆ ಇದು ಗೊತ್ತಿರಲಿಲ್ಲ. ಹರಿಬಾಲೆ ಈಗ ವಿಚಾರದ ತೊಡಕಿನಲ್ಲಿ ಸಿಕ್ಕಳು. ಅವಳು ತಲೆಯಲ್ಲಾಡಿಸಿ ಎಂದಳು— "ಪತಿ ತನ್ನನ್ನು ಎಷ್ಟು ಪ್ರೀತಿಸುವರೆಂಬುದನ್ನು ಹೆಂಡತಿ ಅರಿಯಳೆ! ಸರಿ, ನನಗೆ ಏಕೊ ಅನುಮಾನವೆನಿಸುವುದು ಇಲ್ಲಿಯೆ."

ಆಗ ಹರಿಬಾಲೆಯ ಮುಖವನ್ನು ನೋಡಿದರೆ ಅವಳ ಅಂತಃಕರಣದಲ್ಲಿ ಯಾವುದೊ ಒಂದು ಸಂಶಯವು ಮನೆಮಾಡಿದೆಯೆಂದು ಎನಿಸುತ್ತಿದ್ದಿತು. ಈ ಮಾತು ಸರಯೂನಿಗೂ ಹೊಳೆಯಿತು. ಅವಳೂ ಸಂಶಯ ಗ್ರಸ್ತಳಾಗಿ "ಅಂಜಿಕೆ ಯಾತರದು ?" ಎಂದು ಕೇಳಿದಳು.

"ಮತ್ತೆಂದಾದರೂ ಹೇಳುತ್ತೇನೆ."

ಸ್ವಲ್ಪ ಹೊತ್ತಿನ ಮೇಲೆ ಸರಯೂನ ಗದ್ದವನ್ನು ಹಿಡಿದು ಹರಿಬಾಲೆ ಕೋಮಲ ಸ್ವರದಿಂದ ಮಾತಾಡಿದಳು—"ಏನು ಸಖೀ, ಇಷ್ಟು ರೂಪ, ಇಷ್ಟು ಗುಣ ಇಷ್ಟು ಬುದ್ಧಿ ಇಟ್ಟುಕೊಂಡು ಇಷ್ಟು ದಿನ ಏನು ಉದ್ದು ಹುರಿಯುತ್ತಿದ್ದೆಯಾ ?"

ಸರಯೂ ನಕ್ಕುಬಿಟ್ಟಳು.

೬

ಈ ಸಂಗತಿ ಯಾರಿಗೂ ತಿಳಿದಿರಲಿಲ್ಲವಾದರೂ ಹರಿದಯಾಲರ ಸಂದೇಹದಲ್ಲಿ ಮಾತ್ರ ಅದು ಅಡಗಿದ್ದಿತು. ನೋಡಲಿಕ್ಕೆ ಸಭ್ಯ ಗೃಹಸ್ಥನಂತೆ

ಕಂಡರೂ ಹರಕು ಹರಕಾದ ಬಟ್ಟೆಗಳನ್ನು ಧರಿಸಿದ ಒಬ್ಬ ಮನುಷ್ಯ ಅಡು
ಮಾಡುವ ಬ್ರಾಹ್ಮಣಿ—ಸುಲೋಚನೆಯು—ಬಳಿಗೆ ಬಂದು ಎರಡು ಮೂರ
ದಿನಗಳಿಂದ ಮಾತುಕತೆಯಾಡಿ ಹೋಗುತ್ತಿದ್ದಾನೆ. ಇದನ್ನು ಹರಿದಯ
ಲರು ಅರಿಯರೆಂದು ಸುಲೋಚನೆ ತಿಳಿದುಕೊಂಡಿದ್ದಳು. ಆದರೆ ಆಕೆಯ
ತಿಳುವಳಿಕೆ ತಪ್ಪಾಗಿದ್ದಿತು. ಹರಿದಯಾಲರಿಗೆ ಈ ಸಂಗತಿ ಗೊತ್ತಾ
ದ್ದಿತು.

ಇಂದು ಮಧ್ಯಾಹ್ನ ಹರಿದಯಾಲರು ಮತ್ತು ಅವರ ಚಿಕ್ಕಪ್ಪ ಕೈಲಾ
ಬಾಬು ಇಬ್ಬರೂ ಮನೆಯಲ್ಲಿ ಚದುರಂಗ ಆಡುತ್ತ ಕುಳಿತಿದ್ದರು. ಇಷ್ಟರಲ್ಲಿ
ಅಂಗಳದಲ್ಲಿ ಗಲಾಟೆಯಾಗುತ್ತಿರುವ ಧ್ವನಿ ಕೇಳಿಬಂತು. ಯಾರೊ ದೀನರಾ
ಕೋಮಲ ಸ್ವರದಲ್ಲಿ ಭಿಕ್ಷೆ ಬೇಡುವಂತೆಯೂ ಇನ್ನೊಬ್ಬರು ಕರ್ಕಶ ದನಿಯಿಂ
ಕಠೋರ ನುಡಿಗಳನ್ನಾಡಿ ತಿರಸ್ಕರಿಸುವಂತೆಯೂ ಬೆದರಿಸುತ್ತಿರುವಂತೆಯೂ
ಕೇಳಿಸಿತು. ಅವರಲ್ಲಿ ಒಬ್ಬರು ಹೆಂಗಸು, ಇನ್ನೊಬ್ಬರು ಗಂಡಸು
"ಚಿಕ್ಕಪ್ಪ, ಇದೇನು ಗದ್ದಲ ಅಂಗಳದಲ್ಲಿ!" ಎಂದರು ಹರಿದಯಾಲರು.

ಕೈಲಾಸಬಾಬು "ನೋಡು ಎಚ್ಚರ, ಸೋತುಬಿಟ್ಟೆಯಾ" ಎಂದರು

ಸ್ವಲ್ಪ ಹೊತ್ತು ಏನೂ ಕೇಳಿಸಲಿಲ್ಲ. ಮತ್ತೆ ಕ್ಷಣಕಾಲದ ನಂತ
ದನಿಯು ಕೇಳಲಾರಂಭಿಸಿತು. ಹರಿದಯಾಲರು ಎದ್ದುನಿಂತು "ಸ್ವಲ್ಪ
ತಡೆಯಿರಿ, ನೋಡಿಬರುತ್ತೇನೆ" ಎಂದರು.

ಕೈಲಾಸಬಾಬುಗಳು ಅವರ ದೋತರದ ಚುಂಗು ಹಿಡಿದು "ನೋಡಿರಿ,
ನಿಮ್ಮ ಆಟ ಸೋಲಿನ ಕಡೆಗೆ ಸಾಗಿದೆ" ಎಂದರು.

ಹರಿದಯಾದರು ಪುನಃ ಕುಳಿತುಕೊಂಡರು. ಆದರೆ ಸದ್ದು ನಿಲ್ಲಲೆ
ಇಲ್ಲ. ನಿರುಪಾಯರಾಗಿ ಹರಿದಯಾಲರು ಮತ್ತೆ ಎದ್ದು ನಿಂತರು. ಅಂಗ
ಳಕ್ಕೆ ಹೋಗಿ ನೋಡಿದರು. ಸುಲೋಚನೆ ಯಾವನೊ ಒಬ್ಬನ ಕಾಲು
ಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತಿದ್ದಾಳೆ. ಅವನು ಒಂದೆ
ಸಮನೆ ಕೂಗಿ ಕೂಗಿ "ನಾನು ಹೇಳಿದಂತೆ ಕೇಳು. ಇಲ್ಲದೆ ಹೋದರೆ
ನೋಡು, ನಾನು ಆಡಿದಂತೆ ಮಾಡಿ ತೋರಿಸುತ್ತೇನೆ" ಎನ್ನುತ್ತಿದ್ದಾನೆ.

ಅವಳು ಅಳುತ್ತ ಅಳುತ್ತ "ನನ್ನನ್ನು ಕ್ಷಮಿಸಿರಿ. ಒಂದು ಸಲವೇನೊ

ನನ್ನ ಸರಸ್ವವನ್ನು ಹಾಳುಮಾಡಿ ಬಿಟ್ಟಿದ್ದೀರಿ. ಈಗ ಉಳಿವ ಅಲ್ಪ ಸ್ವಲ್ಪ ವನ್ನೂ ಸೂರೆಗೊಳ್ಳಬೇಡಿರಿ'' ಎನ್ನುತ್ತಿದ್ದಾಳೆ.

ಆ ವ್ಯಕ್ತಿ ''ನಿನ್ನ ಮಗಳು ಇಷ್ಟು ದೊಡ್ಡ ಮನೆಯವರ ಕೈ ಹಿಡಿದಿದ್ದಾಳೆ, ನೀನು ೨೦೦೦ ರೂಪಾಯಿ ಕೊಡಲಾರೆಯಾ? ರೂಪಾಯಿ ಕೊಟ್ಟ ಕೂಡಲೆ ಇಲ್ಲಿಂದ ಹೊರಟು ಹೋಗುತ್ತೇನೆ'' ಎಂದು ಹೇಳುತ್ತಿದ್ದಾನೆ.

"ನೀವು ಹೆಂಡ ಕುಡಿಯುತ್ತೀರಿ. ನಿಮ್ಮ ನಡತೆ ಚೆನ್ನಾಗಿಲ್ಲ. ಎರಡು ಸಾವಿರ ರೂಪಾಯಿ ನಿಮ್ಮ ಕೈಯಲ್ಲಿ ಎಷ್ಟು ದಿನ ನಿಂತಾವು? ಮುಗಿದೊಡನೆ ಮತ್ತೆ ಬರುತ್ತೀರಿ, ಮತ್ತೆ ಕೇಳುತ್ತೀರಿ. ಏನು ಮಾಡಿದರೂ ನಾನು ರೂಪಾಯಿ ಕೊಡಲಾರೆ."

''ಇಗೊ, ಹೆಂಡ ಕುಡಿಯುವುದನ್ನು ಬಿಟ್ಟುಬಿಟ್ಟೆ. ವ್ಯಾಪಾರ ಮಾಡುತ್ತೇನೆ; ಇನ್ನೆಂದೂ ನಿನ್ನ ಬಳಿ ರೂಪಾಯಿ ಕೇಳಲಿಕ್ಕೆ ಬರುವುದಿಲ್ಲ."

ಸುಲೋಚನೆ ಉತ್ತರವೀಯಲಿಲ್ಲ. ಭೂಮಿಯ ಮೇಲೆ ತಲೆಯನ್ನಪ್ಪಳಿಸಿ ಕರಜೋಡಿಸಿ ಎಂದಳು—''ನನ್ನ ಮೇಲೆ ಅಷ್ಟು ದಯೆ ತೋರಿಸಿರಿ. ರೂಪಾಯಿಗಳಿಗಾಗಿ ನಾನು ಸರಯೂನನ್ನು ಕೇಳಲಾರೆ. ಆ ಕೆಲಸ ನನ್ನಿಂದಾಗದು."

ಹರಿದಯಾಲರು ಹತ್ತಿರ ಬಂದು ನಿಂತುದನ್ನು ಅವರಿಬ್ಬರಲ್ಲಿ ಒಬ್ಬರೂ ನೋಡಿರಲಿಲ್ಲ. ಆದುದರಿಂದಲೇ ಉಚ್ಚ ಸ್ವರದಲ್ಲಿ ಮಾತು ಕತೆಗಳು ನಡೆದಿದ್ದವು. ಹರಿದಯಾಲರು ದೃಷ್ಟಿಗೆ ಬೀಳುತ್ತಲೆ ಇಬ್ಬರೂ ಬೆಚ್ಚಿಬಿದ್ದರು. ಹರಿದಯಾಲರು ಆ ಹೊಸ ಅಪರಿಚಿತ ವ್ಯಕ್ತಿಯ ಬಳಿಗೆ ಹೋಗಿ "ನೀನು ಯಾರ ಅಪ್ಪಣೆಯಿಂದ ಈ ಮನೆಯಲ್ಲಿ ಕಾಲಿಟ್ಟೆ?" ಎಂದು ಕೇಳಿದರು.

ಆ ಮನುಷ್ಯ ಸ್ವಲ್ಪ ಹೊತ್ತು ಬೆಪ್ಪನಾದ. ಇದು ವರೆಗೆ ತಾನು ಮಾಡಿದುದು ಕಟ್ಟಳೆಯ ದೃಷ್ಟಿಯಿಂದ ತಪ್ಪೆಂದು ತಿಳುವಳಿಕೆಯಾದ ಮೇಲೆ ಅಲ್ಲಿಂದ ಕಂಬಿ ಕೀಳತೊಡಗಿದ. ಆದರೆ ಕೂಡಲೆ ಹರಿದಯಾಲರು ಅವನ ಕೈಹಿಡಿದು ಕೂಗಿ ಕೇಳಿದರು—"ಹೇಳು, ಯಾರ ಅಪ್ಪಣೆಯಿಂದ ಒಳಕ್ಕೆ ಬಂದೆ?"

ಓಡಿಹೋಗಲು ಉಪಾಯವಿಲ್ಲವಾದುದರಿಂದ ಸಾಹಸಮಾಡಿ ನುಡಿದ— "ಸುಲೋಚನೆಯ ಕಡೆಗೆ ಬಂದಿದ್ದೆ.''

ಅವನ ಬಾಯಿಂದ ದುರ್ವಾಸನೆ ಬರುತ್ತಿದ್ದಿತು. ಶರೀರದ ಮೇಲೆ ದುರ್ಜಡತೆಯ ಹೀನ ಮಲಿನ ಛಾಯೆಯು ಬಿದ್ದಿದ್ದಿತು. ಹರಿದಯಾಲರು ತಿರಸ್ಕಾರದಿಂದ ತಮ್ಮ ತುಟಿಗಳನ್ನು ಮುದುಡಿಸಿಕೊಂಡು ಮೊದಲಿನಂತೆಯೆ ಕರ್ಕಶವಾಗಿ ಕೇಳಿದರು—"ಯಾರ ಅಪ್ಪಣೆಯಿಂದ ಬಂದೆ ?"

"ಅಪ್ಪಣೆ ಏಕೆ ?"

ಈಗ ಆ ವ್ಯಕ್ತಿಯ ಮುಖದ ಮೇಲಿನ ಭಾವ ಬದಲಾಗಿದ್ದಿತು. ಈ ಪ್ರಶ್ನೆ ಕೇಳುವವನ ಮೇಲೂ ಈ ಮನೆಯ ಮೇಲೂ ತನಗೆ ಸ್ವಲ್ಪ ಅಧಿಕಾರ ವಿದೆಯೆಂದು ಎನಿಸಿತು ಅವನಿಗೆ. ಆದುದರಿಂದಲೇ ಹಾಗೆ ಕೇಳಿ ಬಿಟ್ಟ ನೇನೊ ? ಅಂತೂ ಈ ಪ್ರಶ್ನೆ ಕೇಳಿ ಹರಿದಯಾಲರಿಗೆ ವಿಪರೀತ ಕೋಪ ಬಂದಿತು. ಅವರು ಪುನಃ ಉಚ್ಚಸ್ವರದಿಂದ ಕೇಳಿದರು—"ಬದ್‌ಮಾಷ್, ಕುಡಕ, ನಿನ್ನನ್ನು ಈಗಲೇ ಸೆರೆಗೆ ಕಳುಹಿಸಿಬಿಟ್ಟೇನು ತಿಳಿಯಿತೇ ?"

ಅವನು ಸ್ವಲ್ಪ ಗಂಟಲು ನೋರೆಯಿಂದ ಎಂದ—"ಓಹೊ, ತಿಳಿಯದೆ ಏನು ?"

ಹರಿದಯಾಲರು ಅವನನ್ನು ಹೊಡೆಯಲೂ ಸಿದ್ಧರಾದರು. "ತಿಳಿದಿದ್ದರೆ ನಡೆ, ಈಗಲೇ ಪೋಲೀಸರ ಕೈಗೆ ಕೊಡುತ್ತೇನೆ" ಎಂದರು.

ಅವನು ಒಂದು ಭಾವಪೂರ್ಣವಾದ ನಗೆನಕ್ಕ—ತಾನು ಪೋಲೀಸರ ವಶಕ್ಕೆ ಹೋಗಲು ಅಭ್ಯಂತರವೂ ಇಲ್ಲವೆಂದು. "ಈಗಲೆ ಪೋಲೀಸ್ ಕಚೇರಿಗೆ ಕರೆದೊಯ್ಯುವಿರೋ ?" ಎಂದು ಕೇಳಿದ.

ಹರಿದಯಾಲರು ಅವನನ್ನು ಸ್ವಲ್ಪ ನೂಕಿ ಎಂದರು—"ಹೌದು, ಈಗಲೇ."

ಆ ದೂಡುವಿಕೆಯನ್ನು ಸ್ವಲ್ಪ ತಡೆದುಕೊಂಡು ಗಂಭೀರವಾಗಿ ಸ್ಥಿರವಾಗಿ ಅವನೆಂದ—"ಪುರೋಹಿತರೆ, ಒಮ್ಮೆಲೆ ಈ ಮಲ್ಲತನ ತೋರಿಸಬೇಡಿರಿ. ಪೋಲೀಸರ ಕೈಗೆ ಕೊಡಿರಿ, ಬೇಕಾದರೆ ಪೋಲೀಸ್ ಕಚೇರಿಗೆ ಕಳುಹಿಸಿರಿ. ಆದರೆ ಸ್ವಲ್ಪ ಸಾವಕಾಶವಾಗಿ ಕೆಲಸ ಮಾಡಿರಿ. ಒಂದು ಮಾತು ಮಾತ್ರ ನೆನಪಿನಲ್ಲಿಡಿರಿ—ನಾನು ನಿಮ್ಮನ್ನು ಬನಾರಸಿನಲ್ಲಿ ಇರಗೊಡದಂತೆ ಮಾಡಬಲ್ಲೆ ಎಚ್ಚರ !"

ಹರಿದಯಾಲರು ಹುಚ್ಚರಂತಾಗಿ ಕಿರಿಚತೊಡಗಿದರು—"ನಡೆಯೊ, ನಡೆ! ಬನಾರಸಿನಲ್ಲಿ ಇರತೊಡಗಿ ನಾಲ್ವತ್ತು ವರುಷಗಳಾಗಿ ಹೋದವು. ಈ ಹೊತ್ತು ಬಂದಿದ್ದಾನೆ ಬನಾರಸ್ ಬಿಡಿಸಲಿಕ್ಕೆ! ನಡೆ ನಡೆ!"

ಹರಿದಯಾಲರಿಗೆ ಈ ಮನುಷ್ಯ ಪುಂಡರ ಹೆದರಿಕೆ ತೋರಿಸಲು ಬಂದಿದ್ದಾನೆಂದು ತೋರಿತು. ಇಂತಹ ಮಾತುಗಳಿಗೆ ಬಹಳ ಜನರು ಹೆದರಿಯೂ ಹೆದರುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಹರಿದಯಾಲರು ಎಷ್ಟೋ ದಿನಗಳಿಂದ ಕಾಶಿಯಲ್ಲಿ ಇರುತ್ತಿರುವುದರಿಂದ ಅವರಿಗೆ ಈ ತೆರದ ಮಾತುಗಳಿಂದ ಭಯವಾಗಲಿಲ್ಲ. ಅವರು ಕೋಪದಿಂದ "ಬಂದಿದ್ದಾನೆ ನಮಗೆ ಹೆದರಿಕೆ ತೋರಿಸಲಿಕ್ಕೆ! ನಡೆ ನಡೆ!!" ಎಂದದ್ದು ಅದಕ್ಕಾಗಿಯೆ.

"ಪುರೋಹಿತರೆ, ಪುಂಡತನವನ್ನೇನೂ ತೋರಿಸುವುದಿಲ್ಲ. ಪೋಲೀಸ್ ಕಚೇರಿಗೇ ಕರೆದುಕೊಂಡು ನಡೆಯಿರಿ. ಎಲ್ಲ ಗುಟ್ಟನ್ನು ಅಲ್ಲಿಯೆ ರಟ್ಟುಮಾಡಿ ಬಿಡುತ್ತೇನೆ.

"ಯಾವ ಗುಟ್ಟೊ, ನೀನು ರಟ್ಟುಮಾಡುವುದು?"

"ನನಗೆ ಗೊತ್ತಿದ್ದುದನ್ನು. ಆಮೇಲೆ ನೋಡುತ್ತೇನೆ ನೀವು ಕಾಶಿಯಿಂದ ಹೇಗೆ ಓಡಿಹೋಗುವುದಿಲ್ಲವೊ ಎಂದು. ನೀವು ಓಡಿಹೋಗಬೇಕೆಂದರೂ ನಿಮಗೆ ಆಗದು. ಆಮೇಲೆ ಇಡಿ ದೇಶದವರಿಗೆ ನೀವು ಜಾತಿಭ್ರಷ್ಟರೆಂದೂ ಅಬ್ರಾಹ್ಮಣರೆಂದೂ ಗೊತ್ತಾಗುವುದು ಕಂಡಿರಾ?"

"ನಾನು ಜಾತಿಭ್ರಷ್ಟ? ಅಬ್ರಾಹ್ಮಣ?"

"ಪುರೋಹಿತರೆ, ಸಿಟ್ಟಾಗಬೇಡಿರಿ. ನೀವೊಬ್ಬರೆ ಜಾತಿ ಭ್ರಷ್ಟರಾಗಿಲ್ಲ. ಇದುವರೆಗೆ ನಿಮ್ಮನ್ನು ನಂಬಿ ನಿಮ್ಮ ಬಳಿ ಬಂದವರೆಲ್ಲರ—ಈಗ ಮೂರು ವರ್ಷಗಳಿಂದ ನಿಮ್ಮ ಮನೆಯಲ್ಲಿ ಊಟ ಮಾಡಿದವರೆಲ್ಲರ—ಜಾತಿಯನ್ನು ನೀವು ಕೆಡಿಸಿದ್ದೀರಿ. ಅವರೆಲ್ಲರಿಗೂ ಈ ಸಂಗತಿಯನ್ನು ತಿಳಿಸದೆ ಬಿಡುವುದಿಲ್ಲ, ತಿಳಿಯಿತೆ?"

ಈಗ ಹರಿದಯಾಲರಿಗೆ ಸ್ವಲ್ಪ ಹೆದರಿಕೆಯಾದಂತಾಯಿತು. ಹೆದರಿಕೆಯ ಕಾರಣವನ್ನು ಅರಿತುಕೊಳ್ಳುವ ಮೊದಲೇ ಅವರ ಸ್ವರವು ಕುಗ್ಗಿತು. "ನಾನು ಜನರ ಜಾತಿಯನ್ನು ಕೆಡಿಸಿದ್ದೇನೆಯೆ?" ಎಂದು ಅವರು ಕೇಳಿದರು.

"ನಿಃಸಂದೇಹವಾಗಿ. ಸಿದ್ಧಮಾಡಿ ತೋರಿಸಬಲ್ಲೆ, ಕಂಡಿರಾ ?"

ಹರಿದಯಾಲರು ಸ್ವಲ್ಪ ತಣ್ಣಗಾಗಿ ಮೆಲ್ಲಗೆ ಕೇಳಿದರು—"ಏನಪ್ಪಾ, ಏನದು ? ಸ್ಪಷ್ಟವಾಗಿ ನುಡಿಯಬಾರದೆ !"

ಅವನು ನಸುನಕ್ಕು ಹೇಳಿದ–"ಒಬ್ಬರೇ ಕೇಳುವಿರೊ ? ಹತ್ತುಹನ್ನೆರಡು ಜನರನ್ನಾದರೂ ಕರೆಯಿಸಿಕೊಳ್ಳುವಿರೊ ? ನೆರೆಹೊರೆಯ ಹತ್ತೆಂಟು ಜನರೊಂದಿಗೆ ಕೇಳಿದರೆ ಒಳ್ಳೇದೆಂದು ತೋರುತ್ತದೆ."

ಹರಿದಯಾಲರು ಆತನ ಕೈಹಿಡಿದು ಎಂದರು—"ಸಿಟ್ಟಾಗ ಬೇಡಯ್ಯ. ಸ್ವಲ್ಪ ಸಿಟ್ಟಿನ ಭರದಲ್ಲಿ ನಿನಗೆ ಏನೇನೊ ಎಂದೆ. ಅದನ್ನು ಲಕ್ಷ್ಯದಲ್ಲಿಡ ಬೇಡ. ನಡೆ, ಒಳಗೆ ನಡೆ."

ಇಬ್ಬರೂ ಒಂದು ಕೋಣೆಯಲ್ಲಿ ಕುಳಿತುಕೊಂಡರು. ಆಮೇಲೆ ಹರಿದಯಾಲರು "ಏನದು ? ಹೇಳು ನೋಡೋಣ ?" ಎಂದರು.

"ನಿಮ್ಮ ಮನೆಯಲ್ಲಿ ಅಡುಗೆ ಮಾಡುವ ಸುಲೋಚನೆ ಇಲ್ಲವೆ ? ಅವಳು ನಿಮಗೆ ಎಲ್ಲಿ ಸಿಕ್ಕಳು ?"

"ಇಲ್ಲಿಯೆ ಅವಳು ಸಿಕ್ಕಿದ್ದು. ಯಾರ ಸಹಾಯವೂ ಇಲ್ಲದ ಅನಾಥ ಹುಡಿಗೆ. ಆದ್ದರಿಂದ ನಾನು ಅವಳಿಗೆ ಆಶ್ರಯ ಕೊಟ್ಟೆ."

"ನೀವು ಆಶ್ರಯ ಕೊಟ್ಟದ್ದು ಹಣವಂತಿಗೆ ಎಂದು ನನ್ನ ಅಭಿಪ್ರಾಯ ವಲ್ಲ. ಅವಳು ಯಾವ ಜಾತಿಯವಳೆಂಬುದನ್ನು ತಿಳಿದುಕೊಂಡಿರುವಿರಾ ? ಎಂದು ನಾನು ಕೇಳುವುದು."

ಹರಿದಯಾಲರ ಮುಖ ಒಮ್ಮೆಲೆ ಕಳೆಗುಂದಿತು. ಅವರು "ಅವಳು ಬ್ರಾಹ್ಮಣರ ಹುಡಿಗೆ. ವಿಧವೆ. ಆಚರಣೆ ಶುದ್ಧವಾಗಿದೆ. ಎಂದ ಮೇಲೆ ಆಕೆಯ ಅಡುಗೆ ಉಣ್ಣುವುದರಲ್ಲಿ ದೋಷವೇನು ?" ಎಂದರು.

"ಅವಳು ಬ್ರಾಹ್ಮಣರ ಹುಡುಗಿಯೂ ನಿಜ, ವಿಧವೆಯೂ ನಿಜ. ಆದರೆ ಕುಲಗೇಡಿಗೆ ಶುದ್ಧಾಚರಣೆಯವಳೆಂದು ಹೇಳಬಹುದೆ ? ಅವಳು ಮಾಡಿದ ಅಡುಗೆಯನ್ನು ಉಣ್ಣಬಹುದೆ ?"

ಹರಿದಯಾಲರು ನಾಲಗೆಯನ್ನು ಕಚ್ಚಿಕೊಳ್ಳುತ್ತ "ಶಿವ ! ಶಿವ ! ಅಂಥವಳ ಅಡುಗೆಯನ್ನು ಹೇಗೆ ಉಣ್ಣುವುದು !" ಎಂದರು.

"ನಿಜಸ್ಥಿತಿ ಹೀಗಿವೆ : ೧೫-೧೬ ವರ್ಷಗಳ ಹಿಂದೆ ಸುಲೋಚನೆ ಮೂರು ವರ್ಷದ ಮಗಳೊಂದಿಗೆ ಮನೆಬಿಟ್ಟು ಹೊರಬಿದ್ದಳು. ಅವಳಿಗೆ ಆಶ್ರಯ ಕೊಟ್ಟು ನಿಮ್ಮ ಜಾತಿ ಮಾತ್ರವಲ್ಲ, ಇನ್ನೂ ಹಲವರ ಜಾತಿ, ಧರ್ಮ, ಕೆಡಿಸಿ ಬಿಟ್ಟರು."

"ಇದಕ್ಕೆ ಆಧಾರ?"

"ಅದಕ್ಕೇನು ಕಡಿಮೆ? ಯಾರೊಡನೆ ಈಕೆ ಮನೆಬಿಟ್ಟು ಹೊರಬಿದ್ದಿದ್ದಳೊ ಆ ನಿಸ್ಸೀಮ ವ್ಯಕ್ತಿ ರಾಖಾಲ್ ಭಟ್ಟಾಚಾರ್ಯರು ಇನ್ನೂ ಬದುಕಿದ್ದಾರೆ."

ಹರಿದಯಾಲರು ಆ ವ್ಯಕ್ತಿಯ ಮುಖವನ್ನು ಕೆಲವು ನಿಮಿಷ ಒಂದೇ ಸಮನೆ ನೋಡತೊಡಗಿದರು. ಈ ವ್ಯಕ್ತಿಯ ಹೆಸರೆ 'ರಾಖಾಲ್' ಎಂದು ತಿಳಿದುಕೊಂಡರೇನೊ? ಅವರು "ನೀವು ಬ್ರಾಹ್ಮಣರೆ?" ಎಂದು ಕೇಳಿದರು.

ಆ ಮನುಷ್ಯ ತನ್ನ ಅತಿ ಹೊಲಸಾದ ಬಟ್ಟೆಯನ್ನು ಓರೆಮಾಡಿ, ಬಟ್ಟೆಗಿಂತಲೂ ಹೊಲಸಾದ, ಅಲ್ಲಲ್ಲಿ ಹರಿದ, ಯಜ್ಞೋಪವೀತವನ್ನು ತೋರಿಸಿ ನಗುತ್ತ "ಅಲ್ಲ, ನಾನು ಗೌಳಿಗ!" ಎಂದ.

ಹರಿದಯಾಲರು ಸ್ವಲ್ಪ ಹಿಂದೆ ಸರಿದು ಕುಳಿತರು. ಮತ್ತೆ "ನೋಡಲಿಕ್ಕೆ ನೀವು ಹೊಲೆಯರ ಹಾಗೆ ಕಾಣುತ್ತೀರಿ. ಇರಲಿ, ನಮಸ್ಕಾರ ನಿಮಗೆ!" ಎಂದರು.

ಆ ಮನುಷ್ಯನಿಗೆ ಈ ವ್ಯಂಗ್ಯ ನುಡಿಗಳಿಂದ ಸಿಟ್ಟು ಬರಲಿಲ್ಲ. ಅವನು ಎಂದ—"ನಮಸ್ಕಾರ. ನಿಮ್ಮ ಅನುಮಾನವೂ ಸುಳ್ಳಲ್ಲ. ನನಗೆ ಹೊಲೆಯನೆಂದು ಎನ್ನಬಹುದು, ಮುಸಲ್ಮಾನನೆನ್ನಬಹುದು, ಕ್ರಿಶ್ಚಿಯನ್ ಎಂದೂ ಹೇಳಬಹುದು. ನಾನು ಜಾತಿ, ಪಂಕ್ತಿಗಳನ್ನು ಮನ್ನಿಸುವುದಿಲ್ಲ; ನಾನು ಅತೀತ."

"ನೀವು ಶುದ್ಧ ನಾಸ್ತಿಕರು."

"ಇದನ್ನು ಹೇಳುವ ಅಗತ್ಯವಿಲ್ಲ. ಇದಕ್ಕೂ ಮೊದಲು ಎಷ್ಟೊ ಜನಗಳು ನನಗೆ ಹೀಗೆ ಎಂದಿದ್ದಾರೆ. ಮೊದಲು ನಾನು ಏನಿದ್ದೆ, ಈಗ ಏನಿದ್ದೇನೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ನಾನು ರಾಖಾಲದಾಸನು ಎಂಬುದರಲ್ಲಿ ಎಳ್ಳುಕಾಳಷ್ಟೂ ಸಂದೇಹವಿಲ್ಲ."

ಹರಿದಯಾಲರ ಮುಖವು ಸಿಟ್ಟಿನಿಂದ ಕೆಂಪೇರಿತು. ತಮ್ಮ ಭಾವನೆ ಗಳನ್ನು ಬಹು ಕಷ್ಟದಿಂದ ಹತ್ತಿಕ್ಕಿಕೊಂಡು "ಆಗಲಿ, ನೀವು ಈಗ ಏನು ಮಾಡಬೇಕೆನ್ನುತ್ತೀರಿ? ಸುಲೋಚನೆಯನ್ನು ಕರೆದುಕೊಂಡು ಹೋಗ ಬೇಕೆನ್ನುವಿರೊ?" ಎಂದರು.

"ಇಲ್ಲ. ಕರೆದುಕೊಂಡು ಹೋದರೆ ನಿಮಗೆ ಊಟ ಉಡಿಗೆಗೆ ತೊಂದರೆಯಾದೀತು. ನಾನು ಅಷ್ಟು ನೀಚನಲ್ಲ.'

ಈ ಉಪವಾಸವನ್ನು ಅತ್ಯಂತ ಕಷ್ಟದಿಂದ ಸಹಿಸಿಕೊಂಡು ಹರಿದಯಾ ಲರು "ಸರಿ ಹಾಗಾದರೆ, ನಿಮಗೇನು ಬೇಕು? ಇಲ್ಲಿಗೆ ಏಕೆ ಬಂದಿದ್ದೀರಿ? ಎಂಬುದನ್ನಾದರೂ ಹೇಳಿರಿ" ಎಂದು ಕೇಳಿದರು.

"ನನಗೆ ಹಣ ಬೇಕು. ಒಂದು ಕಾಸು ಕೂಡ ಹತ್ತಿರ ಇಲ್ಲ. ಬಹು ತೊಂದರೆಯಲ್ಲಿದ್ದೇನೆ. ಅದಕ್ಕೋಸ್ಕರವೆ ನಾನು ಬಂದದ್ದು. ಎರಡು ಸಾವಿರ ರೂಪಾಯಿ ಸಿಕ್ಕರೆ ಮರುಮಾತಾಡದೆ ಹೊರಟುಹೋಗುತ್ತೇನೆ. ಇದನ್ನೇ ಹೇಳುವುದಕ್ಕೆ ಬಂದಿದ್ದೆ."

"ಸರಿ ಸರಿ, ಇಷ್ಟು ರೂಪಾಯಿ ನಿಮಗಾರು ಕೊಟ್ಟಾರು?"

"ಅಗತ್ಯವಿದ್ದವರು. ನೀವು ಕೊಡಲಾರಿರಾ? ನಿಮ್ಮ ಸುಲೋಚನೆಗೆ ಶ್ರೀಮಂತ ಅಳಿಯನಿದ್ದಾನೆ. ಆತನು ಕೊಡಲಾರನೆ?"

ಆ ಮನುಷ್ಯನ ದುರಾಸೆಯಿಂದ ಹರಿದಯಾಲರಿಗೆ ಮನದಲ್ಲಿಯೆ ಆಶ್ಚರ್ಯವಾಯಿತು. ಅವನು ಬಹಳ ಧೂರ್ತನೆಂದೂ ಚಪಲನೆಂದೂ ಎನಿ ಸದೆ ಇರಲಿಲ್ಲ. ಅವರೆಂದರು—"ಏನಪ್ಪಾ, ನಾನು ಬಡವ. ಇಷ್ಟು ರೂಪಾಯಿ ಈ ಕಣ್ಣುಗಳಿಂದ ಎಂದೂ ನೋಡಿಲ್ಲ. ಸುಲೋಚನೆಯ ಅಳಿಯನೇನೋ ಇಷ್ಟು ರೂಪಾಯಿ ಕೊಡಬಲ್ಲ. ಆದರೆ ಅವನೂ ಕೊಡಲಿ ಕ್ಕಿಲ್ಲ. ನಿನಗೆ ಆವನ ಪರಿಚಯವಿಲ್ಲ; ಅವನಿಗೆ ನಿನ್ನ ಪರಿಚಯವಿಲ್ಲ. ಹೆದರಿಸಿ ಬೆದರಿಸಿ ಅವನಿಂದ ರೂಪಾಯಿ ಕಿತ್ತುಕೊಳ್ಳುವುದು ಕಷ್ಟ. ನೀನು ಬುದ್ಧಿವಂತ ನೆಂಬುದನ್ನು ಬಲ್ಲೆ. ಅವನು ನಿನಗಿಂತಲೂ ಬುದ್ಧಿವಂತ. ಆದುದರಿಂದ ಇನ್ನೇನಾದರೂ ಹಂಚಿಕೆ ಹಾಕು. ಈ ಹಾದಿಯಿಂದ ಕೆಲಸವಾಗದು."

ರಾಖಾಲ್ ಮೊದಲು ಸ್ವಲ್ಪ ಹೊತ್ತು ಹರಿದಯಾಲರ ಮುಖವನ್ನೆ

ನೋಡುತ್ತಿದ್ದ ; ಆಮೇಲೆ ಸ್ವಲ್ಪ ನಕ್ಕು "ಸರಿ, ನೋಡೋಣ. ಈ ವಿಚಾರ ನನಗೆ ಸೇರಿದ್ದು. ನೋಡುವೆ; ಆದರೂ—ಯತ್ನೇ ಕೃತೇ ಯದಿ ನಸಿಧ್ಯತಿ...."

ಹರಿದಯಾಲರು ನಡುವೆ ಬಾಯಿಹಾಕಿ "ಸಾಕುಮಾಡು, ದೇವಭಾಷೆ ಯನ್ನು ಅಪವಿತ್ರಮಾಡಬೇಡ" ಎಂದರು.

"ಸರಿ. ಇನ್ನು ಹೆಚ್ಚುಕಾಲ ಇಲ್ಲಿ ನಾನು ನಿಲ್ಲಲಾರೆ. ನನಗೆ ಅವರ ವಿಳಾಸ ಹೇಳಿರಿ."

"ಸುಲೋಚನೆಯನ್ನೇ ಕೇಳಿಕೊಳ್ಳಿರಲ್ಲ!"

"ಆಕೆ ಹೇಳಲಿಕ್ಕಿಲ್ಲ, ನೀವೇ ಹೇಳಿರಿ."

"ನಾನೂ ಹೇಳದೆ ಇದ್ದರೆ ?"

ರಾಖಾಲನು ಶಾಂತಚಿತ್ತದಿಂದ "ನೀವು ಹೇಳಿಯೆ ಹೇಳುತ್ತೀರಿ. ಏಕೆಂದರೆ, ಹೇಳದೆ ಹೋದರೆ ನಾನು ಏನು ಮಾಡುವೆನೆಂದು ಮೊದಲೇ ಹೇಳಿಬಿಟ್ಟಿದ್ದೇನೆ" ಎಂದನು.

ಹರಿದಯಾಲರ ಮುಖವು ಒಣಗಿತು. "ಏನಪ್ಪಾ, ನಾನು ನಿನಗೇನು ಕೆಡುಕು ಮಾಡಿದ್ದೇನೆ?" ಎಂದು ಕೇಳಿದರು.

"ಇಲ್ಲ, ನೀವೇನೂ ಮಾಡಿಲ್ಲ. ಆದ್ದರಿಂದ ನಿಮಗೆ ಹೇಳುವುದಿಷ್ಟು: ನೀವು ಹೆಸರು, ಊರು ತಿಳಿಸಿದರೆ ಅಳಿಯನನ್ನು ಭೆಟ್ಟಿಯಾಗಿ ಬರುತ್ತೇನೆ. ಬಹಳ ದಿನಗಳಾದುವು, ಮಗಳನ್ನೂ ನೋಡಿಲ್ಲ. ಆಕೆಯನ್ನೂ ನೋಡಿ ಬರುತ್ತೇನೆ."

ಹರಿದಯಾಲರು ನಿಜವಾಗಿಯೂ ಹೆದರಿದ್ದರು. ಆದರೆ ಹೊರಗೆ ಮಾತ್ರ ಧೈರ್ಯದಿಂದ "ಈ ವಿಷಯದಲ್ಲಿ ನಿಮಗೆ ಸಹಾಯಮಾಡಲಾರೆ. ನಿಮಗೆ ತಿಳಿದಂತೆ ಮಾಡಿರಿ. ತಿಳಿಯದೆ ಯಾವುದೊ ಒಂದು ಪಾಪವು ನನ್ನಿಂದಾಯಿತು. ಅದಕ್ಕೋಸ್ಕರ ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತ ವನ್ನು ಮಾಡಿಕೊಳ್ಳುವೆ. ಆಮೇಲೆ ನನಗೇತರ ಹೆದರಿಕೆ?" ಎಂದರು.

"ನಿಮಗೆ ಯಾರ ಹೆದರಿಕೆಯೂ ಇಲ್ಲವಷ್ಟೆ? ಈ ಸುದ್ದಿ ಊರಿನ ಪುರೋಹಿತರಲ್ಲಿ ಬೇಗೆಯಂತೆ ಹಬ್ಬದಿರಲಾರದು. ಆಮೇಲೆ ಹೇಗಾದರೂ

ಮಾಡಿ ಸುಲೋಚನೆಯ ಅಳಿಯನ ವಿಳಾಸ ತಿಳಿದುಕೊಂಡು ಅವನ ಹತ್ತಿರ ಹೋಗುವೆ. ಅಲ್ಲಿಯೂ ಎಲ್ಲ ಸಮಾಚಾರವನ್ನು ಹೇಳಿಬಿಡುವೆ. ಆಗಲಿ ಪುರೋಹಿತರೆ, ನಮಸ್ಕಾರ. ಹೋಗಿ ಬರುತ್ತೇನೆ" ಎಂದು ರಾಖಾಲ ಎದ್ದು ನಿಂತ.

ರಾಖಾಲ ಹೊರಡಲು ಅನುವಾದುದನ್ನು ನೋಡಿ ಹರಿದಯಾಲರು ಅವನ ಕೈಹಿಡಿದು ಪುನಃ ಅವನನ್ನು ಕುಳ್ಳಿರಿಸಿಕೊಂಡು ಮೆಲ್ಲನೆ ನುಡಿದರು—"ಏನಪ್ಪಾ, ನೀನು ಬಹಳ ಹಟವಾದಿ ಎಂದು ತೋರುತ್ತದೆ. ಇರಲಿ ಸಿಟ್ಟಾಗ ಬೇಡ. ನನ್ನ ಮಾತು ಕೇಳು. ಈ ಸಂಗತಿ ಇಲ್ಲಿಗೇ ನಿಲ್ಲಲಿ. ಇದನ್ನು ಇನ್ನು ಹಬ್ಬಿಸಬೇಡ. ಇನ್ನು ನಾಲ್ಕೆಂಟು ದಿನಗಳ ಮೇಲೆ ಇಲ್ಲಿಗೇ ಬಾ, ಆಗ ಆದಷ್ಟು ಪ್ರಯತ್ನಮಾಡಿ ನೋಡಿ ಕೊಡುತ್ತೇನೆ."

"ಆದರೆ ಅಂದೂ ಇಂದಿನ ಹಾಗೆಯೆ ಹಿಂತಿರುಗಿ ಕಳಿಸಕೂಡದು ಮತ್ತೆ. ಈ ಮಾತು ನೆನಪಿನಲ್ಲಿರಲಿ."

ಹರಿದಯಾಲರು ಅವನನ್ನು ತೀಕ್ಷ್ಣವಾಗಿ ದಿಟ್ಟಿಸುತ್ತ ಕೇಳಿದರು—"ಏನಪ್ಪಾ, ನಿಜವಾಗಿಯೂ ನೀನು ಬ್ರಾಹ್ಮಣನೆ?"

"ಅಹುದು."

ಹರಿದಯಾಲರು ಒಂದು ನಿಟ್ಟುಸುರನ್ನು ಬಿಟ್ಟು "ಆಶ್ಚರ್ಯ! ಒಳ್ಳೇದು, ಏಳೆಂಟು ದಿವಸ ಬಿಟ್ಟು ಬಾ ಅಪ್ಪಾ; ಈ ಸುದ್ದಿಯನ್ನು ಮಾತ್ರ ಯಾರಿಗೂ ಹೇಳಬೇಡ" ಎಂದರು.

ರಾಖಾಲ "ಹುಂ" ಎಂದು ಅಲ್ಲಿಂದ ಹೊರಟ. ಒಂದೆರಡು ಹೆಜ್ಜೆ ಮುಂದೆ ಹೋಗಿ ಪುನಃ ಹಿಂತಿರುಗಿ ಬಂದು "ಒಂದೆರಡು ರೂಪಾಯಿ ಆದರೂ ಕೊಡಲೇಬೇಕು. ಅಯ್ಯೊ! ನನ್ನ ರೊಕ್ಕದ ಚೀಲ ಎಲ್ಲಿ ಕಳೆಯಿತೊ! ಬರುವಾಗ ಎಲ್ಲಿ ಬಿದ್ದಿತೊ!" ಎಂದು ರಾಖಾಲ ಹಲ್ಲುಬೀರಿ ನಗಲಾರಂಭಿಸಿದ.

ಹರಿದಯಾಲರಿಗೆ ಸಿಟ್ಟಿನಿಂದ ಅವನ ಮುಖ ನೋಡುವುದಾಗಲಿಲ್ಲ. ಅವರು ಮರುಮಾತಾಡದೆ ಎರಡು ರೂಪಾಯಿ ತೆಗೆದು ಅವನ ಕೈಯಲ್ಲಿಟ್ಟರು. ಅವನು ಅವುಗಳನ್ನು ಸೊಂಟದಲ್ಲಿ ಸಿಕ್ಕಿಸಿಕೊಳ್ಳುತ್ತ ಹೊರಟ.

ರಾಖಾಲ ಹೊರಟು ಹೋದ. ಆದರೆ ಹರಿದಯಾಲರು ಸ್ತಬ್ಧಚಿತ್ತ

ರಾಗಿ ಬಹಳ ಹೊತ್ತಿನವರೆಗೆ ಅಲ್ಲಿಯೆ ಕುಳಿತುಕೊಂಡಿದ್ದರು. ಅವರಿಗೆ ಸಾವಿರಾರು ಚೇಳುಗಳು ಒಮ್ಮೆಲೇ ಕಚ್ಚಿದಂತೆನಿಸುತ್ತಿದ್ದಿತು.

ಆದರೆ ಸುಲೋಚನೆಯೆಲ್ಲಿ? ಈ ಹೊತ್ತಿಗೆ ಮೂರು ದಿನಗಳಾದುವು, ಅವಳೆಲ್ಲಿಗೆ ಹೋಗಿದ್ದಾಳೊ? ಹರಿದಯಾಲರು ಊಟ ಉಡಿಗೆ, ನಿದ್ರೆ ನೀರಡಿಕೆ, ಪೂಜೆ ಪಾಠ, ಯಾತ್ರಿಕರ ಅನುಸಂಧಾನ ಎಲ್ಲವನ್ನು ಬಿಟ್ಟು ಕಾಶಿಯ ಸಂದಿಗೊಂದಿಗಳಲ್ಲೆಲ್ಲ ಹುಡುಕಿದರು. ಆದರೆ ಸುಲೋಚನೆ ಮಾತ್ರ ಸಿಕ್ಕಲಿಲ್ಲ. ಕೊನೆಗೆ ನಿರಾಶರಾಗಿ ಮನೆಗೆ ಬಂದು ಹಣೆಹಣೆ ಗಟ್ಟಿಸಿಕೊಳ್ಳುತ್ತ ಎನ್ನತೊಡಗಿದರು – "ವಿಶ್ವೇಶ್ವರ! ಇದೆಂತಹ ದುರ್ಭಾಗ್ಯವಪ್ಪಾ ನನ್ನದು! ಒಬ್ಬ ಅನಾಥಗೆ ದಯೆ ತೋರಿಸಹೋಗಿ ಕೊನೆಯಲ್ಲಿ ಎಂತಹ ಪಾಪವನ್ನು ಹದರಿನಲ್ಲಿ ಕಟ್ಟಿಕೊಂಡೆ!"

ಅದೇ ಓಣಿಯ ಒಂದು ಮೂಲೆಯಲ್ಲಿ ಕೈಲಾಸ ಬಾಬುಗಳ ಮನೆ ಇದ್ದಿತು. ಹರಿದಯಾಲರು ಅಲ್ಲಿಗೆ ಹೋಗಿ ನೋಡಿದರು – 'ಚಿಕ್ಕಪ್ಪ' ಎಂದು ಕೂಗಿದರು. ಉತ್ತರ ಬರಲಿಲ್ಲವಾದುದರಿಂದ ಮೆಲ್ಲಗೆ ಒಳಗೆ ಹೋದರು. ಅಲ್ಲಿ ದೀಪ ಹಚ್ಚಿಕೊಂಡು ಎದುರಿಗೆ ಚದುರಂಗ ಬಿಡಿಸಿಕೊಂಡು ಕೈಲಾಸಬಾಬುಗಳು ಕುಳಿತಿದ್ದರು. ಹರಿದಯಾಲರು "ಏನು ಚಿಕ್ಕಪ್ಪಾ, ಒಬ್ಬರೆ ಆಡುತ್ತಿರುವಿರಾ?" ಎಂದು ಕೇಳಿದರು.

ಕೈಲಾಸ ಬಾಬುಗಳು ಅವರನ್ನು ನೋಡಿ "ಬಾರಣ್ಣಾ, ಈ ಆನೆಯನ್ನು ಸ್ವಲ್ಪ ಉಳಿಸಿಕೊ ನೋಡೋಣ?" ಎಂದರು.

ಹರಿದಯಾಲರು ವಿರಕ್ತರಾಗಿ ಮನದಲ್ಲಿಯೆ ಎಂದುಕೊಂಡರು—"ಇಲ್ಲಿ ಜಾತಿ ಉಳಿಯುವ ಹಾಗಿಲ್ಲ; ಆನೆ ಉಳಿಯುವುದು ಹೇಗೆ ಎಂದು ಕೇಳುತ್ತಿದ್ದಾರೆ ಇವರು!"

ಮನದಲ್ಲಿಯೇ ಎಂದುಕೊಂಡರೂ ಕೈಲಾಸ ಬಾಬುಗಳಿಗೆ ಸ್ಪಷ್ಟವಾಗಿ ಕೇಳಿಸಿತು. ಅವರು ಕೇಳಿದರು "ಏನಂದೆ?"

"ಅಂದಿನ ಸಂಗತಿಯನ್ನೆಲ್ಲ ಕೇಳಿದ್ದೀರೇನು ಎಂದೆ."

"ಯಾವ ಸಮಾಚಾರ?"

"ಅದೇ, ಆ ದಿವಸ ನಡೆದದ್ದು. ನಮ್ಮ ಮನೆಯ ಅಂಗಳದಲ್ಲಿ ಜಗಳ ನಡೆಯಲಿಲ್ಲವೆ? ಅಂದು ನಡೆದ ಸಂಗತಿ."

"ಇಲ್ಲಪ್ಪಾ, ನನಗೆ ಸರಿಯಾಗಿ ಗೊತ್ತಿಲ್ಲ ಬಿಡು. ಅಂದು ಜಗಳ ತೀರ ಮೆಲ್ಲಗೆ ನಡೆದಿತ್ತು. ಆದರೆ ನಿನ್ನ ಆಟ ಮಾತ್ರ ಸರಿಯಾಗಿದ್ದಿಲ್ಲ ನೋಡು!"

"ಹೌದು, ಆಟ ಸರಿಯಾಗಿದ್ದಿಲ್ಲ ನಿಜ. ಆದರೆ ಅಂದಿನ ಸಂಗತಿ ಸ್ವಲ್ಪವೂ ಗೊತ್ತಿಲ್ಲವೆ?"

ಕೈಲಾಸ ಬಾಬುಗಳು ಸ್ವಲ್ಪ ಹೊತ್ತು ಯೋಚಿಸಿ "ಇಲ್ಲ. ನಾನಂತೂ ಕೇಳಿಲ್ಲ ಬಿಡು. ಮಾತುಕತೆ ಮೆಲ್ಲಗೆ ನಡೆಯುತ್ತಿರುವಾಗ ಕೇಳುವುದಾದರೂ ಹೇಗೆ? ಆದರೆ ಅಂದಿನ ಆಟ ಹೇಗಿತ್ತೆಂಬದು ಮಾತ್ರ ಚೆನ್ನಾಗಿ ಗೊತ್ತಿದೆ ನೋಡು. ಅಂದು ನಿನ್ನ ಮಂತ್ರಿಯನ್ನು ಉಳಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಆಗಲಿ, ಈ ಆಟವನ್ನಷ್ಟು ನೋಡು. ಈ ಆನೆಯನ್ನು ಹೇಗೆ ಉಳಿಸಿಕೊಳ್ಳುತ್ತೀಯೊ! ಉಳಿಸಿಕೊ ನೋಡೋಣ" ಎಂದರು.

ಹರಿದಯಾಲರು ವಿರಕ್ತರಾಗಿ ನುಡಿದರು - "ನಿಮ್ಮ ಮಂತ್ರಿಯನ್ನು ಬೆಂಕಿಯಲ್ಲಿ ಹಾಕಲಿ. ಆ ಹೊತ್ತಿನ ಮಾತು ನೀವು ಕೇಳಲಿಲ್ಲವೆ? ಎಂದು ನಾನು ಕೇಳಿದರೆ ನೀವು ಆಟದ ಮಾತನ್ನೇ ಆಡುತ್ತೀರಿ."

ಹರಿದಯಾಲರ ವಿರಕ್ತಮುಖವನ್ನು ಕೈಲಾಸ ಬಾಬುಗಳು ನೋಡಿ ಸ್ವಲ್ಪ ವಿಸ್ಮಿತರಾಗಿ "ಇಲ್ಲಪ್ಪ, ನನಗೆ ಅಂದಿನ ಮಾತು ಏನೂ ನೆನಪಾಗಲೊಲ್ಲದಲ್ಲ?" ಎಂದರು.

ಹರಿದಯಾಲರು ಸ್ವಲ್ಪ ಸಮಯ ಸುಮ್ಮನಿದ್ದು ಗಂಭೀರವಾಗಿ ಕೇಳಿದರು—"ಒಳ್ಳೇದು. ಸಂಸಾರದ ಮಾತು ಹಾಗಿರಲಿ. ಪರಲೋಕವು ಇದೆಯೆಂದಾದರೂ ಒಪ್ಪುತ್ತೀರಲ್ಲವೆ?"

"ವ್ಹಾ, ಅದೇಕೆ ಒಪ್ಪುವುದಿಲ್ಲ?"

"ಹಾಗಾದರೆ ಪರಲೋಕ ಪ್ರಾಪ್ತಿಗಾಗಿ ಯಾವುದಾದರೂ ಒಳ್ಳೆಯ ಕೆಲಸವನ್ನು ಮಾಡಿದ್ದೀರಾ? ಒಮ್ಮೆ ಆದರೂ ದೇವಸ್ಥಾನಕ್ಕೆ ಹೋಗಿದ್ದಿರಾ?"

ಕೈಲಾಸಬಾಬುಗಳು ಆಶ್ಚರ್ಯಚಕಿತರಾಗಿ "ಏನು ವಿಚಿತ್ರ ಪ್ರಶ್ನೆಯಪ್ಪಾ ನಿನ್ನದು? ನಾನು ಎಂದೂ ಗುಡಿಗೆ ಹೋಗಿಲ್ಲವೆ? ಎಷ್ಟೋ ಸಲ ಹೋಗಿ ಬಂದಿದ್ದೇನೆ" ಎಂದರು.

ಅಷ್ಟೇ ಗಂಭೀರವಾಗಿ ಹರಿದಯಾಲರು ಮಾತು ಮುಂದುವರಿಸಿದರು—"ನೀವು ಕಾಶಿಯಲ್ಲಿರಲಾರಂಭಿಸಿ ಇಪ್ಪತ್ತು ವರುಷಗಳಾಗಿ ಹೋದುವು. ಪೂಜೆ ಪ್ರವಚನಗಳ ಮಾತು ಹಾಗಿರಲಿ; ಇಪ್ಪತ್ತು ದಿನವಾದರೂ ನೀವು ದೇವರ ದರ್ಶನ ತೆಗೆದುಕೊಂಡಂತೆ ಕಾಣುವುದಿಲ್ಲ."

ಕೈಲಾಸಬಾಬುಗಳು ಇವನ್ನು ಖಂಡಿಸುತ್ತ ಎಂದರು—"ಇದು ನೋಡು, ನಾನು ಅದಕ್ಕೂ ಹೆಚ್ಚು ಸಲ ಹೆಚ್ಚು ದಿವಸ ದೇವರ ದರ್ಶನಕ್ಕೆ ಹೋಗಿರಬಹುದು. ನನಗೆ ಸ್ವಲ್ಪವೂ ಬಿಡುವು ಸಿಕ್ಕುವುದಿಲ್ಲವೆಂದು ನಿನಗೆ ಗೊತ್ತಿದೆ. ಆದ್ದರಿಂದ ನಾನು ಪೂಜೆ ಪ್ರವಚನ ಮಾಡುವುದಿಲ್ಲವೆಂದು ತಿಳಿಯುವುದಿಲ್ಲವೆ ನಿನಗೆ? ಬೆಳಗಾಗುತ್ತಲೆ ಶಂಭೂಮಿಶ್ರರೊಡನೆ ಒಂದು ಆಟ ಆಡಲೇ ಬೇಕು. ಅವರು ಬಹಳ ಚೆನ್ನಾಗಿ ಆಡುತ್ತಾರೆ. ಒಂದು ಆಟ ಮುಗಿಯಲಿಕ್ಕೇ ಮಧ್ಯಾಹ್ನವಾಗುತ್ತದೆ. ಆಮೇಲೆ ಸ್ನಾನ ಊಟಗಳಿಗೆ ಹೊತ್ತು ಹೋಗುತ್ತದೆ. ಊಟ ಮುಗಿಯುವುದರೊಳಗೆ ಸಂಜೆಯಾಗಿ ಹೋಗುತ್ತದೆ. ಅಷ್ಟರಲ್ಲಿ ಮತ್ತೆ ಗಂಗಾ ಪಾಂಡೇ ಬರುತ್ತಾರೆ ಆಟಕ್ಕೆ. ಅವರ ಆಟ ವರ್ಣಿಸುವುದೇ ಸಾಧ್ಯವಿಲ್ಲ. ಒಮ್ಮೆ ಅವರು ನನ್ನನ್ನು ಸೋಲಿಸಿಯೆ ಬಿಟ್ಟಿದ್ದರು. ಒಂದು ಕಡೆಯಿಂದ ಕುದುರೆ, ಇನ್ನೊಂದು ಕಡೆಯಿಂದ ಆನೆ ತೆಗೆದುಕೊಂಡು ನನ್ನನ್ನು ಹಿಂದೂಡುತ್ತಲೆ ಬಂದುಬಿಟ್ಟರು. ನಾನು ತಿಳಿದುಕೊಂಡೆ...."

"ಇರಲಿ ಬಿಡಿರಿ ಚಿಕ್ಕಪ್ಪ. ಮಧ್ಯಾಹ್ನ ನೀವೇನು ಮಾಡುತ್ತೀರಿ ಹೇಳಿರಿ."

"ಮಧ್ಯಾಹ್ನ! ಗಂಗಾ ಪಾಂಡೆಯವರೊಡನೆ – ಅವರ ಎರಡೂ ಆನೆ – ಸರಿ, ಈಗಲೆ ನೋಡಬಾರದೆ –"

ಹರಿದಯಾಲರು ತೀರ ವಿರಕ್ತರಾಗಿ ಕೈಲಾಸ ಬಾಬುಗಳನ್ನು ಮುಂದೆ ಮಾತಾಡಗೊಡದೆ "ಸಾಕು ಸಾಕು. ಮಧ್ಯಾಹ್ನ ಗಂಗಾಪಾಂಡೆ, ಸಾಯಂಕಾಲ ಮುಕುಂದ ಘೋಷರ ಆಟ; ಎಂದ ಮೇಲೆ ನಿಮಗೆ ಸಮಯವೆಲ್ಲಿಂದ ದೊರೆಯಬೇಕು?" ಎಂದರು.

ಕೈಲಾಸಬಾಬುಗಳು ಸುಮ್ಮನಾದರು. ಹರಿದಯಾಲರು ಇನ್ನಿಷ್ಟು ಗಂಭೀರರಾಗಿ ಮಾತು ಮೊದಲು ಮಾಡಿದರು—''ಕೈಲಾಸಬಾಬುಗಳೆ, ಇನ್ನು ನಿಮಗೆ ಬಹಳ ದಿನವೇನೂ ಉಳಿದಿಲ್ಲ. ಪರಲೋಕಕ್ಕೆ ಹೊರಡಲು ಸಿದ್ಧತೆ ಮಾಡಬೇಕಾಗುವುದು. ಆದರದೂ ಸ್ವಲ್ಪ ಯೋಚನೆ ಮಾಡುವುದೊಳ್ಳಿತು. ಅಲ್ಲಿಗೆ ಚದುರಂಗದ ಸೇನೆಯನ್ನು ಒಯ್ಯಬಲ್ಲಿರಾ ?''

ಕೈಲಾಸಬಾಬುಗಳು ಬಿದ್ದುಬಿದ್ದು ನಗಲಾರಂಭಿಸಿದರು. ''ಹೌದಪ್ಪಾ, ಚದುರಂಗದ ಸೇನೆಯನ್ನು ಸಂಗಡ ಒಯ್ಯಲಾರೆನೆಂದು ನನಗೆ ಗೊತ್ತು. ನೀನು ಹೇಳಿದ ಪರಲೋಕದ ಸಿದ್ಧತೆ ಮಾಡಿಯೆ ಇದ್ದೇನೆ. ಕರೆ ಬಂದ ದಿವಸವೇ ಇದೆಲ್ಲವನ್ನು ಯಾರಿಗಾದರೂ ಕೊಟ್ಟು ಹೊರಟುಬಿಡುವೆ. ಆದಕ್ಕಾಗಿ ಚಿಂತೆ ಯಾದರೂ ಏಕೆ ಮಾಡಬೇಕು ?''

''ಯಾವ ಬಗೆಯ ಚಿಂತೆಯೂ ಇಲ್ಲದಿರಲು ದುಡ್ಡು ದುಗ್ಗಾಣಿ ಏನೂ ಇಲ್ಲವೆ ?"

"ಇಲ್ಲ, ಎಳ್ಳಷ್ಟೂ ಇಲ್ಲ. ನನ್ನ ಕಮಲ ಹೊರಟುಹೋದ ದಿನ, ನನ್ನ ಕಮಲಚರಣ ನನ್ನನ್ನು ನೋಡುತ್ತ ನೋಡುತ್ತ ಕಣ್ಣುಮುಚ್ಚಿದ ದಿನ, ಎಲ್ಲ ಬಗೆಯ ಚಿಂತೆ, ಭಯ, ಉಪದ್ರವ ಎಲ್ಲವೂ ಹೊರಟುಹೋದುವು. ಅವೆಲ್ಲವು ಹೇಗೆ ಹೋದುವೆಂಬುದು ನನಗೆ ಗೊತ್ತೆ ಆಗಲಿಲ್ಲ!" ಹೀಗೆನ್ನುವಾಗ ಆ ಮುದುಕನ ಎರಡೂ ಕಣ್ಣುಗಳಲ್ಲಿ ನೀರು ತುಂಬಿ ಬಂತು.

ಹರಿದಯಾಲರು "ಆ ಎಲ್ಲ ಸಂಗತಿ ಹಾಗಿರಲಿ. ನನ್ನ ಒಂದೆರಡು ಮಾತುಗಳನ್ನಾದರೂ ಕೇಳುತ್ತೀರಾ ?" ಎಂದರು.

''ಹಾಂ, ಹೇಳು."

ಹರಿದಯಾಲರು ಅಂದು ನಡೆದ ಎಲ್ಲ ಸಂಗತಿಯನ್ನೂ ಒಂದೊಂದಾಗಿ ಹೇಳಿದರು. ಆಮೇಲೆ ''ಇನ್ನು ಹೇಗೆ ಮಾಡುವುದು ?'' ಎಂದು ಕೇಳಿದರು.

ಸದಾ ಪ್ರಸನ್ನವಾಗಿರುವ ಕೈಲಾಸಬಾಬುಗಳ ಮುಖ ಹರಿದಯಾಲರ ಮಾತು ಕೇಳುತ್ತಿರುವಾಗ ವಿವರ್ಣವಾಯಿತು. ಅವರು ಕಾತರ ಸ್ವರದಲ್ಲಿ ಹೇಳಿದರು—''ಹರಿದಯಾಲ, ಅದು ಹೇಗೆ ಸಾಧ್ಯ? ಸುಲೋಚನೆಯೆಂಬವರೆ ಸತಿ ಸಾವಿತ್ರಿಯಂತಿದ್ದಾಳೆ."

"ಮೊದಲು ನಾನೂ ಹಾಗೆಯೆ ತಿಳಿದುಕೊಂಡಿದ್ದೆ. ಆದರೆ ಸ್ತ್ರೀಯು ರನ್ನು ನಂಬುವುದು ಕಷ್ಟ."

"ರಾಮ, ರಾಮ. ಇಂತಹ ಮಾತುಗಳನ್ನು ಉಚ್ಚರಿಸಲೂ ಬಾರದು. ಮನುಷ್ಯ ಎಂದ ಮೇಲೆ ಪುಣ್ಯವನ್ನೊ ಪಾಪವನ್ನೊ ಮಾಡಿಯೇ ಮಾಡು ತ್ತಾನೆ. ಇದರಲ್ಲಿ ನನಗೆ ಸ್ತ್ರೀ-ಪುರುಷರೆಂಬ ಭೇದ ಕಾಣುವುದಿಲ್ಲ. ನಿನಗೆ ನಿಮ್ಮ ತಾಯಿಯ ನೆನಪು ಇದೆಯೆ? ಅಥವಾ ಪೂರ್ಣವಾಗಿ ಮರೆತೇಬಿಟ್ಟೆಯಾ?"

ಹರಿದಯಾಲರಿಗೆ ನಾಚಿಕೆಯೊಂದಿಗೆ ವಿರಕ್ತಿಯೂ ಉಂಟಾಯಿತು. ಸ್ವಲ್ಪ ಹೊತ್ತು ತಲೆ ಬಗ್ಗಿಸಿಕೊಂಡೇ ಇದ್ದರು. ಆಮೇಲೆ ಮತ್ತೆ ಮಾತಿ ಗಾರಂಭಿಸಿದರು—"ಈಗ ಜಾತಿ ಹೋಗುತ್ತದಲ್ಲ, ಏನು ಮಾಡುವುದು ?"

"ಪ್ರಾಯಶ್ಚಿತ್ತ ಮಾಡಿಕೊಂಡರಾಯಿತು. ತಿಳಿಯದೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೆ ಇಲ್ಲವೆ ?"

"ಇದೆ. ಆದರೆ ಇಲ್ಲಿಯ ಜನರು ನನ್ನನ್ನು ಜಾತಿಯಿಂದ ಹೊರಗೆ ಹಾಕುವರಲ್ಲ ?"

"ಹಾಕಲಿ ಬಿಡು."

ಹರಿದಯಾಲರು ಕೂಡಲೆ ಅತ್ಯಂತ ಕೋಪಾವಿಷ್ಟರಾಗಿ "ಏನೆಂದಿರಿ ? 'ಇರಲಿ ಬಿಡು!' ಕೈಲಾಸಬಾಬುಗಳೆ, ಸ್ವಲ್ಪ ಯೋಚಿಸಿ ಮಾತಾಡಿರಿ" ಎಂದರು.

"ಹೌದು ದಯಾಲ, ನಾನು ಚೆನ್ನಾಗಿ ಯೋಚಿಸಿ ಮಾತನಾಡುತ್ತಾ ಇದ್ದೇನೆ. ಈಗ ನಿನಗೂ ವಯಸ್ಸು ಕಡಿಮೆಯಾಗಿಲ್ಲ. ೫೦ ಮಿಕ್ಕಿರಬಹುದು. ಇಷ್ಟು ದಿವಸ ಜಾತಿ ಉಳಿಯಿತು, ಇನ್ನು ನಾಲ್ಕು ವರುಷ ಜಾತಿ ಉಳಿಯ ದಿದ್ದರೆ, ಹಾನಿಯೇನು ?"

"ಏನೂ ಇಲ್ಲವೆ ? ಜಾತಿ ಹೊರಟು ಹೋದ ಮೇಲೆ ಧರ್ಮ ಹೊರಟು ಹೋದ ಮೇಲೆ ಈಶ್ವರನ ಎದುರಿಗೆ ಏನೆಂದು ಉತ್ತರ ಕೊಡಲಿ ?"

"ಒಬ್ಬ ಅನಾಥಳಿಗೆ ಆಶ್ರಯ ಕೊಟ್ಟಿದ್ದೆನೆಂದು ಉತ್ತರ ಕೊಡು."

ಹರಿದಯಾಲರು ಸುಮ್ಮನಾಗಿ ಯೋಚಿಸತೊಡಗಿದರು. ಈ ಮಾತು ಅವರಿಗೆ ಏನೂ ಸರಿಯೆನಿಸಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಪುನಃ ಕೇಳಿ

ದರು—''ಹಾಗಾದರೆ ನಾನು ಆ ಮನುಷ್ಯನಿಗೆ ಸುಲೋಚನೆಯ ಅಳಿಯನ ವಿಳಾಸ ತಿಳಿಸಿಬಿಡಲೊ?''

"ಬೇಡ. ಎಂದೂ ಕೂಡದು. ಆ ಪುಂಡ, ಕುಡುಕ ಹೆದರಿಸಿ ಬೆದರಿಸಿ ನಿನ್ನಿಂದಲೂ ಹಣ ವಸೂಲು ಮಾಡಿಕೊಳ್ಳಬಹುದು. ಅ ಸದ್ಗೃಹಸ್ಥ ನಿಂದಲೂ ವಸೂಲು ಮಾಡಿಕೊಳ್ಳಬಹುದು. ನೀನು ಆ ದುಷ್ಟನಿಗೆ ಸಹಾಯ ಮಾಡುವುದೆ?"

''ಹೇಳದೆ ಹೋದರೆ ನನ್ನ ಸರ್ವಸ್ವವೆಲ್ಲ ಹಾಳಾಗುತ್ತದೆ. ಆಮೇಲೆ ನನ್ನ ಮನೆಗೆ ಯಾರೂ ಬರುವುದಿಲ್ಲ. ನನ್ನ ಹೊಟ್ಟೆಯ ಪಾಡೇನು?"

''ಇದಕ್ಕೆ ನೀನು ಹೆದರಬೇಡ. ದೇವರ ದಯೆಯಿಂದ ನನಗೆ ೨೦ ರೂಪಾಯಿ ಪೆನ್ಶನು ಸಿಕ್ಕುತ್ತದೆ. ಇಷ್ಟರಲ್ಲಿ ನಾವಿಬ್ಬರೂ ಇದ್ದುಬಿಡೋಣ. ಚದುರಂಗ ಆಡೋಣ; ಮನೆ ಬಿಟ್ಟು ಹೊರಗೆ ಹೋಗುವುದೂ ಬೇಡ.''

ಹರಿದಯಾಲರಿಗೆ ವಿಪರೀತ ಕೋಪ ಬಂದಿದ್ದರೂ ಕೈಲಾಸಬಾಬುಗಳು ಹುಡುಗರಂತೆ ಮಾತಾಡುವುದನ್ನು ಕಂಡು ನಕ್ಕುಬಿಟ್ಟರು. "ಕೈಲಾಸಬಾಬುಗಳೆ, ನನ್ನ ಭಾರ ನೀವೇಕೆ ಹೊತ್ತುಕೊಳ್ಳಬೇಕು? ಎರಡನೆಯವರ ಸಹಾಯಕ್ಕೆ ಹೋಗಿ ನಾನೇಕೆ ನನ್ನ ಜಾತಿಯನ್ನು ಕಳೆದುಕೊಳ್ಳಬೇಕು ಹೇಳಿರಿ? ಇದಕ್ಕಿಂತಲೂ—" ನಡುವೇ ತಡೆದರು ಕೈಲಾಸಬಾಬುಗಳು.

''ಹೌದು, ನೀನಾಡುವುದು ಸರಿ. ಅವನ ವಿಳಾಸ ಹೇಳಿ ಬಿಡುವುದೆ ಒಳ್ಳೆಯದು! ಆ ಬಡ ಹುಡುಗಿಯನ್ನು ಗಂಡನಿಂದ ಬಿಡಿಸಿ, ಆಕೆಯ ಸಂಸಾರ ವನ್ನು ಕೆಡಿಸಿ, ಆಕೆಯ ಮಾನವನ್ನು ಕಳೆದು, ನಿನ್ನ ಹಳೆಯ ಅಸ್ಥಿಪಂಜರ ವನ್ನು ಇನ್ನು ನಾಲ್ಕು ದಿನ ಸುಖವಾಗಿರಿಸುವುದು ಒಳ್ಳೆಯದು! ಒಳ್ಳೆಯ ದಪ್ಪಾ, ಹೋಗು ಜಾತಿಯನ್ನು ಉಳಿಸಿಕೊ. ನೀನು ತಿಳಿದವನು ನನ್ನ ಸಲಹೆ ಕೇಳಲಿಕ್ಕೆ ಬರಬಾರದಾಗಿತ್ತು. ಹೇಗೂ ಬಂದಿದ್ದೀಯಾ, ನಾಲ್ಕು ಮಾತ ಹೇಳುತ್ತೇನೆ ಕೇಳಿಕೊ. ಕಾಶಿಯಲ್ಲಿ ಅನ್ನಪೂರ್ಣಾ ತಾಯಿಯ ರಾಜ್ಯವಿದೆ ಇಲ್ಲಿದ್ದುಕೊಂಡು ಆ ಸತೀ ಸರಯೂಗೆ ದ್ರೋಹ ಬಗೆದು ಆಕೆಯ ಸಂಸಾರ ವನ್ನು ಕೆಡಿಸಲೆತ್ನಿಸಿದರೆ ನಿನಗೆ ಒಳ್ಳೆಯದಾಗದು ಕಂಡೆಯಾ!''

ಹರಿದಯಾಲರು ಸಿಟ್ಟಾಗಿ ಕೇಳಿದರು—"ಏನು ಕೈಲಾಸಬಾಬುಗಳ ನನಗೆ ನೀವು ಶಾಪಕೊಡುತ್ತಿದ್ದೀರಾ?"

"ಇಲ್ಲ. ನೀನು ಕಾಶಿಯ ಪುರೋಹಿತ. ನಮಗೆಲ್ಲರಿಗೂ ದೊಡ್ಡವನಾದ ವಿಶ್ವನಾಥನ ಪೂಜಾರಿಯಾಗಿರುವೆ. ನಿನಗೆ ನಮ್ಮಂತಹರ ಶಾಪ ತಟ್ಟುವುದಿಲ್ಲ. ನೀನು ಇದಕ್ಕೇಕೆ ಹೆದರಬೇಕು? ಆದರೆ ನೀನು ಕೈಹಾಕುತ್ತಿರುವ ಕೆಲಸ ಅಷ್ಟು ಸರಳವಾದುದಲ್ಲ. ಸತೀ ಸಾವಿತ್ರಿಯನ್ನು ಕಂಡು ಯಮರಾಜನೂ ಹೆದರಿದ. ಬಹು ದಿನಗಳಿಂದ ನಾವು ಇಬ್ಬರೂ ಒಟ್ಟು ಸೇರಿ ಚದುರಂಗ ಆಡುತ್ತೇವೆ. ಇದಲ್ಲದೆ ನಿನ್ನ ಮೇಲೆ ನನ್ನ ಪ್ರೇಮವೂ ಇದೆ. ಆದ್ದರಿಂದಲೇ ನಿನಗೆ ಈ ಮಾತಿನ ನೆನಪು ಕೊಡುತ್ತಿರುವುದು."

ಹರಿದಯಾಲರು ಯಾವ ಉತ್ತರವನ್ನೂ ಕೊಡದೆ ಉದಾಸೀನರಾಗಿ ಎದ್ದು ನಿಂತರು.

"ಏನಪ್ಪಾ, ನನ್ನ ಮಾತು ಕೇಳುತ್ತಿಯೇನು?"

"ಹುಚ್ಚರ ಮಾತು ಕೇಳುವವರೂ ಹುಚ್ಚರಾಗಬೇಕಾದೀತು."

ಕೈಲಾಸಬಾಬುಗಳು ಸುಮ್ಮನಾಗಿ ಬಿಟ್ಟರು. ಹರಿದಯಾಲರು ಮನೆಯಿಂದ ಹೊರಹೊರಟರು.

ಕೈಲಾಸಬಾಬುಗಳು ಚದುರಂಗದ ಚೀಲ ಬಿಚ್ಚಿ ಅದರಲ್ಲಿ ಆನೆ ಮಂತ್ರಿ ಮೊದಲಾದವುಗಳನ್ನು ಹಾಕಿ ಅದರ ಬಾಯಿ ಕಟ್ಟುತ್ತ ಮನದಲ್ಲಿಯೆ ಯೋಚಿಸತೊಡಗಿದರು—"ಹರಿದಯಾಲನ ಮಾತೇ ಸರಿಯಾಗುವಂತೆ ತೋರುತ್ತದೆ. ನಿಜವಾಗಿಯೂ ನಾನು ಜಗತ್ತಿನ ವಿಷಯದಲ್ಲಿ ತಪ್ಪು ತಿಳಿದುಕೊಂಡಿರುವೆನೆ? ಯಾರಾದರೂ ಸತ್ತರೆ ಜನರು ನನ್ನ ಕಡೆಗೆ ಬರುತ್ತಾರೆ. ನಾನು ಹೋಗುತ್ತೇನೆ. ದಹನಕರ್ಮ ಮಾಡಿಸಲೂ ಕರೆಯುತ್ತಾರೆ. ಯಾರಾದರೂ ಬೇನೆ ಬಿದ್ದರೆ, ಸೇವಾಶುಶ್ರೂಷೆಗೆ ಕರೆಯಲಿಕ್ಕೆ ಬರುತ್ತಾರೆ. ಅಲ್ಲದೆ ಚದುರಂಗಕ್ಕೂ ಕರೆಯುತ್ತಾರೆ; ಆಡಲಿಕ್ಕೂ ಇಲ್ಲಿಗೂ ಬರುತ್ತಾರೆ. ಆದರೆ ನನಗೆ ಇಷ್ಟು ವಯಸ್ಸಾದರೂ ಇವೊತ್ತಿನ ವರೆಗೆ ಯಾರೂ ನನ್ನ ಸಲಹೆ ಕೇಳಲಿಕ್ಕೆ ಬರಲಿಲ್ಲ!"

ಬಹಳ ಹೊತ್ತು ಯೋಚಿಸಿದರೂ ಕೈಲಾಸಬಾಬುಗಳಿಂದ ಏನನ್ನೂ ನಿಶ್ಚಯ ಮಾಡಲಾಗಲಿಲ್ಲ. ಜನರಿಗೆ ಸೂರ್ಯನ ಬೆಳಕಿನಷ್ಟು ಉಜ್ವಲವಾದ, ಸ್ಫಟಿಕದಷ್ಟು ಸ್ವಚ್ಛವಾದ ಸತ್ಯ ಏಕೆ ಒಗ್ಗುವುದಿಲ್ಲ; ಇಂತಹ ಸುಲಭವಾದ ಪ್ರಾಮಾಣಿಕವಾದ ಭಾಷೆ ಏಕೆ ಅರ್ಥವಾಗುವುದಿಲ್ಲ; ಎಂಬುದು ಅವರಿಗೆ ತಿಳಿಯಲಿಲ್ಲ.

ಹರಿದಯಾಲರು ಬಹಳ ಹೊತ್ತು ಯೋಚಿಸಿದರು. ಕೊನೆಗೆ, ಚಂದ್ರನಾಥನು ಮನವೊಪ್ಪಿ ಒಬ್ಬ ವೇಶ್ಯೆಯ ಮಗಳನ್ನು ಮದುವೆಯಾಗಿ ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದಾನೆಂದು ಚಂದ್ರನಾಥನ ಚಿಕ್ಕಪ್ಪನಾದ ಮಣಿಶಂಕರರಿಗೆ ಆ ದಿನ ರಾತ್ರಿಯೆ ಪತ್ರ ಬರೆದುಬಿಟ್ಟರು.

೮

ಹರಿದಯಾಲರು ಎಲ್ಲ ಸಮಾಚಾರವನ್ನು ವಿಶದವಾಗಿ ಬರೆದುಬಿಟ್ಟಿದ್ದರು; ಆದುದರಿಂದ ಈ ಸುದ್ದಿ ಸುಳ್ಳಿರಲಿಕ್ಕಿಲ್ಲವೆಂದು ಮಣಿಶಂಕರರಿಗೆ ಮನದಟ್ಟಾಯಿತು. ಆದರೆ ಮುಂದೇನು ಮಾಡಬೇಕೆನ್ನುವುದು ಅವರಿಗೆ ತಿಳಿಯದಂತಾಯಿತು. ಇದನ್ನು ಕೇಳಿ ಅವರಿಗೆ ದುಃಖವಾಗಲಿ ಅಥವಾ ಸಂತೋಷವಾಗಲಿ. ಆದರೆ ಇದು ಮಹತ್ವದ ಸುದ್ದಿಯೆಂಬುದರಲ್ಲಿ ಸಂದೇಹವಿರಲಿಲ್ಲ. ತಾವು ಒಬ್ಬರೆ ಈ ದುಗುಡದ ಭಾರ ಹೊರುವುದು ಅವರಿಗೆ ಕಷ್ಟವೆನಿಸಿತು. ಆದ್ದರಿಂದ ತಮ್ಮ ಹೆಂಡತಿಯನ್ನು ಏಕಾಂತದಲ್ಲಿ ಕರೆದು ಸಂಕ್ಷೇಪವಾಗಿ ಈ ಎಲ್ಲ ಸಂಗತಿ ಹೇಳಿದರು:—"ಅವನು ನನ್ನನ್ನು ವಿಚಾರಿಸಿದ್ದರೆ ಹೀಗೆಂದೂ ಆಗುತ್ತಿರಲಿಲ್ಲ. ಹೀಗೆ ಮೋಸಹೋಗಲು ನಾನು ಬಿಡುತ್ತಿರಲಿಲ್ಲ. ಆದದ್ದು ಆಗಿಹೋಯಿತು. ಇನ್ನು ಈ ಸಂಗತಿಯನ್ನು ಹೊರಗೆಡವಲೇ ಕೂಡದು. ಮೊದಲು ಚೆನ್ನಾಗಿ ಯೋಚಿಸಿ ನೋಡೋಣ" ಎಂದರು.

ಯಾವುದೇ ಮಾತಾಗಲಿ, ಚೆನ್ನಾಗಿ ಯೋಚಿಸಬೇಕಾದರೆ ಸ್ವಲ್ಪ ಸಮಯವು ಬೇಕು. ಮೂರು-ನಾಲ್ಕು ದಿನ ತಡೆಯಬೇಕಾಗುತ್ತದೆ. ಸ್ತ್ರೀಯರಿಗೆ ಇದು ಅಸಾಧ್ಯ. ಹರಿದಯಾಲರು ಬರೆದ ಪತ್ರದಲ್ಲಿಯ ವಿಷಯ ಮೊಟ್ಟ ಮೊದಲು ನಾಲ್ಕೈದು ಕಿವಿಗಳ ವರೆಗೆ ಹೋಯಿತು. ಆಮೇಲೆ ಈ ಸಂಗತಿ ತಿಳಿದವರ ಸಂಖ್ಯೆ ಮೆಲ್ಲಮೆಲ್ಲನೆ ಬಹಳವಾಯಿತು. ವರನ ಕಡೆಯವರು ಮಣಿಶಂಕರರ ಹುಡುಗಿಯನ್ನು ನೋಡಲಿಕ್ಕೆ ಬಂದ ದಿನವೇ ಈ ಸುದ್ದಿ ಹರಿಬಾಲೆಯ ಕಿವಿಗೆ ಹೋಯಿತು. ಆದುದರಿಂದಲೇ ಹರಿಬಾಲೆ ಹೆದರುತ್ತ ಹೆದರುತ್ತ, ಚಂದ್ರನಾಥನು ಸರಯೂನನ್ನು ಎಷ್ಟು ಪ್ರೀತಿಸುತ್ತಾನೆಂಬುದನ್ನು ತಿಳಿದುಕೊಳ್ಳಲಿಕ್ಕೆ ಬಂದಿದ್ದಳು. ಮಣಿಶಂಕರರ ಮನೆಯಲ್ಲಿ ಸೇರಿದ ಸ್ತ್ರೀಯರಲ್ಲಿ ಅಂದು ಈ ವಿಚಾರವಾಗಿ ಚೆನ್ನಾಗಿ ಚರ್ಚೆಯಾಗಿದ್ದಿತು. ಏಕೆಂದರೆ ಪ್ರೇಮದ

ಆಳದ ಮೇಲೆಯೆ ಸರಯೂನ ಭಾವೀ ಜೀವನವು ನಿಂತಿದೆಯೆಂದು ಅವರೆಲ್ಲರೂ ನಿರ್ಧರಿಸಿದ್ದರು.

ಅವರೆಲ್ಲರೂ ಮೆಲ್ಲಗೆ ಮಾತನಾಡುತ್ತಿದ್ದರು. ಅವರ ಕಣ್ಣುಗಳನ್ನು ನೋಡಿದರೆ ಇಷ್ಟು ಕೋಮಲವಾದ ಹೃದಯಗಳಿಂದ ಒಂದು ಬಗೆಯ ಪೈಶಾಚಿಕ ಆನಂದವು ಉಕ್ಕಿ ಬರುತ್ತಿದೆಯೆಂದು ಎನಿಸುತ್ತಿದ್ದಿತು. ಎಲ್ಲರೂ ದುಃಖವನ್ನು ವ್ಯಕ್ತಮಾಡುತ್ತಿದ್ದರು; ನಿಟ್ಟುಸಿರು ಬಿಡುತ್ತಿದ್ದರು. ಸರಯೂನ ಭಾಗ್ಯದೇವತೆ ಬೇಕಾದತ್ತ ಒಲಿಯಲಿ, ತಾವು ಒಂದು ಸಲ 'ಅಯ್ಯೋ' ಎನ್ನಬೇಕೆಂಬ ಇಚ್ಛೆ ಅವರ ಹೃದಯದಲ್ಲಿ ಗುಪ್ತವಾಗಿ ಹುದುಗಿದ್ದಿರಬಹುದು. ಆದುದರಿಂದ ತಮ್ಮ ಈ ದುಃಖವನ್ನು ಇನ್ನೊಬ್ಬರ ಮನಸ್ಸಿನ ಮೇಲೆ ಬಿಂಬಿಸಲು ಅವರು ಬಹಳ ಚತುರತನದಿಂದ ಯತ್ನಿಸುತ್ತಿದ್ದರು. ಈ ಉತ್ಕಂಠತೆಯಿಂದ ಅವರಿಗೆ ಈಗ ಎರಡು ದಿನ ಚೆನ್ನಾಗಿ ನಿದ್ದೆ ಬರಲಿಲ್ಲ.

ಹೀಗೆಯೇ ಒಂದು ವಾರ ಕಳೆದುಹೋಯಿತು. ಈ ಏಳು ಹಗಲು-ರಾತ್ರಿ ಕೇವಲ ಹೊಗೆಯಾಡುತ್ತಿದ್ದಿತು, ಬೆಂಕಿ ಮಾತ್ರ ಹತ್ತಲಿಲ್ಲ. ಒತ್ತು ಹಾಕಿದ ಪ್ರವಾಹದಂತೆ ಈ ಸುದ್ದಿ ಸ್ತ್ರೀಯರ ಹೃದಯಗಳಲ್ಲಿ ಸುಳಿದಾಡುತ್ತಿದ್ದಿತು. ಅದು ನಿರ್ದಿಷ್ಟವಾಗಿ ಹರಿಯಲು ಮಾರ್ಗವಿಲ್ಲದಂತಾದುದರಿಂದ ಅವರಲ್ಲಿ ಶಾಂತಿಯೇ ಉಳಿಯಲಿಲ್ಲ. ಪುರುಷರಲ್ಲಿಯೂ ಈ ಮಾತು ಬರುತ್ತಿದ್ದಿತು, ಆದರೆ ಸ್ವಲ್ಪ ಸಮಯದ ವರೆಗೆ ಮಾತ್ರ. ಏಕೆಂದರೆ ಅವರಿಗೆ ಇದ್ದುವು ಹಲವು ಕೆಲಸಗಳು. ಚಂದ್ರನಾಥನನ್ನು ಜಾತಿಯಿಂದ ಹೊರಗೆ ಇಡಿಸುವುದು ಮಾತ್ರವಲ್ಲ. ಮನೆತನದ ಭಾರದ ಕಡೆಗೆ ಗಮನ ಕೊಡಬೇಕಾಗುತ್ತಿತ್ತು. ಆದುದರಿಂದ ಕಾಲು ಪಸರಿಸಿಕೊಂಡು ಕುಳಿತುಕೊಳ್ಳಲಿಕ್ಕೆ ವೇಳೆ ಸಿಕ್ಕುತ್ತಿರಲಿಲ್ಲ. ಯಾವುದೊಂದು ನಿಷ್ಕರ್ಷೆಯಾಗುವ ಮೊದಲೇ ಅವರು ಬಳಲಿ ಹೋಗುತ್ತಿದ್ದರು. ಒಂದು ಅಲ್ಪ ವಿಷಯವಾಗಿದ್ದರೆ—ಚಂದ್ರನಾಥ ಬಡವನಾಗಿದ್ದರೆ—ಈ ವಿಷಯದ ನಿಷ್ಕರ್ಷೆಯನ್ನು ಕೂಡಲೆ ಮಾಡಬಹುದಾಗಿತ್ತು. ಆದರೆ ಈಗ ತಮ್ಮದೊಂದು ಗುಂಪನ್ನು ಕಟ್ಟಿಕೊಂಡು, ತಾನು ಅದರ ಮುಂದಾಳಾಗಿ, ಚಂದ್ರನಾಥನ ವಿರುದ್ಧ ಬಹಿರಂಗವಾಗಿ ನಿಲ್ಲುವ ಸಾಹಸ ಯಾರಿಗೂ ಆಗಲಿಲ್ಲ. ಮಣಿಶಂಕರರೊಬ್ಬರಿಗೆ ಮಾತ್ರ ಅದು ಸಾಧ್ಯವಿತ್ತು. ಆದರೆ ಅವರು ಈ ವಿಷಯದಲ್ಲಿ ಏಕೆ ಮುಂದೆ ಬರಲಿಲ್ಲವೊ ತಿಳಿಯದು.

ಕೊನೆಗೆ ನಿರುಪಾಯರಾಗಿ ಅಕ್ಕಪಕ್ಕದ ಮುದಿ ವಿಧವೆಯರೂ ಸಧವೆಯರೂ ಈ ಕರ್ತವ್ಯಕರ್ಮದ ಕಡೆಗೆ ಲಕ್ಷ್ಯಗೊಟ್ಟರು. ನಿರಪರಾಧಿ ವ್ರಜಕಿಶೋರ ಮತ್ತು ಅವರ ಹೆಂಡತಿ ಹರಕಾಲಿಯ ಧರ್ಮ ಮತ್ತು ಜಾತಿಯನ್ನು ಉಳಿಸಬೇಕೆಂಬ ಪವಿತ್ರವಾದ ಇಚ್ಛೆಯಿಂದ ಆ ಮುದಿ ಹೆಂಗಸರು ಸರಯೂನ ತಾಯಿ ಕಾಶಿಯು ಒಬ್ಬ ವೇಶ್ಯೆಯೆಂದೂ ಅವಳ ಮಗಳು ಮುಟ್ಟಿದ ಅಡುಗೆ ಉಂಡಿದ್ದರಿಂದ ನಿಮ್ಮ—ಗಂಡ ಹೆಂಡಿರುಗಳ ಜಾತಿ ಧರ್ಮ ಕೆಟ್ಟುಹೋಯಿತೆಂದೂ ನಿರ್ಧರಿಸಿ ಅವರಿಗೆ ಆ ಪ್ರಕಾರವಾಗಿ ತಿಳಿಸಿಬಿಟ್ಟರು.

ಹರಕಾಲಿ ಒಮ್ಮೆಲೇ ವಿಹ್ವಲಳಾಗಿ ನೋಡುತ್ತ "ಆದುದಾದರೂ ಏನು?" ಎಂದು ಕೇಳಿದಳು.

ರಾಮಮಯನ ಮುದಿತಾಯಿ ನಿಡಿದಾದ ಉಸಿರುಬಿಟ್ಟು "ಆಗ ಇನ್ನೇನೇ ದೊರೆಸಾನಿ, ಏನು ಆಗಬೇಕಾಗಿತ್ತೋ ಅದೇ ಆಯಿತು! ಸರ್ವನಾಶ ಆಗಿ ಹೋಯಿತು!" ಎಂದಳು.

ಆ ಮುದುಕಿ ಮೊದಲಿನಿಂದ ಕೊನೆಯ ವರೆಗಿನ ಎಲ್ಲ ಕತೆಯನ್ನು ಒಂದೊಂದಾಗಿ ಹೇಳಿದಳು. ಅವಳ ಹೇಳಿಕೆಯಲ್ಲಿ ಅಲ್ಲಿ ಇಲ್ಲಿ ತಪ್ಪಾದರೆ ಅಕ್ಕಪಕ್ಕದಲ್ಲಿ ಕುಳಿತ ಹೆಂಗುಸರು ತಿದ್ದಿ ಸರಿಪಡಿಸುತ್ತಿದ್ದರು. ಹೀಗೆ ತನ್ನ ಸರ್ವನಾಶ ಪೂರ್ತಿಯಾಗಿ ಆಗಿಹೋಯಿತೆಂದು ಹರಕಾಲಿಗೆ ಎನಿಸಿಹೋಯಿತು. ಅದರಲ್ಲಿ ತನ್ನದೆಷ್ಟು, ಉಳಿದವರದೆಷ್ಟು ಎಂಬುದನ್ನು ತಿಳಿದುಕೊಳ್ಳಲು ಅವರು ತನ್ನ ಕಿರುಮನೆಗೆ ಹೋಗಿ ಬಾಗಿಲು ಹಾಕಿಕೊಂಡು ಕುಳಿತಳು. ಒಳಿತನ್ನು ಮಾಡಲು ಬಂದ ಆ ಹೆಂಗಸರಿಗೆ ತಾವು ಮಾಡಿದ್ದು ಒಳಿತೊ ಕೆಡುಕೊ ಎಂಬುದು ತಿಳಿಯದೆ ಹೋಯಿತು; ಆದುದರಿಂದ ಅವರು ಮುಖವನ್ನು ಒಣಗಿಸಿಕೊಂಡು ಒಬ್ಬೊಬ್ಬರಾಗಿ ಹೊರಟು ಹೋಗತೊಡಗಿದರು. ತನ್ನ ಏರುತ್ತಿರುವ ಭಾಗ್ಯದಲ್ಲಿ ಇಂತಹ ಅನುಕೂಲ ಸಂಗತಿ ಕೊನೆಯ ವರೆಗೆ ಉಳಿಯುವುದೇ, ಇಲ್ಲವೆ, ಎಂದು ಹರಕಾಲಿಗೆ ಚಿಂತೆಯುಂಟಾಯಿತು. "ಇದು ಮಂಗಲಕರವಾದ ಸಂಗತಿಯಾಗಿದ್ದರೆ ಇದಕ್ಕೆ ಹಂಚಿಕೆ ಏನು? ನನ್ನ ಭಾಗ್ಯ ತೆರೆದುದೆ ನಿಜವಾದರೆ, ಇಷ್ಟು ದಿನಗಳ ಮೇಲೆ ದೇವರು ನನ್ನನ್ನು ಕೃಪಾದೃಷ್ಟಿಯಿಂದ ನೋಡಿದ್ದೇ ಸಹಜವಾದರೆ, ನನ್ನ ತಂಗಿಯ ಮಗಳು ಇನ್ನೂ ಕುಮಾರಿಯಾಗಿಯೆ ಇದ್ದಾಳೆ. ಇನ್ನೂ ಅವಳು ಯಾರ

ಉಡಿಯಲ್ಲಿಯೂ ಬಿದ್ದಿಲ್ಲ. ಅದಕ್ಕೆ ಇದೇ ಸಮಯ. ಬೇಕಾದುದಾಗಲಿ; ನಾನು ಈ ವಿಷಯದಲ್ಲಿ ಜೀವದ ಹಂಗುಬಿಟ್ಟು ಪ್ರಯತ್ನ ಪಡಲೇಬೇಕು" ಅವಳು ಹೀಗೆ ಯೋಚಿಸುತ್ತ ಚಂದ್ರನಾಥನು ಓದು ಬರೆಯುವಲ್ಲಿಗೆ ಹೋದಳು.

ಹರಕಾಲಿಯ ಮುಖದ ಮೇಲಿನ ಭಯಂಕರವಾದ ಭಾವವನ್ನು ಕಂಡು ಚಂದ್ರನಾಥನು ಚಿಂತೆಗೊಳಗಾಗಿ "ಏನತ್ತೆ ! ಏನಾಗಿದೆ ? " ಎಂದು ಕೇಳಿದ.

ಹರಕಾಲಿಯು ಮಸೆಗಟ್ಟಿಸಿಕೊಂಡು ಅಳುವಂತೆ ನಟಿಸುತ್ತ "ಏನು ಚಂದ್ರನಾಥ, ನಾವು ಬಡವರು, ದರಿದ್ರರು. ಇದಕ್ಕಾಗಿಯೆ ನಮಗೆ ಈ ದಂಡ ವಿಧಿಸಿದೆಯಾ ? " ಎಂದಳು.

ಚಂದ್ರನಾಥ ಪ್ರಂಚನಂತಾದ. ಎಷ್ಟು ವಿಚಾರಿಸಿದರೂ ತಾನೇನು ಮಾಡಿರುವೆನೆಂಬುದು ಆತನಿಗೆ ತಿಳಿಯದೆ ಹೋಯಿತು.

"ಇನ್ನೇನು ಉಳಿಯಿತು ! ಒಂದು ಹಿಡಿ ಅನ್ನಕ್ಕಾಗಿ ನಮ್ಮ ಜಾತಿ ಹೋಯಿತು, ಧರ್ಮ ಹೋಯಿತು. ಚಂದ್ರನಾಥ, ನಮಗೆ ಹೊಟ್ಟೆ ಬಟ್ಟೆಗೆ ಇದ್ದಿದ್ದರೆ, ನೀನು ಹೀಗೆ ನಮ್ಮ ಸರ್ವನಾಶ ಮಾಡುತ್ತಿದ್ದೆಯಾ ! "

ಚಂದ್ರನಾಥ ಸ್ವಲ್ಪ ಹೊತ್ತು ಸುಮ್ಮನಿದ್ದು ಅತ್ಯಂತ ಶಾಂತಚಿತ್ತದಿಂದ ಕೇಳಿದ—"ಏನಾಯಿತಮ್ಮಾ ? "

ಹರಕಾಲಿ ಸೆರಗಿನಿಂದ ಕಂಬನಿಗಳನ್ನು ಸುಮ್ಮಸುಮ್ಮನೆ ಒರೆಯಿಸಿ ಕೊಳ್ಳುತ್ತ "ಈ ಸುಟ್ಟ ಭಾಗ್ಯದಲ್ಲಿ ಏನಾಗಬೇಕೆಂದು ಬರದಿದ್ದಿತೊ ಅದೇ ಆಯಿತು. ನನ್ನ ರಾಜ, ಇಷ್ಟೆಲ್ಲ ತೊಂದರೆಗೆ ಆ ರಾಕ್ಷಸಿಯರೆ ಕಾರಣರು " ಎಂದಳು.

"ನಿನ್ನ ಕಾಲಿಗೆ ಬೀಳುತ್ತೇನೆ, ಮನಬಿಚ್ಚಿ ಸ್ಪಷ್ಟವಾಗಿ ಹೇಳು ಏನಾಯಿತೆಂದು."

"ನಾನೇನು ಹೇಳಲಿ ? ನಿಮ್ಮ ಚಿಕ್ಕಪ್ಪನನ್ನೇ ಕೇಳು ಹೋಗು."

"ಚಿಕ್ಕಪ್ಪನನ್ನೇ ಕೇಳಬೇಕಾಗಿದ್ದರೆ, ನೀನೇಕೆ ಹೀಗೆ ಮಾಡುತ್ತಿದು ವುದು ? " ಎಂದು ಸಿಡುಕಿನಿಂದ ನುಡಿದ ಚಂದ್ರನಾಥ.

“ಚಂದ್ರನಾಥ, ನಮ್ಮ ಸರ್ವನಾಶವಾಗಿ ಹೋಯಿತಪ್ಪಾ. ಆದುದರಿಂದಲೇ ಹೀಗೆ ಮಾಡುತ್ತಿದ್ದೇನೆ.”

ಮಾವ ಅತ್ತೆಯ ಮೇಲೆ ಚಂದ್ರನಾಥನಿಗೆ ಸಾಕಷ್ಟು ಆದರವಿತ್ತು. ಆದರೆ ಅವರ ಇಂತಹ ನಡತೆಯಿಂದ ಮನುಷ್ಯನ ಸ್ವಭಾವಕ್ಕನುಸರಿಸಿ ಅವನೂ ವಿರಕ್ತನಾದ. ಅವನಿಂದ ಸಿಟ್ಟು ತಡೆಯಲಾಗಲಿಲ್ಲ. “ಸರ್ವನಾಶವಾಗುತ್ತಿದ್ದರೆ, ಯಾರ ಮನೆಗಾದರೂ ಹೋಗಿಬಿಡು. ನಮ್ಮೆದುರಿಗೆ ಹೀಗೆಲ್ಲಾ ಹುಡುಗಾಟ ಮಾಡಬೇಡ.” ಎಂದ.

ಈಗ ಹರಕಾಲಿ ಚಂದ್ರನಾಥನ ತಾಯಿಯ ಹೆಸರು ಹೇಳಿ ಹೇಳಿ ಅಳಲಾರಂಭಿಸಿದಳು. “ಅಯ್ಯೋ, ನೀನೇ ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದೆ, ಈಗ ನಿನ್ನ ಮಗ ನಮ್ಮನ್ನು ಹೊರಗೆ ಹಾಕಬಯಸುತ್ತಾನೆ.”

ಚಂದ್ರನಾಥ ವ್ಯಾಕುಲನಾಗಿ ಆಕೆಯ ಕೈ ಹಿಡಿದು “ಅತ್ತೆ, ನೀನು ಒಡೆದು ಸ್ಪಷ್ಟವಾಗಿ ಹೇಳದಿದ್ದರೆ ನನಗೆ ಹೇಗೆ ತಿಳಿಯಬೇಕು? ಬರೀ ‘ಸರ್ವನಾಶ, ಸರ್ವನಾಶ’ ಎನ್ನುತ್ತೀ ಹೊರತು ಬಾಯಿಬಿಚ್ಚಿ ಸ್ಪಷ್ಟವಾಗಿ ಹೇಳುವುದಿಲ್ಲ.” ಎಂದ.

ಹರಕಾಲಿಯು ಪುನಃ ಕಣ್ಣು ಒರೆಸಿಕೊಳ್ಳುತ್ತ “ಏನು, ನಿನಗೆ ಏನೂ ಗೊತ್ತಿಲ್ಲವೆ?” ಎಂದಳು.

“ಇಲ್ಲ.”

“ನಿಮ್ಮ ಚಿಕ್ಕಪ್ಪನಿಗೆ ಕಾಶಿಯಿಂದ ನಿಮ್ಮ ಪುರೋಹಿತರು ಒಂದು ಪತ್ರ ಬರೆದಿದ್ದಾರೆ.”

“ಏನೆಂದು?”

ಹರಕಾಲಿಯು ಉಗುಳುನುಂಗಿ ತಲೆಬಾಗಿಸಿಕೊಂಡು ಎಂದಳು-“ಚಂದ್ರ, ಕಾಶಿಯಲ್ಲಿ ನೀನು ಒಬ್ಬನೆ ಇದ್ದೆ. ನಿನ್ನನ್ನು ಆ ರಾಕ್ಷಸಿಯರು ಮೋಸಮಾಡಿ ವೇಶ್ಯೆಯೊಡನೆ ನಿನ್ನ ಮದುವೆ ಮಾಡಿಸಿಬಿಟ್ಟರು.”

ಚಂದ್ರನಾಥ ಅಗಲವಾಗಿ ಕಣ್ದೆರೆದು “ಏನೆಂದೆ? ಯಾರ ಮದುವೆ ಮಾಡಿದರು?” ಎಂದು ಕೇಳಿದ.

ಹರಕಾಲಿ ಹಣೆಗಟ್ಟಿಸಿಕೊಳ್ಳುತ್ತ “ನಿನ್ನದು” ಎಂದಳು.

ಚಂದ್ರನಾಥ ಅತ್ತೆಯ ಬಳಿ ಬಂದು ಅಧೀರತೆಯಿಂದ ಕೇಳಿದ–"ವೇಶ್ಯೆಯೊಡನೆ ಯಾರ ಮದುವೆಯಾಗಿದೆ? ನನ್ನದೆ?"

"ಹೌದು, ನಿನ್ನದೆ."

"ಮದುವೆಯ ಮೊದಲು ಸರಯೂ ವೇಶ್ಯಾವೃತ್ತಿ ಮಾಡುತ್ತಿದ್ದಳೆಂದು ಈ ಮಾತಿನ ಅರ್ಥವೆ? ಅತ್ತೆ ಸರಯೂ, ಈ ಮನೆಗೆ ಬಂದಾಗ ೧೦ ವರ್ಷದವಳಿನ್ನುವುದು ನಿನಗೆ ಗೊತ್ತಿಲ್ಲವೆ?"

"ಇದು ನನಗೆ ಸರಿಯಾಗಿ ಗೊತ್ತಿಲ್ಲ, ಚಂದ್ರನಾಥ. ಆದರೆ ಆಕೆಯ ತಾಯಿ ಮಾತ್ರ ಕಾಶಿಯಲ್ಲಿ ಕೆಟ್ಟಹೆಸರು ಪಡೆದುಕೊಂಡಿದ್ದಾಳೆ."

"ಹೀಗೆ ಹೇಳಮ್ಮಾ. ಈಕೆಯ ತಾಯಿ ವೇಶ್ಯಾವೃತ್ತಿ ಮಾಡುತ್ತಿದ್ದಳು, ಈಕೆ ವೇಶ್ಯೆ ಇರಲಿಲ್ಲವೆಂದು ಹೇಳು."

ಹರಕಾಲಿಯು ಮನದಲ್ಲಿಯೆ ಸ್ವಲ್ಪ ಉದ್ವಿಗ್ನಳಾಗಿ "ಚಂದ್ರನಾಥ, ಹಾಗೆಂದರೂ ಒಂದೇ, ಹೀಗೆಂದರೂ ಒಂದೇ" ಎಂದಳು.

ಚಂದ್ರನಾಥ ಕೆರಳಿ "ಏನು ಅತ್ತೆ, ನೀನು ಯಾರ ಕೂಡ ಮಾತನಾಡುತ್ತಿರುವೆ? ನಿನಗೆ ಹುಚ್ಚು ಹಿಡಿದಿದೆಯೇನು?

ಈ ಬೆದರಿಕೆಯನ್ನು ಕೇಳಿ ಹರಕಾಲಿ ಅಳುತ್ತ ಅಳುತ್ತ "ಚಂದ್ರನಾಥ, ಹುಚ್ಚು ಹಿಡಿಸುವಂತಹ ಮಾತೇ ಸರಿಯಪ್ಪ ಇದು. ನಮ್ಮಿಬ್ಬರಿಗೂ ಪ್ರಾಯಶ್ಚಿತ್ತ ಕೊಡಿಸಿಬಿಡು. ಆಮೇಲೆ ಬುದ್ಧಿ ತಿಳಿದ ಕಡೆಗೆ ಹೊರಟು ಹೋಗುವೆವು. ಇದಕ್ಕಿಂತ ಭಿಕ್ಷೆ ಬೇಡಿಕೊಂಡು ಬದುಕುವುದು ಒಳ್ಳೆಯದು."

ಚಂದ್ರನಾಥನೂ ಕ್ರೋಧದಿಂದ "ಹೌದು ಅದೇ ಒಳ್ಳೇದು" ಎಂದ.

"ಹಾಗಾದರೆ, ಹೊರಟು ಹೋಗಬೇಕು ತಾನೆ?"

"ಹೂಂ, ಹೊರಟು ಹೋಗಿರಿ" ಮುಖ ತಿರುಗಿಸಿಕೊಂಡು ಚಂದ್ರನಾಥ ಹೇಳಿಬಿಟ್ಟ.

ಹಣೆಯನ್ನು ಬಡೆದುಕೊಳ್ಳುತ್ತ "ಅಯ್ಯೋ, ದುರ್ಭಾಗ್ಯವೇ? ನನ್ನ ಭಾಗ್ಯದಲ್ಲಿ ಇದನ್ನೆ ಬರೆದಿದ್ದಿತೆ?" ಹರಕಾಲಿ ಬೊಬ್ಬೆ ಹಾಕತೊಡಗಿದಳು.

ಚಂದ್ರನಾಥ ಮುಖ ತಿರುಗಿಸಿ ಗಂಭೀರನಾಗಿ ಮತ್ತೆ ಕೇಳಿದ – "ನೀನು ಸ್ಪಷ್ಟವಾಗಿ ತಿಳಿಯುವಂತೆ ಏಕೆ ಹೇಳುವುದಿಲ್ಲ?"

"ಎಲ್ಲವನ್ನು ಹೇಳಿಬಿಟ್ಟಿದ್ದೇನೆ."

"ಏನೂ ಹೇಳಿಲ್ಲ—ಆ ಪತ್ರ ಎಲ್ಲಿ ಇದೆ ?"

"ನಿನ್ನ ಚಿಕ್ಕಪ್ಪನ ಹತ್ತಿರ."

"ಅದರಲ್ಲೇನು ಬರೆದಿದೆ ?"

"ಅದನ್ನು ಹೇಳಿದೆನಲ್ಲವೆ ?"

ಚಂದ್ರನಾಥ ಮರಳಿ ಬಂದು ಒಂದು ಮಣೆಯ ಮೇಲೆ ಕುಳಿತ. ಗಾಂಭೀರ್ಯ, ಲಜ್ಜೆ ಮತ್ತು ತಿರಸ್ಕಾರಗಳಿಂದ ಅವನ ಮೈಯೆಲ್ಲ ಜುಮ್ಮೆಂದಿತು. ಮೈಮೇಲೆ ಎಚ್ಚರವೆ ಉಳಿಯದಂತಾಯಿತು. ಅವನ ಮುಖದಿಂದ "ಶಿವ ! ಶಿವ !" ಎಂಬ ಶಬ್ದಗಳು ಮಾತ್ರ ಹೊರಟವು.

ಚಂದ್ರನಾಥನ ಮುಖವನ್ನು ನೋಡಿ ಹರಕಾಲಿಗೆ ಹೆದರಿಕೆ ಬಂದಿತು. ಇಂತಹ ಭಯಾನಕ ಕಠೋರ ಭಾವವನ್ನು ಯಾರೂ ಯಾವ ಹೆಣದ ಮುಖದ ಮೇಲೂ ನೋಡಿರಲಿಕ್ಕಿಲ್ಲ. ಅವಳು ಸ್ವಲ್ಪವೂ ಸದ್ದುಮಾಡದೆ ಅಲ್ಲಿಂದ ಹೊರಟು ಹೋದಳು.

## ೯

"ಪತ್ರ ಎಲ್ಲಿದೆ ನೋಡೋಣ ?" ಎಂದ ಚಂದ್ರನಾಥ.

ಮಣಿಶಂಕರರು ಏನೂ ನುಡಿಯದೆ ಎದ್ದು ಪೆಟ್ಟಿಗೆ ತೆರೆದರು. ಪತ್ರ ತೆಗೆದು, ಚಂದ್ರನಾಥನ ಕೈಗೆ ಕೊಟ್ಟರು. ಚಂದ್ರನಾಥ ಪತ್ರವನ್ನು ಮೊದಲಿನಿಂದ ಕೊನೆಯವರೆಗೆ ಎರಡು ಸಲ ಓದಿ ಒಣಗಿದ ಸ್ವರದಲ್ಲಿ ಪ್ರಶ್ನಿಸಿದ— "ಇದಕ್ಕೆ ಪ್ರಮಾಣ ?"

"ಸ್ವತಃ ರಾಖಾಲದಾಸನೆ ಬಂದಿದ್ದಾನೆ."

"ಅವನ ಮಾತಿನಲ್ಲಾದರೂ ವಿಶ್ವಾಸವಿಡುವುದು ಹೇಗೆ ?"

"ಅದನ್ನು ಹೇಳಲಾರೆ. ನಿನಗೆ ತಿಳಿದಂತೆ ಮಾಡು."

"ಅವನು ಏತಕ್ಕೋಸ್ಕರ ಬರುತ್ತಿರುವುದು ? ಇದನ್ನು ಸಿದ್ಧಮಾಡುವುದರಿಂದ ಅವನಿಗೇನು ಲಾಭ ?

"ಲಾಭದ ವಿಷಯ ಈ ಪತ್ರದಲ್ಲೇ ಇದೆ. ಅವನು ಎರಡು ಸಾವಿರ ರೂಪಾಯಿ ಕೇಳುತ್ತಾನೆ."

ನೆಟ್ಟ ನೋಟದಿಂದ ಮಣಿಶಂಕರರನ್ನು ನೋಡುತ್ತ ಚಂದ್ರನಾಥ ಸ್ವಾಭಾವಿಕವಾಗಿಯೆ ನುಡಿದ—"ಈ ಮಾತು ಹೊರಬೀಳದೆ ಇದ್ದಿದ್ದರೆ ಬೆದರಿಕೆ ತೋರಿಸಿ ರೂಪಾಯಿ ಕಿತ್ತುಕೊಳ್ಳಬಹುದಾಗಿತ್ತು. ಆದರೆ ಈಗ ಅವನ ಆಸೆ ಮಣ್ಣುಗೂಡಿ ಹೋಯಿತು. ಒಂದು ಬಗೆಯಿಂದ ನೀವು ನನಗೆ ಉಪಕಾರವನ್ನೇ ಮಾಡಿದಂತಾಯಿತು. ನನ್ನ ಇಷ್ಟು ರೂಪಾಯಿಗಳನ್ನು ಉಳಿಸಿದಿರಿ."

ಮಣಿಶಂಕರರಿಗೆ ನಾಚಿಕೆಯಿಂದ ತಲೆಯೆತ್ತದಂತಾಯಿತು. ಇದನ್ನು ಹಬ್ಬಿಸಿದ್ದು ತಾನು ಅಲ್ಲವೆಂದು ಹೇಳಬೇಕೆಂಬ ವಿಚಾರವು ಮಣಿಶಂಕರರಿಗೆ ತೋರಿತು. ಆದರೆ ಕೂಡಲೆ ಈ ಮಾತು ಹೊರಗೆ ಬಂದದ್ದು ತನ್ನಿಂದಲೆ ಎಂಬುದು ಅವರಿಗೆ ನೆನಪಾಯಿತು. ಹೆಂಡತಿಗೆ ಇದನ್ನು ಹೇಳಿರಬಹುದೆ ಯಾರಿಗೆ ಗೊತ್ತಾಗುತ್ತಿದ್ದಿತು! ಆದ್ದರಿಂದ ಅವರು ತಲೆಬಾಗಿಸಿಕೊಂಡು ಕುಳಿತುಬಿಟ್ಟರು.

"ಇದು ನನ್ನ ಊರು. ಒಬ್ಬ ಅಂಜಟ ಮನುಷ್ಯ ಯಾವ ಧೈರ್ಯದಿಂದ ನನ್ನ ಅಪಮಾನ ಮಾಡುವುದಕ್ಕೆ ನನ್ನ ಊರಿಗೆ ನನ್ನ ಮನೆಗೆ ಬರುತ್ತಿದ್ದಾನೆ ಎಂಬವನ್ನು ಕುರಿತು ನಾನು ನಿಮ್ಮನ್ನು ಕೇಳಬಯಸುವುದಿಲ್ಲ. ಆದರೆ ಚಿಕ್ಕಪ್ಪ, ಒಂದು ಮಾತು ಅವಶ್ಯವಾಗಿ ಕೇಳಬೇಕೆಂದೆನಿಸುತ್ತದೆ – ನಾನು ಸತ್ತುಹೋದರೆ ನಿಮಗೆ ಸುಖವಾದೀತೆ?"

ಮಣಿಶಂಕರರು ನಾಲಿಗೆಯನ್ನು ಕಚ್ಚಿ ಎಂದರು "ರಾಮ ರಾಮ! ಚಂದ್ರನಾಥ, ಇಂಥ ಮಾತುಗಳನ್ನಾಡಬೇಡ"

"ಇನ್ನು ಇಂತಹ ಮಾತುಗಳನ್ನು ಎಂದೂ ಆಡಬೇಕಾಗಿಲ್ಲ. ತಾವು ನನಗೆ ಪೂಜ್ಯರು, ಈ ಹೊತ್ತು ನನ್ನಿಂದ ಅಪರಾಧವಾಗಿದ್ದರೆ ನನ್ನನ್ನು ಕ್ಷಮಿಸಿರಿ. ನನ್ನ ಹತ್ತಿರ ಇದ್ದ ಸಿರಿಸಂಪತ್ತೆಲ್ಲವನ್ನು ನೀವು ತೆಗೆದುಕೊಳ್ಳಿರಿ. ಎಲ್ಲವನ್ನು ತೆಗೆದುಕೊಂಡು ನನ್ನ ಮೇಲೆ ಪ್ರಸನ್ನರಾಗಿರಿ. ನಾನು ಇದ್ದಲ್ಲಿಗೆ ಪ್ರತಿ ತಿಂಗಳೂ ಸ್ವಲ್ಪ ಕಳಿಸಿಕೊಡುತ್ತಿರಿ. ಇದಕ್ಕೂ ಹೆಚ್ಚಿಗೇನೂ ಬೇಡುವು

ದಿಲ್ಲವೆಂದು ಈಶ್ವರನ ಆಣೆಮಾಡಿ ಹೇಳುತ್ತೇನೆ. ಆದರೆ ನೀವು ನನ್ನ ಸರ್ವ ನಾಶವನ್ನು ಮಾಡಬಾರದು.''

ಈ ನುಡಿಗಳನ್ನು ಆಡುವಾಗ ಚಂದ್ರನಾಥನ ಕಂಠವು ಬಿಗಿದು ಬಂದಿತು. ಹಲ್ಲಿನಿಂದ ತುಟಿಗಳನ್ನು ಕಚ್ಚಿಹಿಡಿದು ಉಕ್ಕಿಬರುತ್ತಿರುವ ಅಳುವನ್ನು ತಡೆದ.

ಮಣಿಶಂಕರರು ಎದ್ದುನಿಂತು ಚಂದ್ರನಾಥನನ್ನು ಬಿಗಿದಪ್ಪಿ ದೊಡ್ಡ ದನಿಯಲ್ಲಿ ಅಳತೊಡಗಿದರು. "ಮಗೂ, ಚಂದ್ರನಾಥ, ನನ್ನ ಸ್ವರ್ಗೀಯ ಅಣ್ಣನ ವಂಶಕ್ಕೆ ನೀನೊಬ್ಬನೆ ಕುಲದೀಪಕ. ನೀನು ಈ ಮುದುಕನನ್ನು ತಿರಸ್ಕರಿಸಬೇಡಪ್ಪ, ಸೆರೆಗೊಡ್ಡಿ ಬೇಡಿಕೊಳ್ಳುತ್ತೇನೆ.''

ಚಂದ್ರನಾಥ ಮುಖ ತಿರುಗಿಸಿ ಕಂಬನಿಗಳನ್ನು ಒರೆಯಿಸಿಕೊಳ್ಳುತ್ತ ''ಚಿಕ್ಕಪ್ಪ, ನಾನು ನಿಮ್ಮನ್ನು ತಿರಸ್ಕರಿಸುವುದಿಲ್ಲ. ಆದರೆ ಈ ದುರ್ಭಾಗ್ಯವು ನನ್ನ ಬೆನ್ನುಹತ್ತಿದ ಬಳಿಕ ಈ ಊರನ್ನು ಬಿಟ್ಟುಹೋಗುವುದಲ್ಲದೆ ಬೇರೆ ಯಾವ ಉಪಾಯವೂ ತೋರುವುದಿಲ್ಲ; ನಾನು ನಿಮಗೆ ಹೇಳಬೇಕೆಂದುದು ಇಷ್ಟೇ ಎಂದ.''

ಮಣಿಶಂಕರರು ವಿಸ್ಮಯದಿಂದ "ಏಕೆ, ಊರನ್ನೇಕೆ ಬಿಡಬೇಕು? ನೀನು ಈ ಮದುವೆ ತಿಳಿಯದೆ ಮಾಡಿಕೊಂಡವನು. ಅದಕ್ಕೋಸ್ಕರ ಇದರಲ್ಲಿ ನಾಚಿಕೆ ಪಟ್ಟುಕೊಳ್ಳುವಂತಹದೇನೂ ಇಲ್ಲ. ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಸಾಕೆಂದು ನನಗೆ ತೋರುತ್ತದೆ" ಎಂದರು.

ಚಂದ್ರನಾಥ ಸುಮ್ಮನಿದ್ದ.

ಮಣಿಶಂಕರರು ಉತ್ಸಾಹಿತರಾಗಿ ಮತ್ತೆ ಎಂದರು—''ಇದಕ್ಕೆ ಬೇಕಾದಷ್ಟು ಉಪಾಯಗಳಿವೆ. ಸರಯೂಳನ್ನು ತ್ಯಜಿಸಿ ಸುಮ್ಮನೆ ಪ್ರಾಯಶ್ಚಿತ್ತ ತೆಗೆದುಕೊಂಡು ಬಿಡು. ಇನ್ನೊಂದು ಮದುವೆ ಮಾಡಿಕೊಂಡು ಮನೆತನ ಸಾಗಿಸು. ಎಂದರೆ ಎಲ್ಲ ರೀತಿಯಿಂದಲೂ ನಿನ್ನ ಕ್ಷೇಮವಾಗುವುದು.'

ಚಂದ್ರನಾಥ ನಡುಗಿದ.

ಮಣಿಶಂಕರರು ವರ್ತಮಾನಯುಗವನ್ನು ಕ್ರಾಂತಿಯ ಯುಗವೆಂದು ತಿಳಿದವರು. ಚಂದ್ರನಾಥ ಸಾಮಾಜಿಕ ಕ್ರಾಂತಿಕಾರನೆಂಬ ಮಾತು ಕೂಡಲೆ ಅವರ ನೆನಪಿಗೆ ಬಂದಿತು. ಅವರು ಚಂದ್ರನಾಥನ ಮುಖದ ಕಡೆ ನೋಡ ತೊಡಗಿದರು.

"ಚಿಕ್ಕಪ್ಪ, ನಾನು ಅವಳನ್ನು ತ್ಯಜಿಸುವುದು ಸಾಧ್ಯವಿಲ್ಲ."

"ಇಲ್ಲ, ನೀನು ಅವಳನ್ನು ತ್ಯಜಿಸಬಲ್ಲೆ. ಇಂದು ಸ್ವಲ್ಪ ವಿಶ್ರಮಿಸಿ ನಾಳೆ ಸ್ವಲ್ಪ ಸ್ಥಿರಬುದ್ಧಿಯಿಂದ ವಿಚಾರಮಾಡಿ ನೋಡು. ಎಂದರೆ ಇದು ಅಂತಹ ಕಠಿನವಾದ ಕೆಲಸವಲ್ಲವೆಂದು ನಿನಗೆ ತಿಳಿದುಬಂದೀತು. ಇನ್ನು ಮುಂದೆ ಸರಯೂಳನ್ನು ಮನೆಯಲ್ಲಿಟ್ಟುಕೊಳ್ಳಲಾಗದು."

"ಆಧಾರ ಸಿಕ್ಕದ ಹೊರತು ಅವಳನ್ನು ಬಿಡಬೇಕೆಂದು ಹೇಗೆ ಹೇಳ ಬಲ್ಲಿರಿ ?"

ವೃದ್ಧ ಮಣಿಶಂಕರರು ಸ್ವಲ್ಪ ಹೊತ್ತು ಯೋಚಿಸಿ "ಇದನ್ನು ಆಧಾರ ಸಹಿತ ತೋರಿಸುವ ಅಗತ್ಯ ಬೀಳದಂತೆ ಉಪಾಯಮಾಡುತ್ತೇನೆ. ಆದರೆ ಕೊನೆಯಲ್ಲಿ ನೀನು ತ್ಯಜಿಸಲೇಬೇಕಾಗುವುದು. ನೀನು ಅವಳನ್ನು ತ್ಯಜಿಸಿ ಪ್ರಾಯಶ್ಚಿತ್ತ ಮಾಡಿಕೊಂಡರಾಯಿತು. ಜಗಳ ಎಲ್ಲವೂ ತಣ್ಣಗಾಗು ವುದು " ಎಂದು ಹೇಳಿದರು.

"ಅದು ಹೇಗೆ ? ಯಾರು ತಣ್ಣಗೆ ಮಾಡುವರು ?"

"ನಾನು ಮಾಡುತ್ತೇನೆ, ಹೇಗಾದರೂ ಮಾಡಿ."

"ಸರಿಯಾಗಿ ಯಾವುದನ್ನೂ ತಿಳಿದುಕೊಳ್ಳದೆಯೆ ?"

"ಇಚ್ಛೆಯಿದ್ದರೆ ಆಮೇಲೆ ತಿಳಿದುಕೊಳ್ಳಬಹುದು. ಆದರೆ ಇದೆಲ್ಲವೂ ಸುಳ್ಳಲ್ಲವೆಂದು ನಾನು ನಿನಗೆ ಖಂಡಿತವಾಗಿ ಹೇಳಬಲ್ಲೆ."

ಚಂದ್ರನಾಥ ಮನೆಗೆ ಹಿಂತಿರುಗಿ ಬಾಗಿಲು ಮುಚ್ಚಿಕೊಂಡು ತನ್ನ ಕಿರು ಮನೆಯೊಳಗೆ ಮಂಚದ ಮೇಲೆ ಮಲಗಿದ. ಮಣಿಶಂಕರರು ಸರಯೂಳನ್ನು ಬಿಡಬೇಕಾಗುವುದೆಂದು ಹೇಳಿದ್ದಾರೆ. ಮಂಚದ ಮೇಲೆ ಒರಗಿಕೊಂಡೆ ಮೇಲ್ಗಡೆಗೆ ನೋಡುತ್ತ, ಮಲಗಿದಾಗ ಮನುಷ್ಯನು ತನ್ನಷ್ಟಕ್ಕೆ ತಾನೇ ಮಾತ ನಾಡುತ್ತಿರುವಂತೆ, ಅದೊಂದೇ ಮಾತನ್ನು ತಿರುತಿರುಗಿ ಎನ್ನತೊಡಗಿದ. "ಸರಯೂಳನ್ನು ಬಿಡಬೇಕಾಗುವುದು, ಅವಳು ವೇಶ್ಯಾಪುತ್ರಿ." ಈ ಮಾತನ್ನು ಅವನು ಅದೆಷ್ಟೋ ಸಲ, ಅದೆಷ್ಟೋ ಪ್ರಕಾರದಿಂದ ತನ್ನ ಬಾಯಿಂದಲೆ ಹೇಳಿದ; ಕೇಳಿದ. ಆದರೆ ಯಾವ ಬಗೆಯಿಂದಲೂ ಈ ಮಾತು ಅವನಿಗೆ ತಿಳಿಯ ದಾಯಿತು; ಹೊಳೆಯದಾಯಿತು. 'ತಾನು ಸರಯೂಳನ್ನು ತ್ಯಜಿಸಿಬಿಟ್ಟಿ ದ್ದೇನೆ. ಸರಯೂ ಮನೆಯಲ್ಲಿಲ್ಲ. ಕಣ್ಣೆದುರಿನಲ್ಲಿಲ್ಲ, ಕಣ್ಮರೆಯಾಗಿಯೂ

ಇಲ್ಲ. ಅವಳೀಗ ತನ್ನಾಕೆಯಲ್ಲ' ಎಂಬ ಮಾತಿನ ಕಲ್ಪನೆ ಎಷ್ಟು ಯೋಚಿಸಿದರೂ ಅವನಿಗೆ ಆಗಲೊಲ್ಲದು. ಆದರೂ ಇದು ಅಂತಹ ಕಠಿಣವಾದುದಲ್ಲವೆಂದು ಮಣಿಶಂಕರರು ಹೇಳುತ್ತಾರೆ! ಮನುಷ್ಯನ ಹೃದಯದಲ್ಲಿ ಈ ಮಾತನ್ನು ತಿಳಿದುಕೊಳ್ಳುವ ಶಕ್ತಿಯಿದೆಯೆ? ಈ ಕಾರ್ಯವು ಕಠಿಣವಿದೆಯೆ? ಸರಳವಾಗಿದೆಯೆ? ಇದನ್ನು ಮಾಡಲಿಕ್ಕೆ ಆಗುತ್ತದೆಯೆ? ಯಾವುದೂ ಚಂದ್ರನಾಥನಿಗೆ ಮನದಟ್ಟಾಗದಂತಾಯಿತು.

ಅವನು ನಿರ್ಜೀವಿಯಂತೆ ಬಿದ್ದುಕೊಂಡು ಬಿಟ್ಟ. ಕೊನೆಗೆ ಅವನಿಗೆ ನಿದ್ರೆ ಬಂದಿತು. ನಿದ್ರೆಯಲ್ಲಿಯೆ ಅವನು ಅನೇಕ ಸ್ವಪ್ನಗಳನ್ನು ನೋಡಿದ. ಅವುಗಳಲ್ಲಿ ಕೆಲವು ಸ್ಪಷ್ಟ, ಕೆಲವು ಅಸ್ಪಷ್ಟ. ತನ್ನಲ್ಲಿ ಒಂದು ಅಸ್ಪಷ್ಟವಾದ ವೇದನೆಯು ಹರಿದಾಡುತ್ತಿರುವುದನ್ನು ಆ ನಿದ್ರೆಯಲ್ಲಿಯೇ ಅನುಭವಿಸಿದ. ಸಾಯಂಕಾಲ ಅವನ ನಿದ್ರೆಯು ಹಾರಿತು. ಎದ್ದು ಕುಳಿತ. ಆಗ ಅವನ ಮಾನಸಿಕ ಸ್ಥಿತಿಯು ತೀರ ಬದಲಾಗಿದ್ದಿತು. ಆದರಲ್ಲಿ ಮಾಯಾ ಮಮತೆಗೆ ಸ್ಥಾನವಿರಲಿಲ್ಲ. ಕೋಪ ತಿರಸ್ಕಾರಕ್ಕೆ ಎಡೆಯಿರಲಿಲ್ಲ. ಒಂದು ಅವ್ಯಕ್ತ ನಾಚಿಕೆಯಿಂದ ಬಳಲಿ ಕಂಗೆಟ್ಟು ಅವನ ಮನಸ್ಸು ಶರೀರಗಳು ಮೆಲ್ಲಮೆಲ್ಲನೆ ಮಣ್ಣಿನಲ್ಲಿ ಬೆರೆತುಹೋಗುವದರಲ್ಲಿದ್ದವು.

ಆಳುಮಗನು ದೀಪಹಚ್ಚಿಕೊಂಡು ಬಂದು ಬಾಗಿಲನ್ನು ನೂಕಿದ. ಆಗ ಚಂದ್ರನಾಥ ಲಗುಬಗೆಯಿಂದೆದ್ದು ಬಾಗಿಲು ತೆರೆದ. ಒಂದೆ ಸವನೆ ಅಲ್ಲಿಯೆ ಅಲೆದಾಡತೊಡಗಿದ. ಮುಖದ ಮೇಲೆ–ಕಣ್ಣುಗಳ ಮೇಲೆ–ದೀಪದ ಪ್ರಕಾಶವು ಬಿದ್ದುದರಿಂದ ನಿದ್ರೆಯ ಗುಂಗು ತನ್ನಷ್ಟಕ್ಕೆ ತಾನೆ ಹೊರಟು ಹೋಗಿದ್ದಿತು. ಆಗ ಅವನಿಗೆ 'ಈ ಮಾತು ಸತ್ಯವಿದೆಯೆ? ಸರಯೂಗೆ ಈ ಮಾತು ಗೊತ್ತಿದೆಯೆ?' ಎಂಬ ಸಂಶಯ ಬಂದಿತು.

ತನ್ನ ಸರಯೂ ತಿಳಿದೂ ತಿಳಿದೂ ತನ್ನ ಸರ್ವನಾಶವನ್ನು ಮಾಡಬಹುದೆಂದು ಅವನಿಗೆ ವಿಶ್ವಾಸವುಂಟಾಗಲಿಲ್ಲ. ಕೂಡಲೆ ತನ್ನ ಕಿರುಮನೆಯನ್ನು ಬಿಟ್ಟು ಸರಯೂ ಮಲಗುವ ಕಿರುಮನೆಗೆ ಹೋದ.

ಸಂಜೆಯ ದೀಪ ಹಚ್ಚಿ ಸರಯೂ ಕುಳಿತಿದ್ದಳು. ಪತಿದೇವರು ಬರುವುದನ್ನು ಕಂಡು ಆದರಪೂರ್ವಕವಾಗಿ ಎದ್ದುನಿಂತಳು. ಆಕೆಯ ಮುಖದ ಮೇಲೆ ಭಯ ಅಥವಾ ಉದ್ವಿಗ್ನತೆಯ ಸುಳಿವಿರಲಿಲ್ಲ. ಆದರೆ ದೇಹದಲ್ಲಿ ಒಂದು

ೂಟ್ಟೊ ನೆತ್ತರವಿಲ್ಲದಂತೆ ಮಾತ್ರ ಗೋಚರವಾಗುತಿದ್ದಿತು. ಚಂದ್ರನಾಥ
ಮೆಲ್ಲಗೆ ಕೇಳಿದ—"ನೀನು ಎಲ್ಲವನ್ನೂ ಕೇಳಿದ್ದೀಯಾ ?"

''ಹೂಂ'' ಎಂದಳು ಸರಯೂ ತಲೆಬಾಗಿಸಿಕೊಂಡು.

''ಇದೆಲ್ಲಾ ನಿಜವೇನು ?"

''ಹೌದು, ನಿಜ."

ಮಂಚದ ಮೇಲೆ ಕುಳಿತು "ಇಷ್ಟು ದಿವಸಗಳ ವರೆಗೆ ಹೇಳಲಿಲ್ಲವೇಕೆ?"
ಎಂದು ಕೇಳಿದ ಚಂದ್ರನಾಥ.

"ತಾಯಿ ಹೇಳಬೇಡವೆಂದು ಹೇಳಿದ್ದಳು, ಅಲ್ಲದೆ ನೀವೂ ಕೇಳಲಿಲ್ಲ.''

"ನಿನ್ನ ತಾಯಿಗೆ ನಾನು ಉಪಕಾರ ಮಾಡಿದ್ದೆ. ಅದನ್ನು ಈ ಪ್ರಕಾರ
ತೀರಿಸಿದಿರಾ ?"

ಸರಯೂ ತಲೆಬಾಗಿಸಿಕೊಂಡು ಸುಮ್ಮನೆ ನಿಂತಳು.

"ಇಷ್ಟು ನೀನು ಏಕೆ ಅಂಜಿಕೊಂಡು ಇರುತ್ತಿದ್ದಿಯೆನ್ನುವುದು ಈಗ
ತಿಳಿಯಿತು. ಇಷ್ಟು ಪ್ರೀತಿಸಿದರೂ ಸುಖವೇಕೆ ಸಿಕ್ಕುತ್ತಿರಲಿಲ್ಲವೆನ್ನುವುದು
ಈಗ ಗೊತ್ತಾಯಿತು. ಹಿಂದಿನ ಎಲ್ಲ ಮಾತು–ನಡತೆಗಳು ಈಗ ಅರ್ಥವಾ
ಗುವು. ಇದಕ್ಕೋಸ್ಕರವೇ ನಿನ್ನ ತಾಯಿ ಇಲ್ಲಿಗೆ ಬರಲೊಪ್ಪಲಿಲ್ಲ, ಅಹು
ದಲ್ಲವೆ ?''

ಸರಯೂ ಬಾಗಿಸಿದ ತಲೆಯನ್ನು ಮೇಲಕ್ಕೆತ್ತದೆ "ಹೌದು" ಎಂದಳು.

ಒಂದು ಕ್ಷಣದಲ್ಲಿ ಅವನಿಗೆ ತಾನು ಕಾಶಿಯಲ್ಲಿದ್ದುದು, ಶುದ್ಧ ಮೂರ್ತಿ
ಸರಯೂ, ಅವಳ ವಿಧವಾ ತಾಯಿ, ಆಕೆಯ ಆ ಕೃತಜ್ಞ ಕಂಬನಿದುಂಬಿದ
ಕಣ್ಣುಗಳು, ಸ್ನೇಹಪೂರ್ಣ - ಶಾಂತವಾದ ಮಾತುಗಳು, ಎಲ್ಲವೂ ಒಂದೊಂ
ದಾಗಿ ನೆನಪಿಗೆ ಬಂತು. ಅವನ ಹೃದಯವು ಕರಗಿತು. ಅವನು ನಡುಗುವ
ದನಿಯಿಂದ "ಸರಯೂ, ಎಲ್ಲವನ್ನೂ ನನಗೆ ಬಿಚ್ಚಿ ಹೇಳಬಲ್ಲೆಯಾ?'' ಎಂದ.

"ಹುಂ. ಎಲ್ಲವನ್ನು ಹೇಳಬಲ್ಲೆ. ನಮ್ಮ ಸೋದರಮಾವನ ಮನೆ
ನವದ್ವೀಪದ ಸಮೀಪದಲ್ಲಿದೆ. ರಾಖಾಲ ಭಟ್ಟಾಚಾರ್ಯನ ಮನೆಯೂ
ಮಾವನ ಮನೆಯ ಬಳಿಯಲ್ಲಿಯೆ ಇದ್ದಿತು. ಬಾಲ್ಯಾವಸ್ಥೆಯಿಂದಲೂ ತಾಯಿ
ಅವನನ್ನು ಪ್ರೀತಿಸುತಿದ್ದಳು. ಅವರಿಬ್ಬರ ಮದುವೆಯ ಮಾತುಕತೆಯೂ

ಒಮ್ಮೆ ಎದ್ದಿತ್ತು. ಆದರೆ ಅವನ ಮನೆತನ ಕೀಳು ತರಗತಿಯದಿದ್ದುದರಿಂದ ಮದುವೆ ಆಗಲಿಲ್ಲ. ನನ್ನ ತಂದೆಯವರ ಮನೆ ಹಾಲೀಪಟ್ಟಣದಲ್ಲಿತ್ತು. ನಾನು ಮೂರು ವರ್ಷದವಳಿದ್ದಾಗ ಅವರು ತೀರಿಕೊಂಡರು. ಆಗ ತಾಯಿ ನನ್ನನ್ನು ಕರೆದುಕೊಂಡು ಪುನಃ ನವದ್ವೀಪಕ್ಕೆ ಹೋದಳು. ಆಮೇಲೆ ನಾನು ಐದು ವರ್ಷದವಳಿದ್ದಾಗ ನನ್ನ ತಾಯಿ ನನ್ನನ್ನು ಕರೆದುಕೊಂಡು—''

''ಎಲ್ಲಿಗೆ ಹೋದಳು ?'' ಚಂದ್ರನಾಥ ಕೇಳಿದ.

''ಸ್ವಲ್ಪ ದಿವಸ ಮಥುರೆಯಲ್ಲಿದ್ದೆವು– ವೃಂದಾವನದಲ್ಲಿದ್ದೆವು. ಆಮೇಲೆ ಕಾಶಿಗೆ ಬಂದೆವು. ರಾಖಾಲದಾಸ ಆಗಲೆ ಹೆಂಡ ಕುಡಿಯತೊಡಗಿದ. ತಾಯಿಯ ಹತ್ತಿರ ಕೆಲವು ಒಡವೆ ಇದ್ದುವು. ಅವುಗಳಿಗಾಗಿ ದಿನಾಲು ಕದನ ನಾಗುತ್ತಿದ್ದಿತು. ಒಂದು ದಿನ ಅವನು ಎಲ್ಲ ಆಭರಣಗಳನ್ನು ಕದ್ದುಕೊಂಡು ಓಡಿಹೋದ. ಆಗ ತಾಯಿಯ ಕೈಯಲ್ಲಿ ಒಂದು ಕಾಸೂ ಇರಲಿಲ್ಲ. ಏಳೆಂಟು ದಿನ ಭಿಕ್ಷೆಬೇಡಿ ಜೀವಿಸಿದೆವು. ಆಮೇಲೆ ಆದ ಸಂಗತಿ ನಿಮಗೇ ತಿಳಿದೇ ಇದೆ."

ಚಂದ್ರನಾಥನ ತಲೆಯಲ್ಲಿ ಬೆಂಕಿ ಹೊತ್ತಿಸಿದಂತಾಯಿತು. ಅವನು ಸರಯೂಳ ಮುಖದ ಕಡೆ ಕ್ರೂರದೃಷ್ಟಿಯಿಂದ ನೋಡುತ್ತ "ರಾಮ ರಾಮ ! ನೀನಿರುವುದು ಹೀಗೆ ಸರಯೂ ! ಎಲ್ಲವನ್ನೂ ಅರಿತೂ ಅರಿತೂ ನನ್ನನ್ನು ಹಾಳು ಮಾಡಿದೆ ! ನೀನು ಇಷ್ಟು ಪಾಪಿಷ್ಠೆಯೆಂಬ ಕಲ್ಪನೆ ನನಗೆ ಕನಸಿನಲ್ಲಿ ಕೂಡ ಬರಲಿಲ್ಲ, ಸರಯೂ !" ಎಂದು ನುಡಿದ.

ಸರಯೂಳ ಕಣ್ಣುಗಳಿಂದ ನೀರು ಹನಿ ಹನಿಯಾಗಿ ಬೀಳತೊಡಗಿತು. ಅವಳ ಅಂತಃಸರಸ್ಸು ಒಡೆದು ಹೋಗಿದ್ದಿತು. ನಿಸ್ತಬ್ಧಳಾಗ ತಲೆ ಕೆಳಗೆ ಮಾಡಿಕೊಂಡು ನಿಂತಿದ್ದಳು.

ಸರಯೂ ಅಳುವುದನ್ನು ಚಂದ್ರನಾಥನಿಗೆ ನೋಡುವುದಾಗಲಿಲ್ಲ. ಅವನು ಇನ್ನಿಷ್ಟು ಕಠೋರನಾಗಿ ಕೇಳಿದ –"ಮುಂದೆ ಇವಕ್ಕೇನು ಹಂಚಿಕೆ ?"

ಕಣ್ಣೀರು ಒರೆಸಿಕೊಳ್ಳುತ್ತ ಮೆಲ್ಲನೆ "ನಿಮಗೆ ತಿಳಿದದ್ದು" ಎಂದಳು ಸರಯೂ.

''ಹಾಗಾದರೆ, ಬಾ ಇಲ್ಲಿ ಹತ್ತಿರ."

ಸರಯೂ ಹತ್ತಿರ ಬಂದಳು. ಚಂದ್ರನಾಥ ತನ್ನ ಬಲಿಷ್ಠವಾದ ಮುಷ್ಟಿಯಲ್ಲಿ ಆಕೆಯ ಕೈಹಿಡಿದು ''ನಿನ್ನನ್ನು ತ್ಯಜಿಸಬೇಕೆಂದು ಜನರು ಹೇಳುತ್ತಾರೆ.

ಆದರೆ ನನಗೆ ಈ ಸಾಹಸವಾಗಲೊಲ್ಲದು. ನಿನ್ನ ಮೇಲೆ ನನ್ನ ನಂಬುಗೆಯೂ ಉಳಿಯಲಿಲ್ಲ - ನಿನ್ನ ಬಗೆಗೆ ನನ್ನಲ್ಲಿದ್ದ ಎಲ್ಲ ನಂಬುಗೆಯೂ ಹೋಯಿತು.''

ಒಮ್ಮಿಂದೊಮ್ಮೆ ಸರಯೂನ ಮುಖದ ಮೇಲೆ ಅದೊಂದು ಬಗೆಯ ಕೆಂಪು ಮೂಡಿತು. ಕಂಬನಿದುಂಬಿದ ಮಲಿನ ಕಣ್ಣುಗಳು ಅರೆಕ್ಷಣದಲ್ಲಿ ಮಿಂಚಿದುವು. ಆಕೆ "ನಿಮಗೆ ನನ್ನಲ್ಲಿ ವಿಶ್ವಾಸವಿಲ್ಲವೆ ?" ಎಂದು ಕೇಳಿದಳು.

''ಇಲ್ಲ, ಎಳ್ಳಷ್ಟೂ ಇಲ್ಲ. ನೀನು ಬೇಕಾದುದನ್ನು ಮಾಡಬಲ್ಲೆ.''

ಸರಯೂ ತನ್ನ ಮುಖವನ್ನು ಆತನ ಮುಖದೆದುರಿಗೆ ಒಯ್ದು ಸ್ಥಿರವಾದ ದನಿಯಿಂದ ''ನೀವು ನನಗೇನಾಗಬೇಕೆಂಬುದು ನಿಮಗೆ ಗೊತ್ತಿದೆ. ನಿಮ್ಮ ಮುಖವನ್ನು ಚೆನ್ನಾಗಿ ನೋಡಲು ನೀವೆ, ಒಮ್ಮೆ ನನಗೆ ಹೇಳಿದ್ದಿರಿ. ಈ ಹೊತ್ತು ನಾನು ನಿಮಗೆ ನನ್ನ ಮುಖವನ್ನು ಚೆನ್ನಾಗಿ ನೋಡಿರಿ ಎಂದು ಹೇಳುತ್ತೇನೆ. ನಾನೊಂದು ಮಾತು ಹೇಳುತ್ತೇನೆ. ಕೇಳುತ್ತೀರಾ ?''

''ಹುಂ. ಕೇಳುತ್ತೇನೆ, ಹೇಳು.''

"ನಾನು ವಿಷಪಾನ ಮಾಡಿದರೆ, ಒಳ್ಳೆ ಉಪಾಯ ಮಾಡಿದಂತಾಗುವುದಿಲ್ಲವೆ ?''

ಚಂದ್ರನಾಥನ ಹಿಡಿತ ಇನ್ನಿಷ್ಟು ಬಲವಾಯಿತು. ಇನ್ನು ಸರಯೂ ಎಲ್ಲಿಗೂ ಓಡಿಹೋಗಲಾರಳು. ಅವನೆಂದ - "ಹೌದು, ಇದಾಗಬಹುದು. ನೀನು ವಿಷಪಾನ ಮಾಡಬಲ್ಲೆಯಾ ?"

''ಹುಂ, ಮಾಡಬಲ್ಲೆ.''

''ಬಹಳ ಜಾಗರೂಕತೆಯಿಂದ ಗುಪ್ತವಾಗಿ ಮಾಡಬಲ್ಲೆಯಾ ?"

''ಹೂಂ.''

''ಇಂದೇ ?''

''ಹೂಂ."

ಪತಿಯು ಹೊರಟು ಹೋಗಲು ಸಿದ್ಧವಾದುದನ್ನು ನೋಡಿ ಸರಯೂ ಅವನ ಕಾಲುಗಳನ್ನು ಹಿಡಿದುಕೊಂಡು "ನನ್ನನ್ನು ಆಶೀರ್ವದಿಸುವುದಿಲ್ಲವೆ ?" ಎಂದಳು.

ಚಂದ್ರನಾಥ ಮೇಲೆ ನೋಡುತ್ತ "ಇಲ್ಲ, ಈಗಲೆ ಇಲ್ಲ. ನೀನು ಹೊರಟು

ಹೋದ ಮೇಲೆ, ನಿನ್ನ ಶರೀರ ಸುಟ್ಟು ಭಸ್ಮವಾದಮೇಲೆ ಆಶೀರ್ವದಿಸುವೆ'' ಎಂದ.

"ಆಗಲಿ, ಹಾಗೇ ಆಗಲಿ, ಆಮೇಲಾದರೂ ಮರೆಯದೆ ಕೊಡಿರಿ."

ಚಂದ್ರನಾಥನು ಹೊರಟಕೂಡಲೆ ಮತ್ತೆ ಎದ್ದು ಹೋಗಿ ಅವನ ಮಾರ್ಗವನ್ನು ತಡೆದು "ನಾನು ವಿಷಪಾನ ಮಾಡಿದರೆ ನಿಮಗೆ ಯಾವ ಗಂಡಾಂತರವೂ ಬರಲಿಕ್ಕಿಲ್ಲವಷ್ಟೆ?'' ಎಂದಳು.

"ಇಲ್ಲ.''

"ಯಾರಿಗೂ ಯಾವ ಸಂದೇಹ ಬರಲಿಕ್ಕಿಲ್ಲವೆ?"

"ಜನರೇನೋ ಸಂಶಯಪಡುವರು. ಆದರೆ ಹಣ ಸುರಿದು ಅವರ ಬಾಯಿ ಕಟ್ಟಿಬಿಡುವೆ.''

"ನನ್ನ ಹಾಸಿಗೆಯ ಕೆಳಗೆ ಒಂದು ಪತ್ರ ಬರೆದಿಡುವೆ, ಅದನ್ನು ಎಲ್ಲರಿಗೂ ತೋರಿಸಿರಿ.''

ಚಂದ್ರನಾಥ ಸರಯೂನ ಹತ್ತಿರ ಹೋಗಿ ಆಕೆಯ ತಲೆಯ ಮೇಲೆ ತನ್ನ ಕೈ ಇಟ್ಟು "ಹಾಗೆಯೆ ಮಾಡು. ಪತ್ರ ಚೆನ್ನಾಗಿ ಬರೆದು ಕೆಳಗಡೆ ಸ್ಪಷ್ಟವಾಗಿ ಹಸ್ತಾಕ್ಷರ ಹಾಕು. ಏಕೆಂದರೆ ನಾನು ನಿನ್ನನ್ನು ಕೊಂದೆನೆಂಬ ಭಾವನೆ ಯಾರಿಗೂ ಬರಕೂಡದು. ಇನ್ನೊಂದು ಮಾತು. ಒಳಗಿನಿಂದ ಕಿಡಿಕಿ, ಬಾಗಿಲು ಚೆನ್ನಾಗಿ ಬಿಗಿಯಾಗಿ ಮುಚ್ಚು. ಯಾವ ಸಪ್ಪಳವೂ ಹೊರಗೆ ಬರಕೂಡದು. ನನಗೆ ಅದು ಕೇಳಿಸೀತು—''

ಸರಯೂ ದಾರಿಬಿಟ್ಟಳು. ಒಂದು ಸಲ ನೆಲದ ಮೇಲೆ ತಲೆಯಿಟ್ಟು, ತನ್ನ ಒಡೆಯನಿಗೆ ವಂದಿಸಿದಳು. ಆತನ ಪಾದಧೂಳಿಯನ್ನು ತನ್ನ ಮಸ್ತಕದಲ್ಲಿಟ್ಟುಕೊಂಡು ಅವನನ್ನೇ ನೋಡುತ್ತ "ಹೋಗಿರಿ ಇನ್ನು" ಎಂದಳು.

ಹೀಗೆ ಹೇಳುತ್ತಿರುವಾಗ ಅವಳಲ್ಲಿ ಏನು ಸಂದೇಹವುಂಟಾಯಿತೋ ಯಾರು ಬಲ್ಲರು? ಪತಿಯ ಕೈಹಿಡಿದು "ತಡೆಯಿರಿ ಇನ್ನೂ ಕೊಂಚ" ಎಂದಳು. ದೀಪವನ್ನು ಅವನ ಮೋರೆಯ ಹತ್ತರ ಹಿಡಿದು ಅವನ ಮುಖವನ್ನು ನೋಡಿದಳು– ನೋಡಿ ಬೆಚ್ಚಿದಳು. ಆತನ ಕಣ್ಣುಗಳಲ್ಲಿ ಅಮಾನುಷವಾದ ಬೆಳಕು– ಹುಚ್ಚರಂತಹ ದೃಷ್ಟಿ ಥಳಥಳಿಸುತ್ತಿದ್ದಿತು.

"ಸರಯೂ, ನನ್ನ ಕಣ್ಣುಗಳಲ್ಲೇನು ನೋಡುತ್ತಿರುವೆ?''

ಸ್ವಲ್ಪಹೊತ್ತು ಸುಮ್ಮನಿದ್ದು "ಏನೂ ಇಲ್ಲ, ಇನ್ನು ಹೋಗಿರಿ" ಎಂದಳು ಸರಯೂ.

ಚಂದ್ರನಾಥ ಮೆಲ್ಲಮೆಲ್ಲನೆ ಹೊರಟುಹೋದ. ಹೋಗುವಾಗ ಬಡಬಡಿಸತೊಡಗಿದ—"ಇದೆ ಸರಿ! ಇದೆ ಸರಿ! ಈ ಹೊತ್ತೇ!" ಎಂದು.

## ೧೦

ಅಂದು ರಾತ್ರಿ ಸರಯೂ ತನ್ನ ಕಿರುಮನೆಗೆ ಬಂದು ಮನಸವಣಿಯಾಗಿ ಅತ್ತು ಮನಸ್ಸಿನಲ್ಲಿಯೇ ಹೀಗೆಂದುಕೊಂಡಳು—"ವಿಷಪಾನ ಮಾಡುವುದು ಸಾಧ್ಯವಿಲ್ಲ. ನಾನೊಬ್ಬಳೆ ಆಗಿದ್ದರೆ ಸಾಯಬಹುದಾಗಿದ್ದಿತು. ಈಗ ಇರುವುದು ನಾನೊಬ್ಬಳೆ ಅಲ್ಲ. ಈಗ ನಾನು ತಾಯಿ. ತಾಯಿಯಾಗಿ ಮಕ್ಕಳನ್ನು ಮೃತ್ಯುವಿನ ಬಾಯಿಗೆ ಕೊಡುವುದು ಹೇಗೆ?" ಆದುದರಿಂದಲೇ ಅವಳು ಸಾಯಲಾರಳು. ಇನ್ನು ತನ್ನ ಸುಖದ ಕೊನೆಯಾಯಿತೆಂದು ಮಾತ್ರ ಅವಳು ಖಂಡಿತ ತಿಳಿದಳು.

ಅರ್ಧರಾತ್ರಿಯ ಸಮಯ. ಅಕಸ್ಮಾತ್ ಚಂದ್ರನಾಥನು ತನ್ನ ಹೆಂಡತಿಯ ಕಿರುಮನೆಗೆ ಬಂದ. ಅವಳು ತನ್ನಲ್ಲಿ ಆಡಿಕೊಳ್ಳುತ್ತಿದ್ದ ಮಾತುಗಳನ್ನು ಕೇಳಿದ. ಕೂಡಲೆ ಒಳನುಗ್ಗಿ ಅವಳನ್ನು ಬಿಗಿದಪ್ಪಿ ಸ್ಥಿರನಾದ. ಒಂದೇ ಸಮನೆ "ಹಾಗೆಂದೂ ಮಾಡಬೇಡ, ಸರಯೂ, ಹಾಗೆಂದಿಗೂ ಮಾಡಬೇಡ" ಎಂದು ಎನ್ನತೊಡಗಿದ.

ಅವಳಿಗೆ ಇದಕ್ಕೂ ಹೆಚ್ಚಿಗೆ ಆಶ್ವಾಸನವನ್ನೇನು ಕೊಡಬಲ್ಲನು? ಆ ವಿಶಾಲವಾದ ದೊಡ್ಡ ಮನೆಯಲ್ಲಿ ಆ ಹತಭಾಗಿನಿ ಸರಯೂಗೆ ಇರಗೊಡಲು ಒಂದು ಮೂಲೆಯೂ ಚಂದ್ರನಾಥನಿಗೆ ಹುಡುಕಿದರೆ ಸಿಕ್ಕಲಿಲ್ಲ. ಒಂದೆರಡು ಬಿಸಿಯಾದ ಕಂಬನಿ ಉದುರಿಸಲು ಅವಳಿಗೆ ಆ ಊರಲ್ಲಿ ಮಮತೆಯಿಂದ ಎಡೆಗೊಡುವವರು ಯಾರಾದರೂ ಇದ್ದಾರೆಂಬ ಕಲ್ಪನೆಯೂ ಅವನಿಗೆ ಬರಲಿಲ್ಲ. ಅವಳು ತನ್ನ ಗೃಹತ್ಯಾಗ ಮಾಡಲು ಅತ್ತುಕರೆದು ಏಳು ದಿನಗಳ ಅವಧಿಯನ್ನು ಬೇಡಿಕೊಂಡಳು. ಭಾದ್ರಪದ ಮಾಸದ ಕೊನೆಯ ಈ ಏಳು ದಿವಸ ಸರಯೂ ತನ್ನ ಸ್ವಾಮಿಯ ಆಶ್ರಯದಲ್ಲಿ ಇದ್ದು, ಬಳಿಕ ಕೊನೆತನಕ ನಿರಾಶ್ರಿತಳಾಗುವಳು. ಭಿಕ್ಷುಕಿಯಾಗಿ ಅಲೆಯುವಳು. ಭಾದ್ರಪದ ಮಾಸದಲ್ಲಿ ಮನೆಯಿಂದ ಬೆಕ್ಕ

ನಾಯಿಗಳನ್ನೂ ಹೊರಹೊರಡಿಸುವುದಿಲ್ಲ. ಹೊರಡಿಸಿದರೆ ಅಮಂಗಲವೆಂದು ತಿಳಿವಳಿಕೆ. ಆದುದರಿಂದ ಅವಳ ಬೇಡಿಕೆ ಸ್ವೀಕೃತವಾಗಿದೆ.

ಒಂದು ದಿನ ಅವಳು ತನ್ನ ಪತಿಯ ಕೈಹಿಡಿದು ಎಂದಳು- "ನನ್ನ ಹಣೆ ಬರಹದಲ್ಲಿದ್ದಂತೆ ಆಗಲಿ. ಇದಕ್ಕೋಸುಗ ನೀವು ಎಳ್ಳಷ್ಟೂ ದುಃಖಪಡ ಬೇಡಿರಿ. ನನ್ನಂತಹ ಹತಭಾಗ್ಯಳನ್ನು ಮನೆಗೆ ತಂದುಕೊಂಡು ಬಹಳ ಕಷ್ಟ ಪಟ್ಟಿದ್ದೀರಿ. ದಯವಿಟ್ಟು ಇನ್ನು ಹಾಗೆ ಮಾಡಬೇಡಿರಿ. ನನ್ನನ್ನು ಕಳುಹಿದ ಮೇಲೆ ಇನ್ನೊಂದು ಮದುವೆ ಮಾಡಿಕೊಂಡು ಸಂಸಾರಿಗಳಾಗಿರಿ; ನನ್ನ ಈ ಸುಂದರ ಮನೆತನವನ್ನು ಮಣ್ಣುಗೂಡಿಸಬೇಡಿರಿ."

ಚಂದ್ರನಾಥ ತಲೆಬಾಗಿಸಿ ನಿಂತುಕೊಂಡು ಸುಮ್ಮನಿದ್ದ. ಒಳಿತು ಕೆಡಕು ಉತ್ತರಗಳು ಅವನಿಗೆ ಹೊಳೆಯಲಿಲ್ಲ. ಸರಯೂ ಇತ್ತಿತ್ತಲಾಗಿ ಹೆಚ್ಚು ಧಿಟ್ಟೆಯಾಗಿದ್ದಾಳೆ. ಮೊದಲಿಗಿಂತಲೂ ಹೆಚ್ಚು ಮಾತನಾಡತೊಡಗಿ ದ್ದಾಳೆ. ಇಷ್ಟು ದಿವಸ ಆಕೆಯ ಮನಸಲ್ಲಿದ್ದ ಭಯ ಈಗ ಇಲ್ಲ. ಎರಡು ದಿನಗಳ ಹಿಂದೆ ಮುಖದ ಮೇಲೆ ಸೆರಗೆಳೆದುಕೊಂಡು ನಿಲ್ಲುತ್ತಿದ್ದಳು. ನಸು ಗಾಳಿಯು ತಾಕಿದರೆ ಹೆದರುತ್ತಿದ್ದಳು. ತನ್ನ ಸತ್ಯಕತೆಯು ಗೊತ್ತಾಗಬಾರ ದೆಂದೇನೊ! ಈಗ ಅವಳ ಭಯವೆಲ್ಲ ಓಡಿಹೋಗಿದೆ. ಆದುದರಿಂದಲೆ ನಿರ್ಭಯಳಾಗಿ ಮಾತನಾಡುತ್ತಾಳೆ. ಈ ಜೀವನದಲ್ಲಿ ಆಕೆಯ ಬಳಿಯಲ್ಲಿದ್ದು ದನ್ನೆಲ್ಲ - ಆಕೆಯ ಪತಿ, ಆಕೆಯ ಸರ್ವಸ್ವ - ಸಮಾಜದ ನ್ಯಾಯಾಲಯವು ಕಸಿದುಕೊಂಡು ಬಿಟ್ಟಿದೆ. ಈಗ ಅವಳು ಋಣಮುಕ್ತಳು. ಸರ್ವಸ್ವಹೀನ ಳಾದ ಸನ್ಯಾಸಿನಿ. ಆದುದರಿಂದಲೆ ಅವಳೀಗ ತನ್ನ ಒಡೆಯನೊಡನೆ ಸ್ವಚ್ಛಂದ ವಾಗಿ ಮಾತಾಡುತ್ತಿದ್ದಾಳೆ; ಮಿತ್ರನಂತೆ, ಗುರುವಿನಂತೆ ಸಲಹೆಯನ್ನೂ ಸಮ್ಮತಿಯನ್ನೂ ಕೊಟ್ಟು ತನ್ನ ಅಭಿಪ್ರಾಯವನ್ನು ತಿಳಿಸುತ್ತಿದ್ದಾಳೆ, ಎಂದು ಚಂದ್ರನಾಥನಿಗೆ ಎನಿಸದೆ ಇರಲಿಲ್ಲ. ಅಂದಿನ ರಾತ್ರಿ ಅವರು ಒಬ್ಬರು ಇನ್ನೊ ಬ್ಬರ ದೋಷಗಳನ್ನು ಕ್ಷಮಿಸಿಬಿಟ್ಟಿದ್ದಾರೆ. ಚಂದ್ರನಾಥ ಅವಳಿಗೆ ವಿಷಪಾನ ಮಾಡಬೇಕೆಂದು ಹೇಳಿದ್ದ. ಅವನ ಈ ಆತ್ಮಗ್ಲಾನಿಯೆ ಆಕೆಯ ಸರ್ವದೋಷ ಗಳನ್ನು ದಹಿಸಿ ಬಿಟ್ಟಿದ್ದಿತು.

ಮರುದಿವಸ ಮುಂಜಾನೆ ಹರಕಾಲಿ ತನ್ನ ಗಂಡನಿಂದ ಅಂಚೆಚೀಟಿ ಅಂಟಿಸಿದ ಕಾಗದದ ಮೇಲೆ ಅದೇನೋನೊ ಬರೆಯಿಸುತಿದ್ದಳು. ವ್ರಜ

ಕಿಶೋರರು "ಇದನ್ನು ಬರೆಯುವುದರಿಂದ ಏನು ಪ್ರಯೋಜನ?" ಎಂದು ಕೇಳಿದರು.

"ದೇವರು ನಿಮಗೆ ಬುದ್ಧಿ ಕೊಟ್ಟಿದ್ದರೆ ನೀವು ಹೀಗೆ ಕೇಳುತ್ತಿರಲಿಲ್ಲ. ನನ್ನ ಮಾತು ಮೊದಲೇ ಕೇಳಿದ್ದರೆ ಇಷ್ಟೆಲ್ಲಾ ಎಲ್ಲಿ ಆಗುತ್ತಿತ್ತು? ಇನ್ನು ಮೇಲೆ ಇದರಲ್ಲಿ ನೀವು ಬುದ್ಧಿ ಓಡಿಸುವುದು ಬೇಡ."

ಹರಕಾಲಿ ಹೇಳಿದ ಎಲ್ಲವನ್ನೂ ವ್ರಜಕಿಶೋರರು ಚಿಕ್ಕಮಕ್ಕಳಂತೆ ಬರೆಯುತ್ತ ಹೋದರು. ಬರೆಯುವುದು ಕೊನೆಗೊಂಡ ಮೇಲೆ ಆ ಕಾಗದವನ್ನು ಕೈಯಲ್ಲಿ ತೆಗೆದುಕೊಂಡು ಮೊದಲಿನಿಂದ ಕೊನೆಯವರೆಗೂ ಒಮ್ಮೆ ಓದಿ, ತಲೆಯಲ್ಲಾಡಿಸಿ "ಚೆನ್ನಾಗಿ ಬರೆದಿದ್ದೀರಿ" ಎಂದಳು.

ಪೆದ್ದ ವ್ರಜಕಿಶೋರರು ಸುಮ್ಮನೆ ಇದ್ದರು. ಮಧ್ಯಾಹ್ನ ಆ ಕಾಗದವನ್ನು ತೆಗೆದುಕೊಂಡು ಹರಕಾಲಿ ಸರಯೂನ ಬಳಿ ಬಂದು "ಸರಯೂ, ಈ ಕಾಗದದ ಮೇಲೆ ನಿನ್ನ ಹೆಸರು ಬರೆಯಮ್ಮಾ" ಎಂದಳು.

ಸರಯೂ ಕಾಗದ ಕೈಗೆ ತೆಗೆದುಕೊಂಡು "ಏಕೆ?" ಎಂದು ಕೇಳಿದಳು.

"ನಾನು ಹೇಳಿದಷ್ಟು ಮಾಡಬಾರದೆ?"

"ಇದರ ಮೇಲೆ ನನ್ನ ಹೆಸರು ಏಕೆ ಬರೆಯಬೇಕೆಂಬುದೂ ನನಗೆ ಗೊತ್ತಾಗಬಾರದೆ?"

ಹರಕಾಲಿಯು ಮೋರೆಯನ್ನು ಹಿಗ್ಗಿಸಿ "ಸರಯೂ, ಇದೆಲ್ಲವೂ ನಿನ್ನ ಕಲ್ಯಾಣಕ್ಕಾಗಿಯೆ. ನೀನು ಇಲ್ಲಿಂದ ಹೋದ ಮೇಲೆ ನೀನು ಎಲ್ಲಿರುವೆ ಹೇಗಿರುವೆ ಎಂದು ಯಾರೂ ಕೇಳುವುದಿಲ್ಲ. ಆದುದರಿಂದಲೆ ಸರಯೂ, ನೀನೆಲ್ಲಿದ್ದರೂ ಹೊಟ್ಟೆಯ ಸಲುವಾಗಿ ನಿನಗೆ ಪ್ರತಿ ತಿಂಗಳೂ ಐದು ರೂಪಾಯಿಗಳು ಸಿಕ್ಕುವವು, ಇದೇನು ಕೆಡಕೇ?"

ಸರಯೂ ತನ್ನ ಒಳಿತು ಕೆಡಕುಗಳನ್ನು ಬಲ್ಲಳು. ತನ್ನ ಪ್ರೀತಿ, ಹಿತ ಈ ಹಿತೈಷಿಣಿಯ ಹೃದಯದಲ್ಲಿ ಎಷ್ಟು ಇದೆಯೆಂಬುದೂ ಸರಯೂಗೆ ತಿಳಿಯದೆ ಇಲ್ಲ. ಆದರೆ ಅರಮನೆಯಂಥ ಮನೆಯೆ ನದಿಯಲ್ಲಿ ಬಿದ್ದು ಮುಳುಗುತ್ತಿರುವಾಗ ಬಾಗಿಲು ಇಟ್ಟಿಂಗಿಯನ್ನು ಉಳಿಸಿಕೊಳ್ಳುವುದಕ್ಕೆ ಯಾವನೂ ನದಿಯೊಂದಿಗೆ ಕಾದಾಡುವುದಿಲ್ಲ. ಸರಯೂ ಬಯಸಿದುದೂ ಇಷ್ಟೆ. ಆದರೂ ಅವಳು ಒಂದು

ಸಲ ಹರಕಾಲಿಯ ಮುಖದ ಕಡೆಗೆ ನೋಡಿದಳು. ಸರಯೂನ ಇದೇ ದೃಷ್ಟಿ ಹರಕಾಲಿಯ ಅಂತಃಕರಣಕ್ಕೆ ತಿರಸ್ಕಾರ, ಹೆದರಿಕೆ ಉಂಟುಮಾಡುತ್ತಿದ್ದುದು. ಇಂದೂ ಇದನ್ನು ಹರಕಾಲಿಯು ಸಹಿಸದಾದಳು. ಕೆಳಗೆ ನೋಡುತ್ತ "ಸರಯೂ" ಎಂದಳು.

"ಆಗಲಿ ಅತ್ತೆಮ್ಮ, ಬರೆಯುತ್ತೇನೆ" ಎಂದು ಸರಯೂ ಆ ಕಾಗದದ ಮೇಲೆ ಮುದ್ದುಮುದ್ದಾಗಿ ತನ್ನ ಹೆಸರು ಬರೆದಳು.

ಇಂದು ಆಶ್ವಿನ ದ್ವಿತೀಯಾ. ಸರಯೂ ಚಂದ್ರನಾಥನ ಮನೆಯನ್ನು ಬಿಡುವ ದಿನ. ಮಳೆ ಬೆಳಗಿನಿಂದ ಸುರಿಯುತ್ತಿದೆ. ಇದರಿಂದ ಸರಯೂ ಹೊರಡುವುದು ಎಲ್ಲಿ ನಿಲ್ಲುವುದೊ ಎಂದು ಹರಕಾಲಿಗೆ ಚಿಂತೆ.

ಇಂದು ಮುಂಜಾನೆ ಸರಯೂ ಮನೆಯಲ್ಲಿಯ ಪ್ರತಿಯೊಂದು ವಸ್ತುವನ್ನು ಓರಣವಾಗಿ ಇಡುತ್ತಿದ್ದಳು. ಬೆಲೆ ಬಾಳುವ ಬಟ್ಟೆಗಳನ್ನು ಒಂದೊಂದಾಗಿ ಕಪಾಟಿನಲ್ಲಿಟ್ಟು, ಆಭರಣಗಳನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿದಳು. ಬಳಿಕ ತನ್ನ ಗಾಡಿಯನ್ನು ತೆಗೆದುಕೊಂಡು ಬರುವುದಕ್ಕೆ ಆಳುಮಗನನ್ನು ಕಳುಹಿ ಭಗವಂತಿಯ ಎದೆಯ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮನೆಯನ್ನು ಬಿಡುವ ವೇಳೆಯು ಹತ್ತಿರ ಹತ್ತಿರ ಬಂದ ಹಾಗೆ ಅವಳ ವೇದನೆಯು ಇಮ್ಮಡಿಸುತ್ತ ನಡೆದಿದೆ. ಈ ಏಳು ದಿನಗಳನ್ನು ಕಳೆದಂತೆ ಇಂದಿನ ದಿನವನ್ನು ಕಳೆಯಲಾಗುವುದಿಲ್ಲವೆಂದು ಅವಳಿಗೆನಿಸುತ್ತದೆ. ಈ ಕೊನೆಯ ದಿವಸ ತನ್ನ ಧೈರ್ಯವು ವಿಶೀರ್ಣವಾಗಬಾರದೆಂದೂ ಹೊರಡುವ ಸಮಯದಲ್ಲಿ ತಾನೊಬ್ಬ ಭಿಕ್ಷುಕಿಯಂತೆ ಗೋಚರಿಸಬಾರದೆಂದೂ ಅವಳು ಬಯಸುತ್ತಿದ್ದಾಳೆ. ಇಂದಿನ ವರೆಗೆ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸಿ ಸಂರಕ್ಷಿಸಿದ ಆತ್ಮಗೌರವವನ್ನು ತ್ಯಜಿಸುವ ಪ್ರವೃತ್ತಿ ಅವಳಿಗಿಂದೂ ಉಂಟಾಗಲಿಲ್ಲ.

ಚಂದ್ರನಾಥ ಬಂದ ಕೂಡಲೆ ಕಣ್ಣೀರು ಒರಸಿಕೊಂಡು ಸರಯೂ ಎದ್ದು ನಿಂತಳು. "ಬನ್ನಿರಿ. ಇಂದು ನಾನು ಹೊರಡುವ ದಿವಸ" ಎಂದಳು.

ಆಗ ಚಂದ್ರನಾಥನ ಕಣ್ಣು ಒದ್ದೆಯಾಗಿದ್ದುವು. ಅವನು ಬೇರೊಂದು ಕಡೆ ಮುಖ ತಿರುಗಿಸಿಕೊಂಡು ನಿಂತ. ಅವನ ಬಳಿ ಸಾರಿ "ಇಗೊಳ್ಳಿ, ಈ ಬೀಗದ ಕೈಗಳನ್ನು. ಇನ್ನೊಂದು ಮದುವೆಯಾಗುವ ವರೆಗೆ ಇವನ್ನು ಇನ್ನಾರಿಗೂ ಕೊಡಬೇಡಿರಿ" ಎಂದಳು ಸರಯೂ.

ಚಂದ್ರನಾಥ ಬಿಗಿದು ಬರುವ ಸ್ವರದಿಂದ "ಎಲ್ಲಾದರೂ ಇಟ್ಟು ಬಿಡು" ಎಂದ.

ಕೂಡಲೆ ಸರಯೂ ಚಂದ್ರನಾಥನ ಗದ್ದವನ್ನು ಹಿಡಿದು ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡು ನಗುತ್ತ ಕೇಳಿದಳು—"ನೀವೂ ಅಳುತ್ತಿರುವಿರಾ ?"

ಈ ಮಾತು ತೀರ ಕಠೋರವಾದುದೆಂದು ಚಂದ್ರನಾಥನಿಗೆನಿಸಿತು. ನೇತ್ರಗಳಿಂದ ನೀರು ಒಂದೆ ಸವನೇ ಹರಿಯುತಿದ್ದಿತು. ಸರಯೂ ಕೂಡಲೆ ತನ್ನ ಸೆರಗಿನಿಂದ ಅವನ್ನು ಒರೆಸಿ ಆದರಪೂರ್ವಕವಾಗಿ "ನಾನು ಇದುವರೆಗೆ ಎಂದಿಗೂ ನಿಮ್ಮೊಡನೆ ನಗೆಯಾಡಿಲ್ಲ. ಈ ಹೊತ್ತು ಹೋಗುವಾಗ ಸ್ವಲ್ಪ ನಗೆಯಾಡಿದ್ದೇನೆ. ಕೋಪಿಸಕೊಳ್ಳಬೇಡಿರಿ. ಇದ್ದುದೆಲ್ಲವನ್ನು ಕಪಾಟಿನಲ್ಲಿಟ್ಟಿದ್ದೇನೆ. ನನ್ನ ಯಾವ ಸಾಮಾನುಗಳೂ ಕಳೆದುಹೋಗದಂತೆ ನೋಡಿಕೊಂಡಿರಿ" ಎಂದಳು.

ನಿರಾಭರಣಳಾದ ಸರಯೂನ ಕೈಯಲ್ಲಿ ಕಾಜಿನ ನಾಲ್ಕು ಬಳೆಗಳ ಹೊರತು ಯಾವ ಆಭರಣವೂ ಇಲ್ಲವೆಂಬುದನ್ನು ಚಂದ್ರನಾಥ ನೋಡಿದ. ಸರಯೂನ ಈ ಸ್ಥಿತಿಯಿಂದ ಅವನ ನೇತ್ರಗಳಲ್ಲಿ ಬಾಣ ಬಿಟ್ಟಂತಾಯಿತು. ಆದರೆ ಆತನೇನು ಮಾಡಬಲ್ಲ! ಈ ಹೊತ್ತು ಒಂದೆರಡು ಆಭರಣಗಳನ್ನು ಧರಿಸಿಕೊಂಡು ಹೋಗಲು ಹೇಳಿ ಆ ದೇವಿಯ ಅಪಮಾನ ಮಾಡಿಸಬೇಕೆ? ಸರಯೂ ತನ್ನ ಸೆರಗನ್ನು ಸರಿಪಡಿಸಿಕೊಂಡು ಆತನಿಗೆ ವಂದಿಸಿ ಆತನ ಚರಣ ಧೂಳಿಯನ್ನು ಹಣೆಯಲ್ಲಿರಿಸಿಕೊಂಡು "ನಾನು ಹೋಗುವೆನೆಂದು ನೀವು ದುಃಖಿಸಬೇಡಿರಿ; ನನ್ನನ್ನು ಮನೆಬಿಟ್ಟು ಹೊರಡಿಸುವುದರಲ್ಲಿ ನಿಮ್ಮ ಕೈವಾಡವಿಲ್ಲವೆಂಬುದನ್ನು ನಾನು ಬಲ್ಲೆ" ಎಂದಳು. ಈಗ ಚಂದ್ರನಾಥನಿಂದ ತಾಳಿಕೊಳ್ಳುವುದಾಗಲಿಲ್ಲ. ಅಲ್ಲಿಂದ ಎದ್ದವನೇ ಅದೆಲ್ಲಿಗೋ ಹೋಗಿಬಿಟ್ಟ.

ಹೊತ್ತು ಮುಳುಗುವುದಕ್ಕಿಂತ ಮೊದಲೆ ರೈಲುಗಾಡಿ ಹೊರಡುವುದು. ಸ್ಟೇಶನ್ನಿಗೆ ಹೋಗಬೇಕಾಗಿದೆ. ಮಳೆಯು ಸುರಿಯುತ್ತಿದೆ. ಬಹುದಿವಸಗಳಿಂದ ಮನೆಯ ಕೆಲಸ ಮಾಡುತ್ತಿದ್ದ ಮುದಿ ಆಳುಮಗ ಒಂದೆರಡು ಬಟ್ಟೆ ತೆಗೆದುಕೊಂಡು ಜಟ್ಟಿನವನ ಬಳಿ ಹೋಗಿ ಕುಳಿತ. ಆಗ ಅವನಿಗೆ ಸೀತಾದೇವಿಯ ನೆನಪಾಗಿ ಕಣ್ಣುಗಳು ನೀರುದುಂಬಿದುವು. ಅವನು ಕಣ್ಣೊರಿಸಿ

ಕೊಳ್ಳುತ್ತ ಮನಸ್ಸಿನಲ್ಲಿಯೆ ಎಂದುಕೊಂಡ—"ದೇವಾ, ನಾನು ಆಳು. ಆದ್ದರಿಂದಲೇ ನನಗೆ ಈ ದಂಡನೆ!''

ಸರಯೂ ಹರಕಾಲಿಯ ಮನದೊಳಗಿನ ಭಾವವನ್ನು ಅರಿತು ಹೊರಡುವಾಗ ಅವಳನ್ನು ಕರೆಯಿಸಿ ವಂದಿಸಿದಳು. ಆಕೆಯ ಪಾದಧೂಳಿಯನ್ನು ಮಸ್ತಕದಲ್ಲಿರಿಸಿಕೊಂಡು "ಅತ್ತೆಮ್ಮಾ, ನನ್ನ ಪೆಟ್ಟಿಗೆ ನೋಡಿಕೊಳ್ಳಿರಿ" ಎಂದಳು.

ಹರಕಾಲಿಗೆ ಸ್ವಲ್ಪ ದಿಗ್ಭ್ರಮೆಯಾಗಿ ''ಇರಲಿ ಬಿಡು'' ಎಂದಳು.

ಇಷ್ಟರಲ್ಲಿ ಪೆಟ್ಟಿಗೆಯ ಬಾಗಿಲು ತೆರೆದಿದ್ದಿತು; ಹರಕಾಲಿಯ ದೃಷ್ಟಿಯನ್ನು ಅದು ತನ್ನೆಡೆಗೆ ಸೆಳೆದುಕೊಂಡಿತು. ಅವಳಿಗೆ ಆಸೆಯನ್ನು ತಡೆಯುವದು ಬಿಗಿಯಾದ ಹೋರೆಯಾಗಿದ್ದಿತು. ಪೆಟ್ಟಿಗೆಯಲ್ಲಿ ಒಂದೆರಡು ಸಾಧಾರಣವಾದ ಸೀರೆ, ಒಂದೆರಡು ಪುಸ್ತಕ, ಕಾಗದದಲ್ಲಿ ಸುತ್ತಿದ ಎರಡು ಫೋಟೋ, ಮತ್ತೆ ಒಂದೆರಡು ಚಿಲ್ಲರೆ ಸಾಮಾನುಗಳಿದ್ದುದನ್ನು ಕುಡಿನೋಟದಿಂದಲೆ ಕಂಡುಕೊಂಡಳು. "ಸರಿ, ಇಷ್ಟೇ ಸಾಮಾನು" ಎಂದಳು ಸರಯೂ.

ಹರಕಾಲಿ ಮೆಲ್ಲನೆ ಅಲ್ಲಿಂದ ಸರಿದಳು.

ಹೊತ್ತು ಮುಳುಗುವ ಮೊದಲೆ ಸರಯೂ ಜಟ್ಕಿನಲ್ಲಿ ಕುಳಿತಳು. ಜಟ್ಕಿ ಹೊರಟಿತು. ಅದು ಅಂಗಳದಿಂದ ಹೊರಗೆ ಹೋಗುತ್ತಲೆ ಭರದಿಂದ ಓಡತೊಡಗಿತು. ಅಟ್ಟದ ಮೇಲಿನ ಕಿಟಕಿಯನ್ನು ತೆರೆದು ಮಣಿಶಂಕರರು ಇದೆಲ್ಲವನ್ನು ನೋಡುತ್ತಿದ್ದರು. ಅದೇಕೊ ಅವರಿಗೆ ಇಂದು ಇದು ಒಳಿತಾಗಲಿಲ್ಲವೆಂದೆನಿಸಿತು.

## ೧೧

ಮಣಿಶಂಕರರಿಗೆ ಇಡಿ ರಾತ್ರಿ ನಿದ್ರೆ ಬರಲಿಲ್ಲ. ಬೆಳಗಿನ ವರೆಗೂ ಅವರ ಕಿವಿಗಳಲ್ಲಿ ಜಟ್ಕಿನ ಗಂಭೀರ ಶಬ್ದವು ಗುಂಯ್ಗುಡುತಿದ್ದಿತು. ನಸುಕಿನಲ್ಲೆ ಎದ್ದು ಹೊರಗೆ ಬಂದರು. ಬಾಗಿಲಲ್ಲಿ ಒಬ್ಬ ದೀನವೇಷ ಧರಿಸಿದ ಮನುಷ್ಯ ಕುಳಿತು ತೂಕಡಿಸುವುದನ್ನು ನೋಡಿದರು. ಅವರು ಬಂದುದು ಗೊತ್ತಾಗುತ್ತಲೆ ಆತ ಎದ್ದು ನಿಂತು "ನಾನೊಬ್ಬ ದಾರಿಕಾರ'' ಎಂದ. ಮಣಿಶಂಕರರು

ಅಲ್ಲಿಂದ ಹೋಗತೊಡಗಿದೊಡನೆಯೆ ಅವರನ್ನು "ಮಣಿಶಂಕರರ ಮನೆಯು ಇದೇಯೇನು ?" ಎಂದು ಕೂಗಿ ಕೇಳಿದ.

"ಹೌದು" ಹೊರಳಿ ನೋಡಿ ಎಂದರು ಮಣಿಶಂಕರರು.

"ಅವರನ್ನು ಯಾವಾಗ ಕಾಣಬಹುದು, ಹೇಳಬಲ್ಲಿರಾ ?"

"ನಾನೇ ಮಣಿಶಂಕರ."

"ತಮ್ಮ ಕಡೆಗೇ ಬಂದಿದ್ದೇನೆ" ಎಂದು ನಮಸ್ಕಾರ ಮಾಡಿ ಹೇಳಿದ ದಾರಿಕಾರ.

ಅವನನ್ನು ಕಾಲಿನಿಂದ ನೆತ್ತಿಯ ವರೆಗೂ ನೋಡಿ "ನೀನು ಕಾಶಿಯಿಂದ ಬಂದಿರುವಿಯಾ ?" ಎಂದು ಕೇಳಿದರು. ಆದಕ್ಕವನು "ಹೌದು" ಎಂದು ಉತ್ತರವನ್ನಿತ್ತ.

"ಹರಿದಯಾಲರು ಕಳುಹಿದ್ದಾರೆಯೆ ?"

"ಹೌದು."

"ರೂಪಾಯಿಗಳಿಗಾಗಿ ಬಂದಿರುವೆಯಾ ?"

"ಹೌದು."

ಮಣಿಶಂಕರರು "ನನ್ನ ಬಳಿಗೇಕೆ ಬಂದೆ? ನಾನೇ ರೂಪಾಯಿ ಕೊಡುವವನೆಂದು ತಿಳಿದಿರುವೆಯೇನು ?" ಎಂದರು ನಸುನಗುತ್ತ.

"ಇಲ್ಲ. ರೂಪಾಯಿಗಳು ಸುಲಭವಾಗಿ ಸಿಕ್ಕುವ ದಾರಿಯನ್ನು ನೀವು ಹೇಳಿಕೊಡುವಿರೆಂದು ಹರಿದಯಾಲರು ನನಗೆ ಹೇಳಿದರು."

"ಒಳ್ಳೇದು ಹೇಳಿಕೊಡೋಣ ಬಾ. ಒಳಗೆ ಬಾ" ಎಂದು ಹುಬ್ಬು ಗಂಟಿಕ್ಕಿ ಕರೆದರು ಮಣಿಶಂಕರರು.

ಇಬ್ಬರೂ ಒಂದು ಕಿರುಮನೆಯನ್ನು ಪ್ರವೇಶಿಸಿ ಬಾಗಿಲು ಮುಚ್ಚಿ ಕೊಂಡು ಕುಳಿತರು. "ಹಾಗಾದರೆ ಎಲ್ಲ ಸಂಗತಿಯು ನಿಜವೆ ?"—ಮಣಿ ಶಂಕರರು ಕೇಳಿದರು.

"ಹೌದು ಎಲ್ಲವೂ ನಿಜ."

ಹೀಗೆಂದು ದಾರಿಕಾರ ಅವರ ಕೈಗೆ ಎಲ್ಲ ಪತ್ರಗಳನ್ನೂ ಕೊಟ್ಟ. ಮಣಿ ಶಂಕರರು ಅವನ್ನು ಮೊದಲಿನಿಂದ ಕೊನೆಯವರೆಗೂ ಓದಿಕೊಂಡು "ಇದರಲ್ಲಿ ಸರಯೂನದೇನು ತಪ್ಪು ?" ಎಂದು ಕೇಳಿದರು.

"ಇಲ್ಲ, ಏನೂ ಇಲ್ಲ. ಸರಯೂನ ದೋಷವೇನೂ ಇಲ್ಲ ಇದರಲ್ಲಿ. ಆದರೆ ತಾಯಿಯ ದೋಷದಿಂದ ಮಗಳೂ ದೂಷಿತಳಾದಳು."

''ಆದರೆ ಸ್ವಯಂ ದೋಷಿಗಳಲ್ಲದವರನ್ನು ವ್ಯರ್ಥವಾಗಿ ಸಂಕಟಕ್ಕೆ ಏಕೆ ಗುರಿಮಾಡುತ್ತೀರಿ ? "

''ಏನು ಮಾಡಲಿ ? ಬೇರೆ ಉಪಾಯವೇ ಇಲ್ಲ. ಹಣಕ್ಕಾಗಿ ಏನನ್ನೂ ಮಾಡಬೇಕಾಗುತ್ತದೆ.''

ಮಣಿಶಂಕರರು ಸ್ವಲ್ಪ ಹೊತ್ತು ಯೋಚಿಸಿ ''ನೋಡಪ್ಪಾ, ಈ ಕೆಟ್ಟ ಹೆಸರು ಹಬ್ಬಿತೆಂದರೆ ನನಗೂ ತುಂಬಾ ನಾಚಿಕೆಗೇಡು. ಚಂದ್ರನಾಥ ನನ್ನ ತಮ್ಮನ ಮಗ '' ಎಂದರು.

ರಾಖಾಲದಾಸ ತಲೆಯಲ್ಲಾಡಿಸಿ ದೃಢವಾದ ದನಿಯಿಂದ "ನಾನೇನು ಮಾಡಲಿ ? ಉಪಾಯವಿಲ್ಲ '' ಎಂದ.

''ನಿನ್ನ ವೇಷ ಭೂಷಣಗಳೇ ನಿನ್ನ ಸ್ಥಿತಿಗತಿಗಳನ್ನು ತಿಳಿಸುತ್ತವೆ. ನಾನೇ ರೂಪಾಯಿ ಕೊಟ್ಟುಬಿಟ್ಟರೆ ಹೇಗೆ ? ''

"ಇದು ಇನ್ನೂ ಅನುಕೂಲ. ಚಂದ್ರನಾಥನ ಹತ್ತಿರ ಹೋಗುವ ತೊಂದರೆ ಉಳಿಯಲಿಲ್ಲ."

"ರೂಪಾಯಿ ಸಿಕ್ಕ ಕೂಡಲೆ ಈ ಊರಿನಿಂದ ಹೊರಟು ಹೋಗುವೆಯಷ್ಟೆ ? ಮತ್ತು ಯಾರಿಗೂ ಈ ಸಂಗತಿ ಹೇಳುವುದಿಲ್ಲವಷ್ಟೆ ? "

''ಖಂಡಿತವಾಗಿ.''

"ಎಷ್ಟು ರೂಪಾಯಿ ಬೇಕು ? "

''ತೀರ ಕಡಿಮೆಯೆಂದರೆ ಎರಡು ಸಾವಿರ.''

ಮಣಿಶಂಕರರು ಹೊರಗೆ ಹೋಗಿ ತಮ್ಮ ಕರಣಿಕರಾದ ಲಕ್ಷ್ಮೀನಾರಾಯಣರನ್ನು ಕರೆದು ಅವರೊಡನೆ ಕೆಲವು ಮಾತುಗಳನ್ನಾಡಿದರು. ಆಮೇಲೆ ಒಳಗೆ ಹೋಗಿ ತಮ್ಮ ಪೆಟ್ಟಿಗೆ ತೆಗೆದು ಸಾವಿರದ ಎರಡು ನೋಟುಗಳೊಂದಿಗೆ ಹೊರಗೆ ಬಂದು ರಾಖಾಲದಾಸನ ಕೈಯಲ್ಲಿಡುತ್ತ ''ಇಲ್ಲಿಂದ ಹತ್ತು ಗಾವುದ ದೂರದಲ್ಲಿ ಸರಕಾರದ ಬೊಕ್ಕಸ ಇದೆ. ಈ ನೋಟು ಅಲ್ಲಿಗೇ ಹೋಗಿ ಮುರಿಸಿಕೊ. ಮತ್ತೆಲ್ಲಿಯೂ ಈ ನೋಟುಗಳಿಗೆ ಚಿಡಿ ರೂಪಾಯಿ ಸಿಕ್ಕುವುದಿಲ್ಲ. ಇನ್ನುಮೇಲೆ ತಿರಿಗಿ ಈ ಕಡೆಗೆ ಬರಬೇಡ. ನಿನ್ನನ್ನು ನೋಡಿ ನನಗೆ

ಸಂತೋಷವಾಗಿಲ್ಲ. ಪುನಃ ಇಲ್ಲಿಗೆ ಹಿಂತಿರುಗಿದರೆ ಜೀವಂತ ಉಳಿಯಲಾರೆ ಕಂಡೆಯಾ ; ನಾನು ನಿನಗೆ ಮೊದಲೇ ಹೇಳಿ ಬಿಡುತ್ತೇನೆ" ಎಂದರು.

ರಾಖಾಲದಾಸ ಒತ್ತರದಿಂದ ನಡೆಯುತ್ತ ಪಟ್ಟಣ ಸೇರಿದ. ಆಗ ಮಧ್ಯಾಹ್ನವಾಗಿದ್ದಿತು. ಕಚೇರಿ ಮುಚ್ಚಿದ್ದರಿಂದ ಅವನ ಕೆಲಸವಾಗಲಿಲ್ಲ. ಮರುದಿನ ಸರಿಯಾದ ಸಮಯಕ್ಕೆ ಹೋಗಿ ಎರಡೂ ನೋಟುಗಳನ್ನು ಕೊಟ್ಟು "ನನಗೆ ಇವನ್ನು ತೆಗೆದುಕೊಂಡು ಬಿಡಿ ರೂಪಾಯಿ ಕೊಡಿರಿ" ಎಂದ.

ಬೊಕ್ಕಸಿಗರು ಎರಡೂ ನೋಟುಗಳನ್ನು ಮೇಲೆ ಕೆಳಗೆ ನೋಡಿ ರಾಖಾಲದಾಸನಿಗೆ "ಕೂತುಕೋ" ಎಂದು ಹೊರಗೆ ಹೋದರು. ಆಮೇಲೆ ಒಬ್ಬ ಜಮಾದಾರ ಇಬ್ಬರು ಪೋಲೀಸರನ್ನು ಕರೆದುಕೊಂಡು ಒಳಗೆ ಬಂದರು. ಅವರಿಗೆ ರಾಖಾಲದಾಸನನ್ನು ತೋರಿಸಿ "ಈ ನೋಟು ಕಳವಿನವು. ಜಮೀನ ದಾರ ಮಣಿಶಂಕರರ ಆಳುಮಗ ಇಲ್ಲಿಗೆ ಬಂದು ಈ ಮನುಷ್ಯ ನಿನ್ನೆ ಬೆಳಿಗ್ಗೆ ಭಿಕ್ಷೆ ಬೇಡಲಿಕ್ಕೆ ಬಂದಾಗ ಮನೆಯಲ್ಲಿ ನುಗ್ಗಿ ಈ ನೋಟುಗಳನ್ನು ಕದ್ದು ಕೊಂಡು ಬಂದಿದ್ದಾನೆ ಎಂದು ಹೇಳುತ್ತಾನೆ. ನೋಟುಗಳ ನಂಬರೂ ಹೊಂದುತ್ತವೆ ನೋಡಿರಿ" ಎಂದು ಪೋಲೀಸರಿಗೆ ಹೇಳಿದರು.

"ಸ್ವತಃ ಮಣಿಶಂಕರರೇ ಈ ನೋಟುಗಳನ್ನು ಕೊಟ್ಟಿದ್ದಾರೆ" ಎಂದ ರಾಖಾಲದಾಸ.

"ಇದನ್ನು ಕೋರ್ಟಿನಲ್ಲಿ ಹೇಳು ಹೋಗು."

ರಾಖಾಲದಾಸನನ್ನು ಕೋರ್ಟಿನಲ್ಲಿ ನಿಲ್ಲಿಸಿದರು. ಆಗ ಅವನು "ಈ ನೋಟು ಕೊಟ್ಟವರನ್ನೇ ಕೇಳಿದರೆ ಎಲ್ಲವೂ ಸ್ಪಷ್ಟವಾಗುವುದು" ಎಂದ.

ಸಾಕ್ಷಿ ಕೊಡಲಿಕ್ಕೆ ಕೋರ್ಟಿಗೆ ಮಣಿಶಂಕರರೂ ಬಂದಿದ್ದರು. ಅವರು ತಮ್ಮ ಸಾಕ್ಷಿಯಲ್ಲಿ ಈ ಮನುಷ್ಯನನ್ನು ನಾನು ನನ್ನ ಜನ್ಮದಲ್ಲಿಯೆ ನೋಡಿಲ್ಲ ವೆಂದೂ, ಈ ನೋಟುಗಳು ನನ್ನ ಸಂದುಕದಲ್ಲಿಯೆ ಇದ್ದವು, ಅವನ್ನು ನಾನು ಯಾರಿಗೂ ಕೊಟ್ಟಿಲ್ಲವೆಂದೂ ಹೇಳಿದರು.

ರಾಖಾಲದಾಸ ತನ್ನನ್ನು ಉಳಿಸಿಕೊಳ್ಳುವುದಕ್ಕೆ ಅದೆಷ್ಟೊ ಮಾತು ಗಳನ್ನು ಹೇಳಬೇಕೆನ್ನುತ್ತಿದ್ದ ; ಅವನ ಎಷ್ಟೋ ಮಾತುಗಳನ್ನು ಕೋರ್ಟಿ ನವರು ಬರೆದುಕೊಂಡರು ; ಎಷ್ಟೋ ಮಾತುಗಳನ್ನು ಮಣಿಶಂಕರರ ವಕೀಲರು

ಹಾರಿಸಿಬಿಟ್ಟರು. ತಾತ್ಪರ್ಯವಿಷ್ಟೆ: ರಾಖಾಲದಾಸನ ಮಾತಿನಲ್ಲಿ ಯಾರೂ ವಿಶ್ವಾಸವಿಡಲಿಲ್ಲ. ನ್ಯಾಯಾಧೀಶರು ಅವನಿಗೆ ಎರಡು ವರ್ಷ ಸಶ್ರಮ ಶಿಕ್ಷೆ ವಿಧಿಸಿ ಸೆರೆಮನೆಗೆ ಕಳಿಸಿಬಿಟ್ಟರು.

೧೨

ಹರಿದಯಾಲರ ಮನೆಯಲ್ಲಿ ಈಗ ಹಳೆಯ ದಾಸಿಯೂ ಇಲ್ಲ. ಅಡುಗೆ ಮಾಡುವ ಬ್ರಾಹ್ಮಣಿಯಂತೂ ಇರಲೇ ಇಲ್ಲ. ಅದೆಲ್ಲಿಗೆ ಹೋಗಿದ್ದಳೊ! ಸರಯೂ ಕಾಲಿಟ್ಟಾಗ ಆ ಮನೆಯಲ್ಲಿ ಯಾರೊಬ್ಬರೂ ಇರಲಿಲ್ಲ. ಇಡಿ ಮನೆಯು ಬರಿದಾಗಿದ್ದಿತು. ಚಂದ್ರನಾಥನ ಕರಣಿಕರು "ಅಮ್ಮಾ ನಾನಿನ್ನು ಹೋಗಲಾ?" ಎಂದು ಕೇಳಿದರು.

ಸರಯೂ ಅವರಿಗೆ ನಮಸ್ಕರಿಸಿ ತಲೆಬಾಗಿಸಿಕೊಂಡು ನಿಂತಳು. ಅವರು ಅಳುತ್ತಲೆ ಹೊರಟು ಹೋದರು. ಹರಿದಯಾಲರು ಬರುವ ವರೆಗೆ ಅವರು ನಿಲ್ಲಲಿಲ್ಲ. ಆ ಇಚ್ಛೆಯೆ—ಅವರಿಗಿರಲಿಲ್ಲ.

ಸಂಜೆಗೆ ಅಲೆದಾಡಿ ಹರಿದಯಾಲರು ಮನೆಗೆ ಬಂದರು. ಸರಯೂ ಪಡಸಾಲೆಯಲ್ಲಿ ಕುಳಿತುದನ್ನು ನೋಡಿ "ಯಾರು?" ಎಂದರು.

ಸರಯೂ ನಮಸ್ಕರಿಸಿ ಎದ್ದು ನಿಂತು "ನಾನು" ಎಂದಳು.

ಹರಿದಯಾಲರು ಅತ್ಯಂತ ಆಶ್ಚರ್ಯದಿಂದ ಲಕ್ಷ್ಯಪೂರ್ವಕವಾಗಿ ನೋಡಿದರು. ಸರಯೂನ ಮೈಮೇಲೆ ಒಂದೂ ಒಡವೆ ಇರಲಿಲ್ಲ. ಅವಳು ಉಟ್ಟ ಸೀರೆ, ಹೊದ್ದುಕೊಂಡ ಉಪ್ಪರಣಿ ಸಾಮಾನ್ಯ ತರಹದ್ದು. ಅವಳೊಡನೆ ತೊತ್ತೂ ಇಲ್ಲ, ಆಳುಮಗನೂ ಇಲ್ಲ. ಬಳಿಯಲ್ಲಿ ಚಿಕ್ಕದೊಂದು ಪೆಟ್ಟಿಗೆ ಮಾತ್ರ ಬಿದ್ದಿದ್ದಿತು. ಅವರು ಎಲ್ಲವನ್ನೂ ಕೇಳಿ ತಿಳಿದುಕೊಂಡರು. ಆಮೇಲೆ ನಗೆಯಾಡುತ್ತ "ಯೋಚಿಸಿದಂತೆಯೆ ಆಯಿತು. ಮನೆಯಿಂದ ಹೊರಗೆ ಹಾಕಿದರೆ?" ಎಂದರು.

ಸರಯೂ ಪಿಟ್ಟೆನ್ನಲಿಲ್ಲ. ಯಾವ ಉತ್ತರವನ್ನೂ ಕೊಡಲಿಲ್ಲ.

ಹರಿದಯಾಲರು ನಿಷ್ಠುರತೆಯಿಂದ "ಇಲ್ಲಿ ಇರಲು ನಿನಗೆ ಸ್ಥಳ ದೊರೆಯಲಾರದು. ಒಮ್ಮೆ ಆಶ್ರಯಕೊಟ್ಟು ಚೆನ್ನಾಗಿ ಪೆಟ್ಟು ತಿಂದೆ. ಸಾಕು, ಇನ್ನು ಆಶ್ರಯ ಕೊಡಲಾರೆ" ಎಂದರು.

"ಅಮ್ಮ ಎಲ್ಲಿ ?" ಎಂದು ತಲೆಬಾಗಿಸಿಕೊಂಡೇ ಕೇಳಿದಳು ಸರಯೂ.

"ಓಡಿ ಹೋದಳು. ನನ್ನನ್ನು ಸಂಕಟಕ್ಕೆ ಗುರಿಮಾಡಿ ಜಾರಿದಳು. ಆಕೆಯ ಸ್ವಭಾವದಂತೆಯೆ ಮಾಡಿದಳು."

ಹರಿದಯಾಲರು ಕೋಪದಿಂದ ಉರಿಯಲಾರಂಭಿಸಿದರು. ಅವರು ತಿರಿಗಿ ವ್ಯಂಗ್ಯವಾಗಿ "ಎಲ್ಲಿದ್ದಾಳೊ ಗೊತ್ತಿಲ್ಲ. ಎಲ್ಲಾದರೂ ಮೋಜು ಮಾಡುತ್ತಿರಬಹುದು" ಎಂದರು.

ಸರಯೂ ಅಲ್ಲಿಯೆ ಕುಳಿತುಬಿಟ್ಟಳು. ಅವಳು ಇಲ್ಲಿಗೆ ತಾಯಿಯ ಬಳಿಗೆಂದೇ ಓಡಿ ಬಂದದ್ದು !

"ನನ್ನ ಮನೆಯಲ್ಲಿ ನಿನಗೆ ಇಂಬುಕೊಟ್ಟು ಜಾತಿಯನ್ನು ಕೆಡಿಸಿ ಕೊಳ್ಳುವ ಇಚ್ಛೆ ನನಗಿಲ್ಲ. ಇಷ್ಟು ಆದರ ಪ್ರೀತಿಯಿಂದ ನಿನ್ನನ್ನು ಕರೆದು ಕೊಂಡು ಹೋದವನು ನಿನಗೆ ಇರಲು ಒಂದು ಗುಡಿಸಲನ್ನು ಕೂಡ ಕಟ್ಟಿಸಿ ಕೊಡಲಿಲ್ಲ. ತಿರಿಗಿ ನಮ್ಮಲ್ಲಿಗೆ ಕಳಿಸಲು ಕಾರಣವೇನು ? ಇಲ್ಲಿಂದ ಹೊರಟು ಹೋಗು."

ಸರಯೂ ಅಳತೊಡಗಿದಳು. ರೋದಿಸುತ್ತ "ತಾತಯ್ಯಾ, ಅಮ್ಮ ಕೂಡ ಇಲ್ಲ, ಇನ್ನು ನಾನೆಲ್ಲಿಗೆ ಹೋಗಲಿ ?" ಎಂದಳು.

ಈಗ ಹರಿದಯಾಲರಲ್ಲಿ ಮಾಯೆ—ಮಮತೆಯೆಂಬುದು ಇರಲಿಲ್ಲ. "ಕಾಶಿಯಂಥ ದೊಡ್ಡ ಪಟ್ಟಣದಲ್ಲಿ ನಿನ್ನಂಥವರಿಗೆ ಸ್ಥಳದ ಕೊರತೆ ಇರ ಲಾರದು. ನಿನಗೆ ಅನುಕೂಲವೆನಿಸಿದಲ್ಲಿ ಒಂದು ಸ್ಥಳ ಹುಡುಕಿಕೊ" ಎಂದರು ಅವರು. ಪಿತ್ತವು ತಲೆಗೇರಿದ್ದರಿಂದಲೆ ಹರಿದಯಾಲರು ಆಗ ಈರೀತಿ ಮಾತ ನಾಡಿದರು.

ತನ್ನ ಸ್ವಾಮಿಯೆ ತನಗೆ ಮನೆಯಲ್ಲಿ ಸ್ಥಳಕೊಡದೆ ಹೋದಮೇಲೆ ಹರಿದಯಾಲರು ಹೇಗೆ ಕೊಟ್ಟಾರು ಎಂಬ ಮಾತು ಸರಯೂಗೆ ತಿಳಿಯದೆ ಇರಲಿಲ್ಲ. ಆದುದರಿಂದ ಅವಳು ಹರಿದಯಾಲರಿಗೆ ಯಾವ ಬಗೆಯ ದೋಷ ವನ್ನೂ ಕೊಡಬಯಸಲಿಲ್ಲ. ಆದರೆ ಮಾಡುವುದೇನು ? ಅವಳಿಗೆ ನಿಲ್ಲಲಿಕ್ಕೂ ಸ್ಥಾನವಿಲ್ಲ. ಪತಿಯ ಮನೆಗೆ ನಾಲ್ಕು ದಿನಗಳ ಅತಿಥಿಯಂತೆ ಹೋಗಿದ್ದಳು.

ಈಗ ಅಲ್ಲಿಂದ ಅಪ್ಪಣೆ ಪಡೆದುಕೊಂಡು ಬಂದುಬಿಟ್ಟಿದ್ದಾಳೆ. ಈಗ ಅವನು ತನ್ನ ಆದರಣೀಯ ಅತಿಥಿ ಎಲ್ಲಿಗೆ ಹೋದಳೆಂದು ಕಣ್ಣು ಹೊರಳಿಸಿ ಕೂಡ ನೋಡಲಿಕ್ಕಿಲ್ಲ.

ಈಗ ಅವಳಿಗೆ ತೀರ ವ್ಯಥೆಯಾಗುತಿದ್ದಿತು. ಮನದಲ್ಲಿ ಕಿಂಚಿತ್ತಾದರೂ ನೆಮ್ಮದಿಯಿಲ್ಲ. ನಯನಗಳಿಂದ ನೀರು ಹಾಗೆಯೆ ಧಾರಾಕಾರವಾಗಿ ಹರಿಯುತ್ತಿದ್ದಿತು. ಈ ಹದಿನಾರು ವರ್ಷಗಳಲ್ಲಿ ಆಕೆಯ ಎಲ್ಲ ಶೋಕ, ಎಲ್ಲ ಆಕಾಂಕ್ಷೆ ಪೂರ್ತಿಯಾಗಿ ಹೋದವು. ತಾಯಿಯಿಲ್ಲ; ಪತಿಯೂ ಪರಿತ್ಯಜಿಸಿಬಿಟ್ಟ ; ನಿಲ್ಲಲು ಸ್ಥಳವಿಲ್ಲದಿದ್ದರೂ ಕಲಂಕ, ಲಜ್ಜೆ, ವಿಪುಲ ರೂಪ ಯೌವನ ಮಾತ್ರ ಇದೆ. ಇವುಗಳಿಂದ ಜೀವಿಸಬಹುದು ; ಆದರೆ ಸರಯೂ ಜೀವಿಸುವುದಿಲ್ಲ. ತನ್ನ ಆಯುಸ್ಸೆಷ್ಟು, ಇನ್ನೆಷ್ಟು ದಿವಸ ತಾನು ಜೀವಿಸಿರಬೇಕು ಎಂಬುದೊಂದೆ ಯೋಚನೆ ಸರಯೂಗೆ. ಅದೆಷ್ಟೇ ದಿವಸಗಳಿರಲಿ, ಆದರೆ ಇಂದು ಸರಯೂ ಹೊಸ ಜನ್ಮವನ್ನು ಪಡೆದಿದ್ದಾಳೆ. ಚಿಕ್ಕಂದಿನಲ್ಲಿ ಅವಳು ಸಾಕಷ್ಟು ಕಷ್ಟ ಸಹಿಸಿದ್ದಾಳೆ. ಆದರೆ ಈ ಬಗೆಯ ಅಪಮಾನ, ಕಲಂಕ ಎಂದಿಗೂ ಸಹಿಸಿರಲಿಲ್ಲ.

ಹರಿದಯಾಲರು ಗಟ್ಟಿಯಾಗಿಯೆ ಮಾತಾಡುತ್ತಲಿದ್ದರು. ಈಗ ಅವರು ಅದಕ್ಕೂ ಗಟ್ಟಿಯಾಗಿ ಕೂಗಿದರು—"ಇನ್ನೂ ನೀನಿಲ್ಲೇಕೆ ಕುಳಿತಿರುವೆ ?"

ಸರಯೂ ಅತ್ಯಂತ ವ್ಯಾಕುಲದ ದನಿಯಲ್ಲಿ "ಎಲ್ಲಿಗೆ ಹೋಗಲಿ ?" ಎಂದು ಕೇಳಿದಳು.

"ನನಗೇನು ಗೊತ್ತು ?"

"ತಾತಯ್ಯಾ, ಇವೊತ್ತೊಂದು ರಾತ್ರಿ" - ಕಂಠ ಬಿಗಿದು ಬಂದು ಸರಯೂನ ಬಾಯಿಂದ ಶಬ್ದಗಳೆ ಹೊರಡಲಿಲ್ಲ.

"ಊಹುಂ, ಆಗದು. ಒಂದು ಕ್ಷಣವೂ ಇಲ್ಲಿ ಇರಗೊಡಲಾರೆ."

ಸರಯೂ ಎದ್ದು ನಿಂತಳು. ಈಗ ಅವಳಲ್ಲಿ ಕೊಂಚ ಸಾಹಸ ಬಂದಿತು. ಸಾವಿರಾರು ಅಪರಾಧಗಳನ್ನು ಮಾಡಿದ್ದರೂ ಬೇಡಬೇಕಾದಲ್ಲಿ ನಾನು ಭಿಕ್ಷೆ ಬೇಡಲಿಲ್ಲವೆಂದ ಮೇಲೆ ಅನ್ಯರಿಗೇಕೆ ಬೇಡುವುದು ಎಂದು ಯೋಚಿಸಿದಳು. ಎಲ್ಲಿ ಸ್ಥಳ ಸಿಕ್ಕದಿದ್ದರೂ ಗಂಗೆಮಾತ್ರ ಒಣಗಿಹೋಗಿಲ್ಲವಲ್ಲ ? ಗಂಗೆ ಸಮಾ

ಜಕ್ಕೆ ಹೆದರುವುದೂ ಇಲ್ಲ ; ಆಕೆಯ ಜಾತಿಯೂ ಹೋಗುವುದಿಲ್ಲ. ಇಂತಹ ದುಃಖದಿಂದ ಬಳಲುವ ಅಬಲೆಗೆ ತನ್ನ ಹೃದಯದಲ್ಲಿ ಅವಳು ಇಂಬು ಕೊಟ್ಟೇ ಕೊಡುವಳು. ಇನ್ನೆಲ್ಲಿ ಆಶ್ರಯ ಸಿಕ್ಕದಿದ್ದರೂ ಅಲ್ಲಿ ಸಿಕ್ಕೇ ಸಿಗುವುದು.

ಸರಯೂ ಅಲ್ಲಿಂದ ಹೊರಡಲೆತ್ನಿಸಿದಳು. ಆದರೆ ಕಾಲು ಮೇಲಕ್ಕೇಳ ಲಿಲ್ಲ. ಅಲ್ಲಿಯೆ ಕುಳಿತುಬಿಟ್ಟಳು.

ತಮ್ಮ ಜನ್ಮದಲ್ಲಿಯೆ ಇಂತಹ ಸಂಕಟ ಒದಗಲಿಲ್ಲವೆಂದು ಹರಿದಯಾ ಲರು ಮನದಲ್ಲಿಯೆ ಯೋಚಿಸುತಿದ್ದರು. ಅವರ ಕಂಠವು ಒಣಗಿದ್ದಿತು. ಮಾತ ನಾಡಲು ಬರದಂತಾಗಬಹುದೆಂಬ ಭೀತಿಯೂ ಉಂಟಾಗಿದ್ದಿತು. ಆದ್ದರಿಂದ ಅವರು ಗಟ್ಟಿಯಾಗಿ ಚೀರಿದರು. – ''ಅಪಮಾನವಾಗುವ ವರೆಗೂ ನೀನು ಈ ಸ್ಥಳ ಬಿಟ್ಟು ಏಳುವಂತೆ ತೋರಲಿಲ್ಲ. ಹೊರಟು ಹೋಗು ಇಲ್ಲಿಂದ.''

ಇಷ್ಟರಲ್ಲಿ ಹರಿದಯಾಲರನ್ನು ಯಾರೊ ಹೊರಗಿನಿಂದ ಕೂಗಿದರು. ಕೈಲಾಸಬಾಬುಗಳೊ ಏನೊ ? ಹೌದು. ಕೈಲಾಸಬಾಬುಗಳು ಒಂದು ಕೈಯಲ್ಲಿ ಚದುರಂಗದ ಬುಟ್ಟಿ ಇನ್ನೊಂದು ಕೈಯಲ್ಲಿ ಗುಡುಗುಡಿ ಹಿಡಿದುಕೊಂಡು ಒಳಗೇ ಬಂದುಬಿಟ್ಟರು. ಅದೆಷ್ಟೊ ಹೊತ್ತಿನ ತನಕ ಹೊರಗೆ ನಿಂತುಕೊಂಡು ಹರಿದಯಾಲರು ಬೆದರಿಸುತ್ತಿರುವುದನ್ನು ಕೇಳುತ್ತಿದ್ದರು. ಆದುದರಿಂದಲೆ ಅವರ ಕೈಯಲ್ಲಿ ಗುಡುಗುಡಿ, ಚದುರಂಗದ ಬುಟ್ಟಿಯಿದ್ದರೂ ಮುಖದ ಮೇಲೆ ದಿನದ ಮುಗುಳುನಗೆ ಇರಲಿಲ್ಲ. ಅವರು ನೇರವಾಗಿ ಸರಯೂನ ಬಳಿಗೆ ಹೋಗಿ ನಿಂತುಕೊಂಡು ಮೃದುನುಡಿಯಲ್ಲಿ ಕೇಳಿದರು—''ಏನು ಮಗೂ, ಸರಯೂ, ಯಾವಾಗ ಬಂದೆಯಮ್ಮಾ ? ''

ಸರಯೂ ಕೈಲಾಸಬಾಬುಗಳನ್ನು ಗುರುತಿಸಿ ನಮಸ್ಕರಿಸಿದಳು.

ಕೈಲಾಸಬಾಬುಗಳು ಆಶೀರ್ವಾದಗಳನ್ನು ಕೊಡುತ್ತ ''ಬಾ ಅಮ್ಮ, ಹೋಗೋಣ. ನೀನು ನನ್ನ ಮನೆಗೆ ಬರದೆ ಇಲ್ಲಿಗೇಕೆ ಬಂದೆಯಮ್ಮಾ ?'' ಎಂದರು.

ಬಳಿಕ ಗುಡುಗುಡಿ ಕೆಳಗಿಟ್ಟು ಸರಯೂನ ಪೆಟ್ಟಿಗೆ ಎತ್ತಿಕೊಂಡು ''ನಡೆ ಮಗು, ಹೋಗೋಣ ; ಹೊತ್ತು ಮುಳುಗುತ್ತ ಬಂತು'' ಎಂದರು. ಕರೆದು

ಕೊಂಡು ಹೋಗಲು ಬಂದವರಂತೆ ಈ ಮಾತುಗಳನ್ನಾಡಿದರು ಕೈಲಾಸಬಾಬು ಗಳು. ಆದರೆ ಸರಯೂಗೆ ಮಾತ್ರ ದಿಕ್ಕು ತೋಚದಂತಾಯಿತು. ಆದುದರಿಂದ ಅವಳು ಅಲ್ಲಿಯೆ ಕುಳಿತುಬಿಟ್ಟಳು.

"ಏನು ಮಗು, ನಿನ್ನ ಈ ಮುದುಕ ತಾತಯ್ಯನ ಮನೆಗೆ ಬರುವುದಕ್ಕೆ ಏಕೆ ನಾಚಬೇಕಮ್ಮ? ನನ್ನ ಮನೆಯಲ್ಲಿ ಯಾರೂ ನಿನಗೆ ಅವಮಾನದ ಮಾತ ನ್ನಾಡರು. ನಾವಿಬ್ಬರೂ – ಅಜ್ಜ ಮೊಮ್ಮಗಳು – ಸುಖವಾಗಿ ಇರೋಣ. ಏಳು ತಡಮಾಡಬೇಡ ಏಳು ಮಗೂ."

ಆದರೂ ಸರಯೂನಿಂದ ಏಳುವುದಾಗಲಿಲ್ಲ.

"ಕೈಲಾಸಬಾಬೂ, ನೀವಿದನ್ನೇನು ಮಾಡುತ್ತಿದ್ದೀರಿ?" ಎಂದು ಹರಿ ದಯಾಲರು ಕೂಗಿ ಕೇಳಿದರು.

"ಏನೂ ಇಲ್ಲ" ಎಂದು ಕೈಲಾಸಬಾಬುಗಳು ಸರಯೂನ ತೀರ ಹತ್ತಿರ ಹೋದರು. ಕೈಹಿಡಿದು ಎಬ್ಬಿಸಲಿಕ್ಕೇನೊ! ಅವರು ಅತ್ಯಂತ ಕನಿಕರ ದಿಂದ "ಏಳು ಮಗೂ, ಏಳು ನಡೆ. ಇಲ್ಲಿ ಕುಳಿತು ಬಿರುನುಡಿಗಳನ್ನೇಕೆ ಕೇಳುತ್ತಿರುವೆ?" ಎಂದರು.

ಸರಯೂ ಎದ್ದು ನಿಂತುದನ್ನು ನೋಡಿ "ಕೈಲಾಸಬಾಬೂ, ಇವಳನ್ನು ನೀವು ಮನೆಗೆ ಕರೆದುಕೊಂಡು ಹೋಗುತ್ತೀರಾ?" ಎಂದು ಕೇಳಿದರು ಹರಿ ದಯಾಲರು.

"ಇಲ್ಲ, ಇವಳನ್ನು ಬೀದಿಯಲ್ಲಿ ಬಿಸಾಡಿಬಿಡಲು ಕರೆದೊಯ್ಯುತ್ತಿದ್ದೇನೆ."

ಈ ವ್ಯಂಗ್ಯೋಕ್ತಿಗಳನ್ನು ಕೇಳಿ ಹರಿದಯಾಲರು ಸಿಟ್ಟಿನಿಂದ "ಕೈಲಾಸ ಬಾಬೂ, ನೀವು ಹೀಗೆ ಮಾಡುತ್ತಿರುವುದು ಸರಿಯಲ್ಲ. ಮುಂದೇನಾದೀತೆಂಬು ದನ್ನು ಸ್ವಲ್ಪ ಯೋಚಿಸಿ ನೋಡಿರಿ!" ಎಂದರು.

ಕೈಲಾಸಬಾಬು ಈ ಮಾತುಗಳಿಗೆ ಉತ್ತರವೀಯದೇ "ಸರಯೂ, ನಡೆಯಮ್ಮಾ, ಬೇಗ ನಡೆ. ಇಲ್ಲದೆ ಹೋದರೆ ಮತ್ತೆ ಏನೇನು ಹೇಳುವರೊ ಇವರು!" ಎಂದರು.

ಸರಯೂ ಬಾಗಿಲ ಹೊರಗೆ ಬಂದಳು. ಕೈಲಾಸಬಾಬುಗಳು ಆಕೆಯ ಪೆಟ್ಟಿಗೆ ತೆಗೆದುಕೊಂಡು ಹಿಂದಿನಿಂದ ಹೊರಟರು.

"ಕೈಲಾಸಬಾಬೂ, ನೀವೂ ನಿಮ್ಮ ಜಾತಿಯನ್ನು ಬಿಟ್ಟುಬಿಡುವಿರಾ?" ಎಂದು ಹರಿದಯಾಲರು ಹಿಂದುಗಡೆಯಿಂದ ಕೇಳಿದರು.

ಮುಖ ತಿರುಗಿಸದೆ "ಹುಂ. ನಿಮಗೆ ಬೇಕಾಗಿದ್ದರೆ, ಅದನ್ನು ನೀವು ಉಳಿಸಿಕೊಳ್ಳಬಹುದು" ಎಂದರು ಕೈಲಾಸಬಾಬುಗಳು.

"ಹಾಗಾದರೆ, ಇನ್ನೊತ್ತಿನಿಂದ ನಮ್ಮ ಊಟ-ಉಡಿಗೆಯ ಆಟ, ನೋಟದ ವ್ಯವಹಾರ ಎಲ್ಲವೂ ಬಂದಾಯಿತು" ಎಂದರು ತಿರಿಗಿ ಹರಿದಯಾಲರು.

ಈಗ ಕೈಲಾಸಬಾಬುಗಳು ಹೊರಳಿ ನಿಂತು "ನಾನೇನು ಯಾರ ಮನೆಗಾದರೂ ಕರೆಯದೆ ಹೋಳಿಗೆ ತುಪ್ಪ ಹೊಡೆಯಲು ಹೋಗಿದ್ದೆನೇನು?" ಎಂದರು.

"ಇಲ್ಲ ಹೋಗಿರಲಿಕ್ಕಿಲ್ಲ, ಆದರೂ ಎಚ್ಚರಕೊಡುತ್ತೇನೆ."

ಕೈಲಾಸಬಾಬುಗಳ ಹುಬ್ಬು ಗಂಟಿಕ್ಕಿದವು. ಇಷ್ಟು ದಿವಸ ಅವರು ಕಾಶಿಯಲ್ಲಿದ್ದರೂ, ಅವರು ಕೋಪಿಸಿಕೊಂಡುದನ್ನು ಯಾರೂ ನೋಡಿರಲಿಲ್ಲ. ಆದರೆ ಇಂದು ಮಾತ್ರ ಅವರ ಕೋಪವು ಕೆರಳಿತು. "ಏನು ಹರಿದಯಾಲರೆ, ಯಜಮಾನರನ್ನು ಸಂತೋಷಪಡಿಸಿ ಉಪಜೀವನವನ್ನು ಸಾಗಿಸಲಿಕ್ಕೆ ನಾನೇನು ಕಾಶಿಯ ಪುರೋಹಿತನೆ? ನೀವು ನನಗೆ ಹೆದರಿಸುತ್ತಿರುವುದೇಕೆ? ನನಗೆ ಒಳಿತೆನಿಸಿದುದನ್ನೆ ಇಂದಿನವರೆಗೂ ಮಾಡುತ್ತ ಬಂದಿದ್ದೇನೆ. ಮುಂದೆಯೂ ಹಾಗೆಯೆ. ಇದಕ್ಕಾಗಿ ನೀವು ಚಿಂತೆಮಾಡುವ ಕಾರಣವಾವುದೂ ಇಲ್ಲ."

ಹರಿದಯಾಲರು ಲಜ್ಜಿತರಾಗಿ "ನಾನು ನಿಮ್ಮ ಕಲ್ಯಾಣ—" ಎನ್ನುವಷ್ಟರಲ್ಲಿಯೆ ಕೈಲಾಸಬಾಬುಗಳು "ಇರಲಿ, ಇರಲಿ, ಸಾಕು ಸುಮ್ಮನಿರಿ. ಐವತ್ತೈದು ವರ್ಷಗಳನ್ನೆ ನಿಮ್ಮ ಸಲಹೆ ಕೇಳದೆ ಕಳೆದಿರುವೆನೆಂದ ಮೇಲೆ ಇನ್ನೊಂದು ಐದಾರು ವರ್ಷಗಳನ್ನು ಕಳೆಯಲಾರೆನೆ? ನೀವು ಮನೆಗೆ ಹೋಗಿರಿನ್ನು ಎಂದರು. ಹರಿದಯಾಲರು ಹಿಂದಿರುಗಿದರು.

ಕೈಲಾಸಬಾಬುಗಳು ಮನೆಗೆ ಬಂದು ಪೆಟ್ಟಿಗೆ ಇಳಿಸಿ ಸಹಜವಾಗಿ "ಮಗೂ, ಈ ಮನೆಮಾರು ಎಲ್ಲವೂ ನಿನ್ನದೆ. ಇದಕ್ಕೂ ಹೆಚ್ಚಿಗೆ ನಿನಗೆ ನಾನೇನು ಹೇಳಲಿ? ಈ ಮನೆತನದ ಕಾರ್ಯವನ್ನೆಲ್ಲ ಸಾಗಿಸಿಕೊಂಡು ಹೋಗು. ಮತ್ತು ಈ ತಾತಯ್ಯನ ಕಡೆಗೂ ಕೊಂಚ ಲಕ್ಷ್ಯವಿರಲಿ, ಎಂದರೆ ಆಯಿತು" ಎಂದರು.

ಕೈಲಾಸಬಾಬುಗಳು ಇದಕ್ಕೂ ಹೆಚ್ಚಿಗೆ ಹೇಳುವುದು ಇದ್ದಿತೊ ಇಲ್ಲವೊ ನಮಗೆ ಗೊತ್ತಿಲ್ಲ ; ಆದರೆ ಸರಯೂ ಕಣ್ಣೀರು ಒರೆಸಿಕೊಳ್ಳುತ್ತ ತಾನೇನೂ ಹೇಳಬೇಕಾಗಿಲ್ಲವೆಂದು ಸುಮ್ಮನಾಗಿ ಬಿಟ್ಟಳು. ಅಂತೂ ಸರಯೂನಿಗೆ ಆಶ್ರಯ ಸಿಕ್ಕಿತು.

೧೩

ಇಡೀ ರಾತ್ರಿ ಎಚ್ಚೆತ್ತಿದ್ದ ಚಂದ್ರನಾಥನಿಗೆ ಶರತ್ಕಾಲದ ಮುಂಜಾವಿನ ತಂಗಾಳಿ ಮೃದುಮಧುರವಾಗಿ ಕಿರುಮನೆಯಲ್ಲಿ ಸುಳಿದಾಡಿದ ಮೇಲೆ ನಿದ್ರೆ ಬರುತ್ತಿದ್ದಿತು. ಸೂರ್ಯನ ಬಿಸಿಬಿಸಿಯಾದ ಕಿರಣಗಳು ಕಿಟಕಿಯೊಳಗಿಂದ ತೂರಿಬಂದು ಅವನ ಮುಖದ ಮೇಲೆ ಬಿದ್ದ ಬಳಿಕ ಎಚ್ಚರಾಗುತ್ತಿದ್ದಿತು. ನಿದ್ರೆಯ ಆವೇಗವು ಮಾತ್ರ ಕಡಮೆಯಾಗುತ್ತಿರಲಿಲ್ಲ. ಆ ಆವೇಗ ಆತನ ಪ್ರತಿಯೊಂದು ಅಣುಅಣುವಿನಲ್ಲಿ ನಾಡಿನಾಡಿಯಲ್ಲಿ ಇರುತ್ತಿದ್ದಿತು. ಆದರೂ ಮನಸ್ಸು ಗಟ್ಟಿಮಾಡಿ ಎದ್ದು ಹೊರಗೆ ಬರುತ್ತಿದ್ದ. ಇಡೀ ದಿನವೂ ಆವನಿಗೆ ಕೆಲಸ ಬೊಗಸೆಗಳಿಲ್ಲ. ಯಾವ ತರದ ಸುಖಸಂತೋಷವೂ ಇಲ್ಲ, ಉತ್ಸಾಹ ವಿಲ್ಲ. ಬಹುಶಃ ಕಷ್ಟದುಃಖಗಳೂ ಇಲ್ಲ. ಸುಖೇಚ್ಛೆಯನ್ನಂತೂ ಬಿಟ್ಟೇ ಬಿಟ್ಟಿದ್ದಾನೆ. ಅವನ ದಿನಗಳು ಒಂದೊಂದಾಗಿ – ಬತ್ತಿಹೋದ ನದಿಯಲ್ಲಿ ಭಾರುವನ್ನು ಹೇರಿಕೊಂಡ ದೋಣಿಯು ಅತಿ ಮಂದವಾಗಿ ಮುಂದೆ ಸಾಗಿ ಹೋಗವಂತೆ – ಕಳೆದುವು. ತನ್ನ ಸುಖದ ಸೂರ್ಯನನ್ನು ಜೀವನದ ಮಧ್ಯಾಹ್ನದಲ್ಲಿಯೆ ದುಃಖದ ಕಾರ್ಮೋಡಗಳು ಮುತ್ತಿರುವವೆಂದೂ, ಒಂದಿಲ್ಲೊಂದು ದಿನ ಈ ಮೋಡಗಳ ಮರೆಯಲ್ಲಿಯೆ ಮಾಯವಾಗಬೇಕಾಗುವುದೆಂದೂ, ಇನ್ನೆಂದಿಗೂ ಸುಖದ ಸೂರ್ಯನ ಸಂದರ್ಶನವು ತನಗಾಗದೆಂದೂ ಚಂದ್ರನಾಥನು ಚೆನ್ನಾಗಿ ಅರಿತುಕೊಂಡಿದ್ದಾನೆ. ಅವನ ಆ ಶಾಂತ-ನಿರ್ಜನ ಕಿರುಮನೆಯಲ್ಲಿ ನಿರಾಶೆಯ ದಟ್ಟವಾದ ಕರಿನೆರಳು ದಿನದಿನಕ್ಕೆ ಕಗ್ಗತ್ತಲಾಗುತ್ತ ನಡೆದಿದೆ. ಚಂದ್ರನಾಥ ಕತ್ತಲಲ್ಲೆ ಕುಳಿತು ಆಲಸ್ಯದಿಂದ ಮುಚ್ಚುತ್ತಿರುವ ದೃಷ್ಟಿಯಿಂದ ಎದುರಿನಲ್ಲಿದ್ದುದನ್ನು ನೋಡುತ್ತ ದಿನಗಳನ್ನು ಮುಂದೂಡತೊಡಗಿದ್ದಾನೆ.

ಇದೇ ಮಾರ್ಗಶೀರ್ಷದಲ್ಲಿ ಎರಡನೆಯ ಮದುವೆ ಮಾಡಿಕೊಳ್ಳಲು ಚಂದ್ರನಾಥನಿಗೆ ಹರಕಾಲಿ ಹೇಳುತ್ತಿದ್ದಳು. ಆದರೆ ಅವನು ಸುಮ್ಮನಿರುತ್ತಿದ್ದ. ಅವನ ಮೌನ ಸಮ್ಮತಿಯ ಲಕ್ಷಣವೊ ಅಸಮ್ಮತಿಯ ಲಕ್ಷಣವೊ ಎಂಬ ಬಗೆಗೆ ಅವಳು ತನ್ನ ಗಂಡನೊಡನೆ ವಾದಿಸುತ್ತಿದ್ದಳು. ಮಣಿಶಂಕರರನ್ನು ಯಾರಾದರೂ ಕೇಳಿದರೆ ಚಂದ್ರನಾಥನನ್ನು ವಿಚಾರಿಸದೆ ಯಾವುದನ್ನೂ ನಿಶ್ಚಿತವಾಗಿ ಹೇಳಲಾಗುವುದಿಲ್ಲವೆಂದು ಹೇಳಿಬಿಡುತ್ತಿದ್ದರು.

ಈ ಸಲ ಕಾರ್ತಿಕ ಮಾಸದಲ್ಲಿಯೆ ದುರ್ಗಾಪೂಜೆ ಬಂದಿದೆ. ಮಣಿಶಂಕರರ ಅಂಗಳದಲ್ಲಿ ಓಲಗವು ಬೆಳಗಿನಿಂದ ಮನೆಗೆ ಬರುವವರಿಗೂ ಹಳ್ಳಿಯವರಿಗೂ ಆನಂದೋತ್ಸವ ಸೂಚನೆಯನ್ನೀಯುತ್ತಿದೆ. ಚಂದ್ರನಾಥನ ನಿದ್ದೆಯೂ ಹಾರಿಹೋಗಿದೆ. ಓಲಗದಲ್ಲಿ ಹೊರಡುವ ಬಗೆಬಗೆಯ ಸ್ವರಗಳನ್ನು ಕಣ್ಣುಗಳನ್ನು ತಿಕ್ಕುತ್ತ ಮಲಗಿದ್ದ ಹಾಗೆಯೆ ಕೇಳುತ್ತಿದ್ದಾನೆ. ಒಂದು ಸ್ವರವೂ ಅವನಿಗೆ ಆನಂದವನ್ನುಂಟು ಮಾಡಲೊಲ್ಲದು ; ಆದರೆ ಆತನ ಹೃದಯಾಕಾಶದಲ್ಲಿ ವಟ್ಟವಾದ ನೀಲಮೇಘವನ್ನು ತಂದು ತುಂಬುತ್ತಿದ್ದಿತು. ಇನ್ನು ತಾನು ಅಲ್ಲಿರಕೂಡದೆಂದು ಅವನಿಗೆ ಒಮ್ಮೆಲೇ ತೋರಿತು. ಆಗ ಒಬ್ಬ ಆಳುಮಗನನ್ನು ಕರೆದು "ನನ್ನ ಸಾಮಾನುಗಳನ್ನೆಲ್ಲ ಕಟ್ಟು, ಇಂದು ಅಲ್ಹಾಬಾದಿಗೆ ಹೋಗಬೇಕು" ಎಂದು ಹೇಳಿದ.

ಈ ಮಾತು ಕೇಳಿ ಹರಕಾಲಿ ಓಡಿಬಂದಳು. ವ್ರಜಕಿಶೋರರೂ ಬಂದು ಚಂದ್ರನಾಥನಿಗೆ ತಿಳಿಹೇಳಲಾರಂಭಿಸಿದರು. ಇಂದು ಷಷ್ಠಿಯಾದುದರಿಂದ ಎಲ್ಲಿಗೂ ಪಯಣ ಬೆಳೆಯಿಸಕೂಡದೆಂದು ಮಣಿಶಂಕರರೂ ಹೇಳಿದರು. ಆದರೆ ಚಂದ್ರನಾಥ ಯಾರ ಮಾತನ್ನೂ ಆಲಿಸಲಿಲ್ಲ.

ಮಧ್ಯಾಹ್ನ ಹರಿಬಾಲೆ ಬಂದಳು. ಸರಯೂ ಹೋದಮೇಲೆ ಇಂದಿನವರೆಗೆ ಅವಳು ಬಂದಿರಲಿಲ್ಲ. ಚಂದ್ರನಾಥ ಅವಳನ್ನು ನೋಡಿ "ಏನಜ್ಜಿ? ಇಂದು ಅದೇನು ಅಕಸ್ಮಾತ್ ಬಂದೆ ?" ಎಂದ.

ಈ ಪ್ರಶ್ನೆಗೆ ಅವಳು ಉತ್ತರಕೊಡದೆ "ಇವೊತ್ತು ಊರಿಗೆ ಹೊರಟಿರುವೆಯೇನು ?" ಎಂದು ಕೇಳಿದಳು.

ಚಂದ್ರನಾಥ "ಹೌದು" ಎಂದ.

"ಪ್ರಯಾಣ ಪಶ್ಚಿಮದ ಕಡೆಗೊ ?"

"ಹೌದು."

"ಅಥವಾ ಬೇರೆ ಕಡೆಗೊ ?" ಎಂದು ಕೋಮಲವಾದ ದನಿಯಿಂದ ಕೇಳಿದಳು ಹರಿಬಾಲೆ.

ಆಕೆಯ ಮಾತಿನ ಅರ್ಥವಾಯಿತು ಅವನಿಗೆ. ''ಇಲ್ಲ" ಎಂದು ಸ್ವಲ್ಪ ಹೊತ್ತು ಅನ್ಯಮನಸ್ಕನಾಗಿ ಅತ್ತಿತ್ತ ಅಲೆದಾಡಿದ.

ಹರಿಬಾಲೆ ಅದೇನೊ ಕೇಳಲಿಕ್ಕೆ ಬಂದಿದ್ದಳು. ಆದರೆ ಕೇಳಲಿಕ್ಕೆ ನಾಚಿಕೆಯಾಗುತ್ತಿದ್ದಿತು, ಸಾಹಸವೂ ಆಗುತ್ತಿರಲಿಲ್ಲ. ಆದರೂ ಸ್ವಲ್ಪಹೊತ್ತು ಸುಮ್ಮನಿದ್ದು, ಧೈರ್ಯ ತಂದುಕೊಂಡು ''ಏನಪ್ಪಾ, ನೀನು ಆಕೆಯ ವ್ಯವಸ್ಥೆ ಮಾಡಲಿಲ್ಲವೆ ?'' ಎಂದಳು.

ಹರಿಬಾಲೆ ಬಂದಾಗಿನಿಂದ ಅವರಿಬ್ಬರ ಮನಸ್ಸಿನಲ್ಲಿಯೂ ಸರಯೂ ಬಂದಿದ್ದಳು. ಇಬ್ಬರೂ ಆಕೆಯ ವಿಚಾರವನ್ನೆ ಮಾಡುತ್ತಿದ್ದರು. ಆದುದರಿಂದ ಈ ಸಾಧಾರಣ ಮಾತಿನಿಂದಲೆ ಅವರಿಬ್ಬರ ಕಣ್ಣಿನಲ್ಲಿ ನೀರು ತುಂಬಿ ಬಂತು. ಚಂದ್ರನಾಥ ಅವನ್ನು ತಡೆಯುತ್ತ ''ಇನ್ನೇನು ಮಾಡಲಿ ?" ಎಂದ.

"ಕಾಶಿಯಲ್ಲಿ ಅವಳು ಇರುವುದೆಲ್ಲಿ ?''

"ತನ್ನ ತಾಯಿಯ ಬಳಿಯಲ್ಲಿಯೆ ಇರಬಹುದು.''

"ಇರಬಹುದು. ಆದರೆ — —"

ಚಂದ್ರನಾಥ ಅವಳ ಕಡೆಗೆ ನೋಡುತ್ತ " 'ಆದರೆ' ಎಂದರೆ ಏನು ?"

ಅವಳು ಚಂದ್ರನಾಥನ ಕಡೆಗೆ ನೋಡುತ್ತ ಎಂದಳು—"ಚಂದ್ರನಾಥ, ಕೋಪಿಸಿಕೊಳ್ಳಬೇಡ— ''

ಚಂದ್ರನಾಥ ಅವಳ ಕಡೆಗೆ ಸುಮ್ಮನೆ ನೋಡುತ್ತ ನಿಂತ.

ಹರಿಬಾಲೆ ಅದೇ ಪ್ರಕಾರದ ಕೋಮಲ ಸ್ವರದಿಂದ ವಿನಯ-ಪೂರ್ವಕ ವಾಗಿ ''ಅವಳಿಗೆ ಒಂದಿಷ್ಟು ಹಣವನ್ನೇನಾದರೂ ಕಳಿಸುತ್ತೀರು. ಈಗೇನೊ ಅವಳು ಒಬ್ಬಾಕೆ. ಆದರೆ ಇನ್ನು ನಾಲ್ಕು ದಿನಗಳ ಮೇಲೆ—" ಎಂದಳು.

ಚಂದ್ರನಾಥನಿಗೆ ಈ ಮಾತಿನ ಅರ್ಥವಾದರೂ, ಅರ್ಥವಾಗದವನಂತೆ ನಟಿಸಿದ. "ನಾಲ್ಕು ದಿನಗಳಾದ ಬಳಿಕೇನು ?" ಎಂದು ಪ್ರಶ್ನಿಸಿದ.

ಹರಿಬಾಲೆ ಚಂದ್ರನಾಥನ ಎದುರಿಗೇ ಎರಡು ದೊಡ್ಡ ಕಂಬನಿಗಳನ್ನೊರಸಿ ಕೊಳ್ಳುತ್ತ "ಆಕೆಯ ಹೊಟ್ಟೆಯಲ್ಲಿದ್ದುದು ಹೆಣ್ಣೇ ಆಗಲಿ, ಗಂಡೇ ಆಗಲಿ, ಅದು ಬದುಕಿ ಉಳಿಯಲಿ. ಆಮೇಲೆ—" ಎಂದಳು.

ಚಂದ್ರನಾಥನ ಮೈ ಜುಂಮೆಂದಿತು. ಅವನು ಅವಸರದ ದನಿಯಲ್ಲಿ "ಅಜ್ಜಿ, ಈ ಹೊತ್ತು ಷಷ್ಠಿಯಲ್ಲವೇ ?" ಎಂದ.

"ಹೌದು."

"ಹಾಗಾದರೆ ಈ ಹೊತ್ತು—"

"ಹೋಗುವುದಿಲ್ಲವೆ ?"

"ಅದೇ ಯೋಚನೆ."

"ಸರಿ, ಹಾಗೆಯೆ ಮಾಡು. ಪೂಜೆ—ಉತ್ಸವ ಮುಗಿಸಿಕೊಂಡ ಬಳಿಕ ಬೇಕಾದಲ್ಲಿಗೆ ಹೋಗು. ಈಗ ೩-೪ ದಿನ ಮನೆಯಲ್ಲಿಯೆ ಇರು."

ಚಂದ್ರನಾಥ ಏನನ್ನು ಯೋಚಿಸಿ ಈ ಮಾತಿಗೆ ಒಪ್ಪಿದನೊ !

ವಿಜಯದಶಮಿಯು ಕಳೆದುಹೋಯಿತು. ಒಂದು ದಿನ ಚಂದ್ರನಾಥ ತನ್ನ ಕರಣಿಕರನ್ನು ಕರೆದು "ಏನಪ್ಪಾ, ನೀವು ಆಕೆಯನ್ನು ಕಾಶಿಯಲ್ಲಿ ಬಿಟ್ಟು ಬರುವಾಗ ಹರಿದಯಾಲರಿಗೆ ಏನಾದರೂ ಹೇಳಿ ಬಂದಿರಾ ?" ಎಂದು ಕೇಳಿದ.

"ಅವರ ಭೆಟ್ಟಿಯೆ ಆಗಲಿಲ್ಲ."

ಚಂದ್ರನಾಥ ಸ್ವಲ್ಪ ಅಂಜಿದವನಾಗಿ "ಭೆಟ್ಟಿಯಾಗಲಿಲ್ಲ ? ಹಾಗಾದರೆ ಆಕೆಯನ್ನು ಯಾರ ಬಳಿ ಬಿಟ್ಟುಬಂದಿರಿ ? ಆಕೆಯ ತಾಯಿ ಸಿಕ್ಕಿದ್ದರಷ್ಟೆ ?" ಎಂದು ಕೇಳಿದ.

"ಇಲ್ಲ. ಆಗ ಮನೆಯಲ್ಲಿ ಯಾರೂ ಇರಲೇ ಇಲ್ಲ."

"ಯಾರೂ ಇರಲಿಲ್ಲ ? ಮನೆಯಲ್ಲಿ ಯಾರಾದರೂ ಇರುವರೊ ಇಲ್ಲವೊ ಎಂಬುದನ್ನು ತಿಳಿದುಕೊಂಡಿರೊ ಇಲ್ಲವೊ ? ಹರಿದಯಾಲರು ಆ ಮನೆ ಬಿಟ್ಟು ಇನ್ನೊಂದು ಮನೆಗೆ ಹೋಗಿರಬಹುದು."

"ಇದನ್ನು ತಿಳಿದುಕೊಂಡಿದ್ದೆ. ಹರಿದಯಾಲರು ಇದೇ ಮನೆಯಲ್ಲಿರು ತ್ತಾರೆ."

ಚಂದ್ರನಾಥ ತಣ್ಣಗಿನದೊಂದು ಉಸಿರನ್ನು ಬಿಟ್ಟ. ಸ್ವಲ್ಪ ಸಮಯ

ಸುಮ್ಮನಿದ್ದು "ಇದುವರೆಗೆ ಎಷ್ಟು ರೂಪಾಯಿ ಕಳುಹಿಸಿದ್ದೀರಿ?" ಎಂದು ಕೇಳಿದ.

"ನಾನು ರೂಪಾಯಿ ಗೀಪಾಯಿ ಏನೂ ಕಳುಹಿಸಿಲ್ಲ."

ಚಂದ್ರನಾಥನಿಗೆ ಆಶ್ಚರ್ಯವಾಯಿತು. ಹೊಟ್ಟೆಯಲ್ಲಿ ಕಸಿವಿಸಿಯಾಯಿತು. ಮುಖವು ಕಂದಿತು. ಅವನು ಆತುರನಾಗಿ ಕೇಳಿದ—"ಏನೂ ಕಳಿಸಲಿಲ್ಲವೆ? ಏಕೆ?"

ಕರಣಿಕರಿಗೆ ನಾಚಿಕೆಯಾಯಿತು. "ಮಣಿಶಂಕರರು ತಿಂಗಳಿಗೆ ಐದು ರೂಪಾಯಿ ಕಳುಹಿದರೆ ಸಾಕೆಂದು ಹೇಳಿದ್ದರು" ಎಂದರು.

ಈ ಉತ್ತರವನ್ನು ಕೇಳಿದ ಕೂಡಲೆ ಚಂದ್ರನಾಥನ ಶರೀರದಲ್ಲಿ ಬೆಂಕಿ ಹೊತ್ತಿಸಿದಂತಾಯಿತು. ಕೋಪವು ಎಲ್ಲೆಯನ್ನು ಮೀರಿತು. "ತಿಂಗಳಿಗೆ ಐದು ರೂಪಾಯಿ ಸಾಕೇ? ರೂಪಾಯಿಗಳೇನು ಮಣಿಶಂಕರರವೆ? ನೀವು ಇನ್ನು ಮುಂದೆ ಪ್ರತಿ ತಿಂಗಳು ೫೦೦ ರೂಪಾಯಿ ಕಾಶಿಯ ವಿಳಾಸಕ್ಕೆ ಅವಳಿಗೆ ಕಳುಹಿಸುತ್ತಿರಿ" ಎಂದು ಆಜ್ಞೆಯನ್ನಿತ್ತ ಚಂದ್ರನಾಥ.

"ಆಗಬಹುದು" ಎಂದು ದಂಗು ಬಡೆದವರಾಗಿ ಕರಣಿಕರು ಹೊರಟು ಹೋದರು.

ಹರಕಾಲಿಗೆ ಈ ಸಂಗತಿ ಗೊತ್ತಾದ ಕೂಡಲೆ ಆಕೆ ಹುಟ್ಟುಗಂಟೆಕ್ಕಿ "ಅವನಿಗೆ ಹುಚ್ಚು ಹಿಡಿದಿದೆ" ಎಂದು ಗಟ್ಟಿಯಾಗಿ ನಕ್ಕಳು. ಆ ಮುದುಕ ಕರಣಿಕರು ಈ ನಗೆಯ ಲಹರಿಯನ್ನು ಆಲಿಸಿದರು. ಇದರ ಅರ್ಥವೂ ಅವರಿಗಾಯಿತು. ಹರಕಾಲಿಯು ಅವರನ್ನು "ಎಷ್ಟು ರೂಪಾಯಿ ಕಳುಹಲಿಕ್ಕೆ ಹೇಳಿದ್ದಾನೆ?" ಎಂದು ಕೇಳಿದಳು.

"ತಿಂಗಳಿಗೆ ೫೦೦ ರೂಪಾಯಿ."

ಮತ್ತೆ ಅವಳು ವ್ಯಂಗ್ಯ ನಗು ನಕ್ಕಳು. ಅದನ್ನು ಕೇಳಿ ಕರಣಿಕರಿಗೆ ಬಹಳ ಖೇದವೆನಿಸಿತು. ಅಷ್ಟೊತ್ತು ನಕ್ಕ ಮೇಲೆ ಹರಕಾಲಿ ಗಂಭೀರಳಾಗಿ ಹೇಳಿದಳು—"ನಮ್ಮ ಹುಡುಗನಿಗೆ ಸಿಟ್ಟುಬಂದಿತೆಂದರೆ ಏನೂ ತಿಳಿಯುವುದಿಲ್ಲ. ಆ ಅಭಾಗಿನಿಯ ಭಾಗ್ಯವೆ ಹೀಗಿದೆ. ನಾನು ತಿಂಗಳಿಗೆ ೫ ರೂಪಾಯಿ ಕಳುಹಲಿಕ್ಕೆ ಹೇಳಿದ್ದೆ. ಆದುದರಿಂದಲೆ ಸಿಟ್ಟಿಗೆದ್ದಿದ್ದಾನೆ! ಆದಕ್ಕಾಗಿಯೆ ನಿಮಗೆ ೫೦೦ ರೂಪಾಯಿ ಕಳುಹಲಿಕ್ಕೆಹೇಳಿದ್ದಾನೆ! ಏನಪ್ಪಾ,

ನಿಮಗೆ ತಿಳಿಯಿತೆ? ಚಂದ್ರನಾಥನು ಅವಳಿಗೆ ಒಂದು ಕಾಸೂ ಕಳುಹ ಬಯಸುವುದಿಲ್ಲ.''

ಕರಣಿಕರಿಗೆ ಮೊದಲು ಈ ಮಾತು ಸರಿಯಾಗಿ ತಿಳಿಯಲಿಲ್ಲ. ಯೋಚಿಸಿ ನೋಡಿದ ಹಾಗೆ ಹರಕಾಲಿಯ ಮಾತೇ ನಿಜವೆಂದು ಅವರಿಗೆ ತೋರಲಾರಂಭಿಸಿತು. ಮನೆಯಿಂದ ಹೊರಗೆ ಹಾಕಿದವಳಿಗೆ ಇಷ್ಟು ರೂಪಾಯಿಗಳನ್ನು ಯಾರು ಮನಃಪೂರ್ವಕವಾಗಿ ಕಳುಹಬಲ್ಲರು?

ಅದೆಷ್ಟೋ ಯೋಚಿಸಿದ ಬಳಿಕ "ತಾವೆಷ್ಟು ಹೇಳುತ್ತೀರೊ ಅಷ್ಟೇ ಕಳುಹಿಸುತ್ತೇನೆ" ಎಂದರು ಕರಣಿಕರು.

''ಸರಿ, ನಾನೇನು ಹೇಳಲಿ? ಈ ಸಣ್ಣ ಮಾತೂ ನಿಮಗೆ ತಿಳಿಯದೆ?''

"ಸರಿ, ಹಾಗೆಯೇ ಆಗಲಿ.'' ಎಂದರು ಅವರು ಸ್ವಲ್ಪ ಮುಂಕನಂತಾಗಿ.

"ಜೇವ. ನೀವು ಆಕೆಗೆ ಪ್ರತಿ ತಿಂಗಳೂ ತಪ್ಪದೆ ೫ ರೂಪಾಯಿ ಕಳುಹಿಸಿರಿ. ಚಂದ್ರನಾಥ ಕೊಡದಿದ್ದರೆ ನನ್ನ ಲೆಕ್ಕದಿಂದ ಕಳಿಸಿರಿ.''

ಹರಕಾಲಿಗೆ ಪ್ರತಿ ತಿಂಗಳು ಮೇಲ್ವೆಚ್ಚಗಾಗಿ ೫೦ ರೂಪಾಯಿಗಳು ಸಿಕ್ಕುತ್ತಿದ್ದವು.

ಕರಣಿಕರು ಹೋಗುವಾಗ ''ಆಗಬಹುದು. ಕಳುಹಿಸುತ್ತೇನೆ" ಎಂದರು.

ಚಂದ್ರನಾಥ ಈಗ ಮನೆಯಲ್ಲಿಲ್ಲ, ಅಲ್ಹಾಬಾದಿಗೆ ಹೋಗಿದ್ದಾನೆ. ಚಂದ್ರನಾಥನಿಗೆ ಪತ್ರ ಬರೆದು ಕೇಳಿಕೊಳ್ಳಬೇಕೆಂದು ಕರಣಿಕರು ಮೊದಲು ಯೋಚಿಸಿದರು. ಆದರೆ ಇಂಥ ಅಸಂಭವ ಮಾತಿಗಾಗಿ ಪತ್ರವ್ಯವಹಾರ ಮಾಡಿ ತನ್ನ ಮೂರ್ಖತನವನ್ನು ಏಕೆ ತೋರಿಸಬೇಕು ಎಂದು ಆಮೇಲೆ ಯೋಚಿಸಿದರು.

## ೧೪

ಮೇಲಿನ ಸಂಗತಿ ಜರುಗಿ ಎರಡು ವರ್ಷಗಳಾಗಿ ಹೋದವು. ಈ ಎರಡು ವರ್ಷಗಳಲ್ಲಿ ಅಂತಹ ಬದಲಾವಣೆಯಾಗಿರದಿದ್ದರೂ ಕೈಲಾಸಬಾಬುಗಳ ಜೀವನದಲ್ಲಿ ಒಂದು ವಿಶೇಷ ಬದಲಾವಣೆಯಾಗಿದೆ. ಕಮಲೆ ಹೊರಟು ಹೋದ ದಿನದಿಂದ, ಕಮಲಚರಣನು ತನ್ನ ಕೊನೆಯುಸಿರನ್ನು ಬಿಟ್ಟು ಹೋದಂದಿನಿಂದ ಇಡಿ ಜಗತ್ತೇ ಕಣ್ಣು ಮುಚ್ಚಿಕೊಂಡಂತೆ ಎನಿಸುತ್ತಿದ್ದಿತು

ಕೈಲಾಸಬಾಬುಗಳಿಗೆ. ಆದರೆ ಸರಯೂನ ಈ ಕ್ಷುದ್ರ ಮಗು ಅವರು ಮರೆತು ಹೋದ ಸಂಸಾರದ ಸ್ನೇಹಮಯ ದಾರಿಯ ಮೇಲೆ ಪುನಃ ಅವರನ್ನು ಕರೆ ತಂದಿತು. ಅದೆಷ್ಟೋ ದಿನಗಳು ಸಂದುಹೋದ ಬಳಿಕ ಅವರ ಕಣ್ಣುಗಳು ಇಂದು ತಿರುಗಿ ಒದ್ದೆಯಾಗಿದ್ದವು. ಅವರು ಕಣ್ಣು ಒರೆಸಿಕೊಳ್ಳುತ್ತ "ನಮ್ಮ ಮನೆಗೆ ದೇವರು ಬಂದಿದ್ದಾನೆ" ಎಂದುಕೊಂಡರು. ಅವನು ಇನ್ನೂ ಚಿಕ್ಕವನು. ಅವನನ್ನು 'ವಿಶೂ' ಎಂದು ಕೂಗಿದರೆ ಉತ್ತರ ಕೊಡಲು ತಿಳಿಯುತ್ತಿರಲಿಲ್ಲ. ಆದರೆ ಕರೆದವರನ್ನು ಕಣ್ಣು ಅರಳಿಸಿ ನೋಡುತ್ತಿದ್ದ. ಆಗ ಅವನು ಸರಯೂನ ತೊಡೆಯ ಮೇಲಾಗಲಿ, ಕೆಲಸಗಿತ್ತಿಯ ತೊಡೆಯ ಮೇಲಾಗಲಿ, ಹಾಸಿಗೆಯ ಮೇಲಾಗಲಿ ಮಲಗಿರುತ್ತಿದ್ದ. ಬಾಗಿಲ ಹೊರಗೆ ಕಾಲಿಡಲು ಬಂದಂದಿನಿಂದ, ಹಾಲಿಗಿಂತ ನೀರೇ ಒಳ್ಳೆಯದು ಎಂದು ತಿಳಿಯಲಾರಂಭಿಸಿದಂದಿನಿಂದ, ಸರಯೂನ ದೃಷ್ಟಿ ತಪ್ಪಿಸಿ ಎಲ್ಲ ಪಾತ್ರೆಗಳಿಗೂ ಬಾಯಿ ಹಚ್ಚಿ, ಕಂಠದ ವರೆಗೂ ನೀರು ಕುಡಿಯಲು ಕಲಿತಂದಿನಿಂದ, ಮುಖಕ್ಕೆ ಹೊಟ್ಟೆಗೆ ಕಪ್ಪು ಹಚ್ಚಿಕೊಳ್ಳುವುದರಿಂದ ಚೆಂದಕಾಣುವೆನೆಂದು ಎನಿಸಿದಂದಿನಿಂದ, ಅವನು ಸರಯೂನ ತೊಡೆಬಿಟ್ಟು ಕೈಲಾಸಬಾಬುಗಳ ತೊಡೆಯ ಮೇಲೆ ತನಗೆ ಚೆನ್ನಾಗಿರುವ ಸ್ಥಳವನ್ನು ಹುಡುಕಿಕೊಂಡಿದ್ದಾನೆ. ಬೆಳಗಾಗುತ್ತಲೆ ಕೈಲಾಸ ಬಾಬುಗಳು "ವಿಶೂ!" ಎನ್ನುತ್ತಿದ್ದರು. ವಿಶೂ ಬಾಯಿ ತೆರೆದು "ತಾತಾ!" ಎನ್ನುತ್ತಿದ್ದ. "ನಡೆಯಪ್ಪಾ, ಶಂಭೂಮಿಶ್ರರ ಮನೆಗೆ ಹೋಗಿ ಸೋಲಿಸಿ ಬರೋಣ" ಎಂದು ಕೈಲಾಸ ಬಾಬುಗಳು ಹೇಳಿದ ಕೂಡಲೆ ವಿಶೂ ಚದುರಂಗದ ಚೀಲ ಹಿಡಿದುಕೊಂಡು ಬಂದು ತೊದಲ್ನುಡಿಯಲ್ಲಿ "ನಲಿಯಿರಿ" ಎಂದು ಕೈ ಮುಂದೆ ನೀಡಿ ಕೈಲಾಸಬಾಬುಗಳನ್ನು ಗಟ್ಟಿಯಾಗಿ ತಬ್ಬಿಕೊಳ್ಳುತ್ತಿದ್ದ. ಆಗ ಕೈಲಾಸಬಾಬುಗಳಿಗೆ ಅತ್ಯಧಿಕ ಆನಂದವಾಗುತಿದ್ದಿತು. ಅವರು ಸರಯೂನನ್ನು ಕರೆದು "ಮಗೂ, ನಮ್ಮ ವಿಶೂ ನೋಡು, ಒಳ್ಳೆ ಕ್ರೀಡಾಪಟು ಆಗುತ್ತಾನೆ" ಎನ್ನುತ್ತಿದ್ದರು. ಸರಯೂ ತುಟಿಗಳಲ್ಲಿಯೆ ನಗುತ್ತಿದ್ದಳು. ಬಳಿಕ ವಿಶೂ ಚದುರಂಗದ ಚೀಲ ಹಿಡಿದು ಕೈಲಾಸಬಾಬುಗಳ ಕಂಕುಳಲ್ಲಿ ಕುಳಿತುಕೊಂಡು ಚದುರಂಗ ಆಡಲಿಕ್ಕೆ ಹೊರಗೆ ಹೊರಟು ಹೋಗುತ್ತಿದ್ದ. ಹೋಗುವಾಗ ದಾರಿಯಲ್ಲಿ ನಗುತ್ತ ಯಾರಾದರೂ "ಚಿಕ್ಕಪ್ಪ, ಈ ಮುಪ್ಪಿನೊಳಗೆ ಇವೆರಡು ಕೈ ಚಿಗಿತು ಮತ್ತೆ ಬಂದಿರು

ವವೆ?" ಎಂದು ಕೇಳುತ್ತಿದ್ದರು. ಅದಕ್ಕೆ ಅವರೂ ನಗುತ್ತ "ಹೌದಪ್ಪ, ಈ ಎರಡೂ ಕೈಗಳಲ್ಲಿ ಶಕ್ತಿಯಿಲ್ಲ, ಪೂರ್ತಿ ಒಣಗಿ ಹೋಗಿವೆ; ಆದುದರಿಂದ ನಾನು ಸಂಸಾರ ವೃಕ್ಷದಿಂದ ಬೀಳಬಾರದೆಂದು ಈ ಎರಡು ಕೈ ಪುನಃ ಚಿಗಿತು ಬಂದಿವೆ ಎನ್ನುತ್ತಿದ್ದರು. ಆಗ ಅವರು "ಚಿಕ್ಕಪ್ಪ, ನಿಮ್ಮೊಡನೆ ಮಾತನಾಡಿ ಯಾರೂ ಗೆದೆಯಲಾರರು ತಂದೆ'' ಎಂದು ಮೆಲ್ಲಗೆ ಮುಂದಕ್ಕೆ ಜಾರುತ್ತಿದ್ದರು.

ಶಂಭುಮಿಶ್ರರ ಮನೆಯಲ್ಲಿ ಚದುರಂಗದ ಆಟ ನಡೆಯುತ್ತಿರುವಾಗ ವಿಶೂನಿಗೂ ಒಂದು ವಿಶಿಷ್ಟ ಸ್ಥಾನವನ್ನು ಕೊಡಲಾಗುತ್ತಿದ್ದಿತು. ಅವನು ಅಜ್ಜನ ತೊಡೆಯ ಮೇಲೆ ಕುಳಿತುಕೊಂಡು ಅವರಿಗೆ ಬೀಸಣಿಕೆಯಿಂದ ಗಾಳಿ ಹಾಕುತಿದ್ದ. ಮತ್ತು ಆಟದ ಕಡೆಗೆ ಗಾಂಭೀರ್ಯದಿಂದ ನೋಡುತ್ತಿದ್ದ. ಅವಶ್ಯವೆನಿಸಿದಾಗ ಒಂದೆರಡು ಕಡೆ ಆಟವನ್ನೂ ಹೇಳಿಕೊಡುತ್ತಿದ್ದ!

ಅಜ್ಜ ಒಂದರ ಹಿಂದೆ ಒಂದು ಪೇದೆಯನ್ನು ಹೊಡೆಯ ತೊಡಗಿದೊಡನೆ ವಿಶೂವಿಗೆ ಬಹಳ ಆನಂದವಾಗುತ್ತಿದ್ದಿತು. ಅವನು ಉತ್ಸಾಹದಿಂದ ಅವುಗಳನ್ನು ಲಗುಬಗೆಯಿಂದ ಉಡಿಯಲ್ಲಿಟ್ಟುಕೊಳ್ಳುತ್ತಿದ್ದ. ಆದರೆ ಆ ಕೆಂಪು ಬಣ್ಣದ ಮಂತ್ರಿಯ ಮೇಲೆ ಅವನ ಕಣ್ಣು ಯಾವಾಗಲೂ ಇರುತ್ತಿದ್ದಿತು. ಅದು ತನ್ನ ಕೈಗೆ ಬರುವವರೆಗೆ ಆಸೆಯಿಂದ ಅದರ ಕಡೆಗೇ ನೋಡುತ್ತಿದ್ದ. ನಡುನಡುವೆ ಅದನ್ನು ತೋರಿಸಿ "ಅದು! ತಾತಾ" ಎಂದು ಕೈಲಾಸಬಾಬು ಗಳಿಗೆ ಎಚ್ಚರಿಕೆ ಕೊಡುತ್ತಿದ್ದ. ಕೈಲಾಸಬಾಬುಗಳು ಆಟದಲ್ಲಿ ಮಗ್ನರಾಗಿದ್ದು ಕೊಂಡೇ "ತಡೆಯಪ್ಪಾ, ಮಗು!" ಎನ್ನುತ್ತಿದ್ದರು. ವಿಶೂ ಆಗಾಗ ಎದ್ದು ಅತ್ತಿತ್ತ ಹೋಗುತ್ತಿದ್ದ. ಆಗ ಕೈಲಾಸಬಾಬುಗಳ ಮನಸ್ಸು ಚಂಚಲವಾಗಿ ಒಮ್ಮೆ ಆಟದ ಕಡೆಗೆ ಒಮ್ಮೆ ವಿಶೂನ ಕಡೆಗೆ ಹೋಗುತ್ತಿದ್ದಿತು; ಅಷ್ಟರಲ್ಲಿ ತಮ್ಮ ಒಂದೆರಡು ಪೇದೆಗಳನ್ನೂ ಕಳೆಕೊಳ್ಳುತ್ತಿದ್ದರು. ಆಗ ಅವರು ಕೂಗಿ ''ಬಾ ಮಗೂ, ನೋಡು ನಾವು ಸೋಲಲಾರಂಭಿಸಿದ್ದೇವೆ; ಬಾ, ಬೇಗ ಓಡಿ ಬಾ" ಎಂದು ಕರೆಯುತ್ತಿದ್ದರು. ವಿಶೂ ಓಡಿ ಬಂದು ಪುನಃ ತನ್ನ ಸ್ಥಳದಲ್ಲಿ ಕುಳಿತುಕೊಳ್ಳುತಿದ್ದ. ಅದರಿಂದ ಪುನಃ ಮುದುಕನ ಉತ್ಸಾಹ ಹೆಚ್ಚುತ್ತಲಿತ್ತು. ಆಟವು ಮುಗಿದ ಮೇಲೆ ಆ ಕೆಂಪು ಬಣ್ಣದ ಮಂತ್ರಿ

ಯನ್ನು ಕೈಯಲ್ಲಿ ಹಿಡಿದುಕೊಂಡು ಅಜ್ಜನ ಹೆಗಲ ಮೇಲೆ ಕುಳಿತು ಮನೆಗೆ ಹೋಗುತ್ತಿದ್ದ ವಿಶೂ.

ಹೀಗೆ ಕೈಲಾಸಬಾಬುಗಳ ದಿನ ಹೊಸ ಬಗೆಯಿಂದ ಕಳೆದು ಹೋಗ ತೊಡಗಿದವು. ಅವರ ಮೊದಲಿನ ನಿಯಮ ಸಡಿಲಾಗುತಿದ್ದುವು. ಈಗ ಮೊದಲಿನಂತೆ ಚದುರಂಗದ ಆಟ ನಡೆಯುತ್ತಿಲ್ಲ. ಚದುರಂಗದ ಚೀಲ ಬಹುಶಃ ಯಾವುದೊ ಒಂದು ಮೂಲೆಯಲ್ಲಿ ಬಿದ್ದಿರುತ್ತದೆ. ಬೆಳಿಗ್ಗೆ ಶಂಭೂಮಿಶ್ರರಿಗೆ ಬಿಟ್ಟಿಯಾಗುವುದು ಪ್ರಾಯಃ ನಿಂತೇ ಹೋಗಿದೆ. ಮಧ್ಯಾಹ್ನ ಗಂಗಾಪಾಂಡೇಯವರೊಡನೆ ಆಡುವುದೂ ನಿಂತಿದೆ. ಮುಕುಂದ ಘೋಷರ ಮನೆಯಲ್ಲಿ ಈಗ ರಾತ್ರಿ ಜನರೂ ಮೊದಲಿನಂತೆ ಕಲೆಯುವುದಿಲ್ಲ. ಮುಕುಂದಘೋಷರಿಗೇನೊ ಕರೆದು ಕರೆದು ಸಾಕಾಗುತಿತ್ತು. ಆದರೆ ಕೈಲಾಸ ಬಾಬುಗಳು ಅವರ ಮನೆಗೆ ಹೋಗುತ್ತಿರಲಿಲ್ಲ. ಅವರು ದೀಪದ ಎದುರಿನಲ್ಲಿ ಕುಳಿತುಕೊಂಡು ತಮ್ಮ ಹೊಸ ಶಿಷ್ಯನಿಗೆ ಚದುರಂಗದ ಪಾಠ ಹೇಳಿಕೊಡುತಿದ್ದರು—"ವಿಶೂ, ಕುದುರೆ ಎರಡುವರೆ ಮನೆ ನಡೆಯುತ್ತದೆ."

ವಿಶೂ ಗಂಭೀರನಾಗಿ "ಕುದುಲೆ ?" ಎನ್ನುತ್ತಿದ್ದ.

"ಹೌದು ಕುದುರೆ."

"ಕುದುಲೆ ನಲಿಯುತ್ತದೆ ?"

"ಹೌದು, ಕುದುರೆ ಎರಡೂವರೆ ಮನೆ ನಡೆಯುತ್ತದೆ. ನಡಿಸು."

ವಿಶೂನ ಮನಸ್ಸಿನಲ್ಲಿ ಹೊಸ ಭಾವನೆಗಳೇಳುತಿದ್ದವು. ಅವನು ಕೇಳುತಿದ್ದ—"ಗಾಡಿ ಎಲೆಯುತ್ತದೆಯೇನು ಈ ಕುದುಲೆ ?"

"ಇಲ್ಲ ಮಗೂ, ಈ ಕುದುರೆಯಲ್ಲ ಗಾಡಿಯನ್ನೆಳೆಯೋದು. ಅದು ಮತ್ತೊಂದು ಕುದುರೆ."

ಆಡುವಾಗ ಸರಯೂ ಒಮ್ಮೊಮ್ಮೆ ಇರುತಿದ್ದಳು. ಮಗನ ಈ ಬುದ್ಧಿವಂತಿಕೆಯನ್ನು ನೋಡಿ ನಗುತ್ತ ಅಲ್ಲಿಂದ ಹೊರಟು ಹೋಗುತ್ತಿದ್ದಳು ಬೇಗ.

ವಿಶೂ ತನ್ನ ಚಿಕ್ಕಚಿಕ್ಕ ಬೆರಳುಗಳಿಂದ ತೋರಿಸುತ್ತ 'ಅದು' ಎನ್ನುತ್ತಿದ್ದ. ಹಾಗೆಂದರೆ ಕೆಂಪು ಬಣ್ಣದ ಮಂತ್ರಿಯನ್ನು ಕೊಡಿರಿ ಎಂದರ್ಥ. ಇಷ್ಟು ಸಾಮಾನು—ಕುದುರೆ, ಆನೆಗಳು ಮುಂತಾದುವು—ಇದ್ದರೂ ವಿಶೂನ ದೃಷ್ಟಿ

ಕೆಂಪು ಬಣ್ಣದ ಮಂತ್ರಿಯ ಮೇಲೆಯೇ ಏಕೆ ಹೋಗುತ್ತದೆ ಎಂಬುದು ಕೈಲಾಸ ಬಾಬುಗಳಿಗೆ ತಿಳಿಯುತ್ತಿರಲಿಲ್ಲ.

ಆದರೆ ವಿಶೂನ ಬೇಡಿಕೆ ಸಲ್ಲದೆ ಇರುತ್ತಿರಲಿಲ್ಲ. ಕೈಲಾಸಬಾಬುಗಳು ಅವನಿಗೆ ಬೇರೆ ಕಾಯಿ ಕೊಟ್ಟು ಮರೆಯಿಸಬೇಕೆನ್ನುತ್ತಿದ್ದರು. ಆದರೆ ವಿಶೂ ಬಹಳ ತೀಕ್ಷ್ಣ; ಮರೆಯುತ್ತಿರಲಿಲ್ಲ. ಅವನು ಕೇಳಿದುದನ್ನು ಕೊಟ್ಟು "ಮಗೂ, ಕಳೆಯಬೇಡ ಇದನ್ನು, ಏನು?" ಎನ್ನುತ್ತಿದ್ದರು ಕೈಲಾಸ ಬಾಬುಗಳು.

"ಏಕೆ?"

"ಮಂತ್ರಿ ಕಳೆದು ಹೋದರೆ ಆಟ ನಡೆಯುವುದೆ?"

"ನಡೆಯುವುದಿಲ್ಲವೆ?"

"ಇಲ್ಲ, ಮಗೂ."

ವಿಶೂ ಗಂಭೀರವಾಗಿ "ತಾತಾ, ಮಂತ್ರೀ" ಎನ್ನುತ್ತಿದ್ದ.

"ಹೌದು, ಮಂತ್ರಿ."

ಭೋಲಾನಾಥರ ಮನೆಯಲ್ಲೊಂದು ದಿನ ಕೀರ್ತನವಿದ್ದಿತು. ಕೈಲಾಸ ಬಾಬುಗಳು "ವಿಶೂ ನಡೆಯಪ್ಪಾ, ಕೀರ್ತನ ಕೇಳಿ ಬರೋಣ" ಎಂದರು. ಕಾಪಶೀ ಅಂಗಿ ತೊಟ್ಟು ಪಂಚೆ ಉಟ್ಟು ಹಣೆಯ ಮೇಲೆ ತಿಲಕ ಇಟ್ಟು ಕಾಲಲು ಬಾಚಿಕೊಂಡು ಅಜ್ಜನ ಹೆಗಲ ಮೇಲೆ ಕುಳಿತು ಕೀರ್ತನ ಕೇಳಲು ಹೊರಟ ವಿಶೂ. ವನವಾಸದಲ್ಲಿದ್ದ ವೃದ್ಧ ಭರತನ ಬಳಿಗೆ ಹರಿಣದ ಮರಿ ಯೊಂದು ಹೋಗಿ ಅವನನ್ನು ಸ್ನೇಹಬಂಧನದಲ್ಲಿ ತೊಡಕಿಸಿ ದೊಡ್ಡದಾದ ಮೇಲೆ ಒಂದು ದಿನ ಹೇಗೆ ಅರಣ್ಯವನ್ನು ಸೇರಿತು? ಅದನ್ನು ಕಳೆದುಕೊಂಡು ಪಾಪಿಯ ಭರತನಿಗೆಷ್ಟು ದುಃಖವಾಯಿತು? ಎಂಬ ಕತೆ ಸಾಗಿದ್ದಿತು. ಕೀರ್ತನ ಕಾರರು ಕತೆಯನ್ನು ಕರುಣರಸದ ವಾಣಿಯಲ್ಲಿ ವರ್ಣಿಸುತ್ತಿದ್ದರು. ಇದನ್ನು ಕೇಳಿ ಕೈಲಾಸಬಾಬುಗಳಿಗೆ ಕಣ್ಣಿನಲ್ಲಿ ನೀರು ಬಂದುಬಿಟ್ಟಿತು. ಅವರ ಅಂತ ರಂಗವು ನಡುಗಿತು. ಅವರು ವಿಶೂನನ್ನು ಅವಚಿಕೊಂಡು ಭರತನಂತೆ "ಬಾ! ಬಾ!! ಬಾ!!!" ಎಂದು ಕರೆಯುತ್ತಿದ್ದರು.

ಕೈಲಾಸಬಾಬುಗಳ ಈ ನೋಟವು ಸಭಿಕರಿಗೆ ಅಸ್ವಾಭಾವಿಕವೆಂದು ತೋರಲಿಲ್ಲ. ಏಕೆಂದರೆ ಆ ಸಭಿಕರೆಲ್ಲರೂ ವೃದ್ಧ ಭರತನಂತೆ ಏನೋ ಕಳೆದು

ಕೊಂಡಂತಾಗಿ ರೋದಿಸುತಿದ್ದರು. ಕೈಲಾಸಬಾಬುಗಳು ಕಣ್ಣು ಒರೆಸಿ ಕೊಳ್ಳುತ್ತ ವಿಶೂನನ್ನು ಕರೆದುಕೊಂಡು ಮನೆಗೆ ಹೊರಟರು. ರಾತ್ರಿ ಬಹಳ ವಾಗಿದ್ದರಿಂದಲೂ ಒಂದೇ ಸ್ಥಳದಲ್ಲಿ ಕುಳಿತು ಕುಳಿತು ಬೇಸರ ಬಂದುದ ರಿಂದಲೂ ವಿಶೂನಿಗೆ ನಿದ್ದೆ ಬಂದಿದ್ದಿತು. ಅವನು ದಾರಿಯಲ್ಲಿಯೆ ಮಲಗಿಬಿಟ್ಟ.

ಅವರು ಮನೆಗೆ ಬಂದು ಮಗುವನ್ನು ಸರಯೂಗೆ ಒಪ್ಪಿಸುತ್ತ "ಕರೆದು ಕೊ ಮಗೂ, ನಿನ್ನ ಧನ ನಿನ್ನ ಬಳಿಯಲ್ಲಿಯೆ ಇರಲಿ" ಎಂದರು.

ಈ ಹೊತ್ತು ಕೈಲಾಸಚಂದ್ರರ ಕಣ್ಣು ಒದ್ದೆಯಾಗಿದ್ದಂತೆ ತೋರಿತು ಸರಯೂಗೆ.

೧೫

ಎರಡು ವರ್ಷಗಳಿಂದ ಚಂದ್ರನಾಥನಿಗೆ ತನ್ನ ಮನೆಯ ಸಂಬಂಧ ಅಷ್ಟಕ್ಕಷ್ಟೆ. ಹಣ ಬೇಕಾದಾಗ ಕಾಗದ ಬರೆದು ರೂಪಾಯಿ ತರಿಸಿಕೊಳ್ಳುತ್ತಿದ್ದ.

ಹರಕಾಲಿ ಆಗಾಗ ತನ್ನ ದುಃಖಪ್ರದರ್ಶನದ ಪತ್ರಗಳನ್ನು ಚಂದ್ರನಾಥ ನಿಗೆ ಬರೆಯುತಿದ್ದಳು. ಬೇಗನೆ ಹೊರಟುಬರಲು ವ್ರಜಕಿಶೋರರೂ ಬರೆಯು ತ್ತಿದ್ದರು. ಮಣಿಶಂಕರರೂ ತಾವು ಕ್ಷೀಣರಾಗಿದ್ದೇವೆಂದೂ ಚಂದ್ರನಾಥನನ್ನು ನೋಡುವ ಆಸೆಯಾಗಿದೆಯೆಂದೂ ಒಂದೆರಡು ಸಲ ಬರೆದಿದ್ದರು.

ಮೊದಮೊದಲು ಈ ಪತ್ರಗಳ ಕಡೆಗೆ ಚಂದ್ರನಾಥ ಅಷ್ಟೊಂದು ಗಮನ ಕೊಡುತ್ತಿದ್ದಿಲ್ಲ. ಹರಿಬಾಲೆ 'ಹೊರಟು ಬಾ, ನಿನ್ನೊಡನೆ ಸ್ವಲ್ಪ ಮಾತನಾಡ ಬೇಕಾಗಿದೆ'ಯೆಂದು ಬರೆದೊಡನೆ ಗಂಟುಕಟ್ಟಿಕೊಂಡು ಹೊರಟುಬಿಟ್ಟ. ಹರಿ ಬಾಲೆ ಅದೇನು ಹೇಳುವಳೊ? ಏನು ಕಾಗದವಿದೆಯೊ, ಯಾರ ಹಸ್ತಾಕ್ಷರ ವಿದೆಯೊ, ಅದರಲ್ಲಿ ಹಿಂದಿನ ಸುಖದ ಯಾವ ಸಂಗತಿ ಇದೆಯೊ? ಎಂಬ ಕುತೂಹಲದಿಂದ ಅವನು ಮನೆಗೆ ಬರಲು ಬಯಸಿದ. ಯಾವ ಆಸೆಯಿಂದ ಅವನು ಇಷ್ಟು ದೂರ ಬಂದಿದ್ದನೊ ಆ ಆಸೆ ಕೈಗೂಡಲಿಲ್ಲ. ಕೊನೆಗೆ ಹರಿ ಬಾಲೆಯನ್ನು ಕಂಡು "ಏನಮ್ಮಾ, ಏನು ಹೇಳುವುದಿತ್ತು?" ಎಂದು ಕೇಳಿದ.

"ಇಲ್ಲ, ಏನೂ ಇಲ್ಲ."

ಚಂದ್ರನಾಥ ನಿರಾಶನಾಗಿ "ಹಾಗಾದರೆ ಅದೇಕೆ ವ್ಯರ್ಥವಾಗಿ ನನ್ನನ್ನು ಕರೆಯಿಸಿಕೊಂಡೆ?" ಎಂದ.

"ನೀನು ಮನೆಗೆ ಬಾರದೆ ಇರುವುದು ಚೆಂದವೆ ?" ಎಂದು ಉಸಿರೊಂದನ್ನು ಬಿಟ್ಟು "ಚಂದ್ರ, ಆಗಬೇಕಾದುದು ಆಗಿಹೋಯಿತು. ಪುನಃ ನೀನು ಬಾಳುವೆ ಮಾಡದೆ ಇದ್ದರೆ ನಮಗೆ ದುಃಖವಾಗುತ್ತದೆ ಕಂಡೆಯಾ" ಎಂದಳು.

"ಅದಕ್ಕಾಗಿ ನಾನೇನು ಮಾಡಲಿ ?" ಎಂದು ವಿರಕ್ತಭಾವದಿಂದ ನುಡಿದ ಚಂದ್ರನಾಥ.

ಮಣಿಶಂಕರರು ಗಟ್ಟಿಯಾಗಿ ಚಂದ್ರನಾಥನ ಕೈಹಿಡಿದು "ನನ್ನನ್ನು ಕ್ಷಮಿಸು ಮಗೂ. ಅಂದಿನಿಂದ ನನ್ನ ಹೃದಯದಲ್ಲಿ ಅದೆಂತಹ ಬೇಗೆಯಿದೆ, ಎಂಬುದನ್ನು ಆ ಅಂತರ್ಯಾಮಿಯೊಬ್ಬನು ಮಾತ್ರ ಬಲ್ಲ" ಎಂದರು.

ಚಂದ್ರನಾಥನಿಗೆ ಯಾವುದೂ ಶೋಚದಾಯಿತು. ಬಾಯಿಂದ ಮಾತುಗಳೆ ಹೊರಬೀಳಲೊಲ್ಲವು.

ತಿರಿಗಿ ಮಣಿಶಂಕರರೇ "ನೀನು ಇನ್ನೊಂದು ಮದುವೆಮಾಡಿಕೊಂಡು ಸಂಸಾರಧರ್ಮವನ್ನು ಆಚರಿಸು. ನಿನಗೆ ಒಪ್ಪುವಂಥ ಒಂದು ಹುಡುಗಿಯನ್ನು ಹುಡುಕಿ ಇಟ್ಟಿದ್ದೇನೆ. ನಿನ್ನ ಅಭಿಪ್ರಾಯ ಗೊತ್ತಾಗಲಿಲ್ಲವೆಂದು ನಾನು ಮಾತು ಕೊಡಲಿಲ್ಲ. ಜನರು ಒಬ್ಬ ಹೆಂಡತಿ ತೀರಿದ ಮೇಲೆ ಇನ್ನೊಂದು ಮದುವೆ ಮಾಡಿಕೊಳ್ಳುವುದಿಲ್ಲವೆ ?" ಎಂದರು.

"ಆ ಸುದ್ದಿಯಾದರೂ ಬರಲಿ. ಆ ಮೇಲೆ ನೋಡೋಣ."

"ಶಿವ ! ಶಿವ ! ಇಂಥ ಮಾತು ಹೇಳಬಾರದು ಮಗು ?"

ಚಂದ್ರನಾಥ ಸುಮ್ಮನಿದ್ದ.

ಮಣಿಶಂಕರರು ತಮ್ಮ ಅಳುವನ್ನು ತಡೆಯದಾದರು. ಅವರು ಅಳುತ್ತ "ನಾನೇ ನಿನ್ನನ್ನು ಸಂಸಾರಗೇಡಿಯನ್ನಾಗಿ ಮಾಡಿದೆನೆಂದು ನನಗೆ ಎನಿಸುತ್ತದೆ. ಸತ್ತರೂ ಈ ದುಃಖ ನನಗೆ ಕಡಿಮೆಯಾಗುವುದಿಲ್ಲ" ಎಂದರು.

ಚಂದ್ರನಾಥ ಬಹಳವಾಗಿ ಯೋಚಿಸಿ "ಎಲ್ಲಿಯ ಹುಡುಗಿಯನ್ನು ನೋಡಿದ್ದೀರಿ ?" ಎಂದು ಕೇಳಿದ.

ಮಣಿಶಂಕರರು ಕಣ್ಣೊರಸಿಕೊಂಡು ಎದ್ದು ಕುಳಿತರು. ಆಮೇಲೆ "ಕಲಕತ್ತೆಯಲ್ಲಿ. ನೀನೇ ಒಂದು ಸಲ ಹೋಗಿ ನೋಡಿ ಬಾ, ಎಂದರೆ ಒಳಿತಾಗುವುದು" ಎಂದರು.

"ಹಾಗೆಯೇ ಆಗಲಿ. ನಾಳೆಯೇ ಹೊರಡುತ್ತೇನೆ."

ಮಣಿಶಂಕರರು ಆಶೀರ್ವಾದವನ್ನೀಯುತ್ತ "ಹಾಗೆಯೆ ಮಾಡು. ನಿನಗೆ ಹುಡುಗಿ ಒಪ್ಪಿದರೆ ಪತ್ರ ಬರೆದುಬಿಡು. ನಾನು ಮನೆಯ ಮಂಡಳಿಯನ್ನೆಲ್ಲ ಕರೆದುಕೊಂಡು ಕೂಡಲೆ ಕಲಕತ್ತೆಗೆ ಹೊರಟು ಬಂದುಬಿಡುತ್ತೇನೆ" ಎಂದರು. ಸ್ವಲ್ಪ ತಡೆದು ತಿರಿಗಿ "ಮಗೂ, ಚಂದ್ರನಾಥ, ಇನ್ನು ನಾನು ಬಹಳ ದಿವಸ ಬದುಕುವಂತಿಲ್ಲ. ನೀನು ಪುನಃ ಮದುವೆಯಾಗಿ ಸುಖದಿಂದ ಸಂಸಾರ ಸಾಗಿಸಿಕೊಂಡು, ಇರುವುದನ್ನು ಕಂಡರೆ ಸುಖದಿಂದ ಸಾಯುವೆ" ಎಂದು ನುಡಿದರು.

ಮರುದಿನ ಚಂದ್ರನಾಥ ಕಲಕತ್ತೆಗೆ ಹೋದ. ಮಾವಂದಿರಾದ ವ್ರಜಕಿಶೋರರೂ ಜೊತೆಯಲ್ಲಿದ್ದರು. ಹುಡುಗಿಯನ್ನು ನೋಡಿ "ಹುಡುಗಿ ನೋಡಲಿಕ್ಕೆ ಲಕ್ಷ್ಮಿಯ ಹಾಗಿದ್ದಾಳೆ" ಎಂದರು.

ಚಂದ್ರನಾಥ ಮುಖ ತಿರುಗಿಸಿದ. ಯಾವ ಅಭಿಪ್ರಾಯವನ್ನೂ ತಿಳಿಸಲಿಲ್ಲ.

ಇಬ್ಬರೂ ಸ್ಟೇಶನ್ನಿಗೆ ಮರಳಿ ಬಂದು, ಟಿಕೇಟು ತೆಗೆಯಿಸಿ ಗಾಡಿಯಲ್ಲಿ ಕುಳಿತರು. ಆಗ ವ್ರಜಕಿಶೋರರು "ಏನಪ್ಪಾ, ಹುಡುಗಿ ಮನಸ್ಸಿಗೆ ಬಂದಳೆ?" ಎಂದರು.

ತಲೆಯಲ್ಲಾಡಿಸಿ "ಇಲ್ಲ" ಎಂದ ಚಂದ್ರನಾಥ.

ವ್ರಜಕಿಶೋರರಿಗೆ ಆಕಾಶದಿಂದ ದೊಪ್ಪನೆ ಬಿದ್ದಂತಾಯಿತು. "ಇಂತಹ ರೂಪವತಿ ಹುಡುಗಿ, ಮನಸ್ಸಿಗೆ ಬರಲಿಲ್ಲವೆ?" ಎಂದರು.

ಮತ್ತೆ ಚಂದ್ರನಾಥ ಮೊದಲಿನಂತೆಯೆ "ಇಲ್ಲ" ಎಂದ.

ವ್ರಜಕಿಶೋರರು ಮನದೊಳಗೆ "ನಾನು ಸರಯೂನನ್ನು ನೋಡಿದ್ದೇನೆ. ಅವಳು ಈ ಹುಡುಗೆಗಿಂತ ಸುಂದರಿಯಾಗಿಲ್ಲವಲ್ಲ?" ಎಂದು ಯೋಚಿಸ ತೊಡಗಿದರು.

ವ್ರಜಕಿಶೋರರು ತಮ್ಮ ಸ್ಟೇಶನು ಬಂದ ಕೂಡಲೆ ಇಳಿದರು. ಚಂದ್ರನಾಥ ಅಲ್ಲಾಬಾದಿಗೆ ಹೊರಟಿದ್ದ.

ವ್ರಜಕಿಶೋರರು "ನೀನು ಯಾವಾಗ ಹಿಂತಿರುಗಿಬರುವಿ?" ಎಂದು ಕೇಳಿದರು.

ಆಗ ಅವನು "ನಾನು ಬೇಗನೆ ಹಿಂತಿರುಗಲಿಕ್ಕಿಲ್ಲವೆಂದು ಚಿಕ್ಕಪ್ಪನವರಿಗೆ ಹೇಳಿರಿ" ಎಂದ.

ವ್ರಜಕಿಶೋರರು ಹೇಳಿದ ಈ ಮಾತು ಕೇಳಿ ಮಣಿಶಂಕರರು "ಇನ್ನೂ ಏನಾಗುವುದೊ! ಆಗುವುದು ಆಗಿಹೋಗಲಿ. ನನ್ನ ಬೇನೆ ಕಡಿಮೆ ಆದೊಡನೆ ಕಾಶಿಗೆ ಹೋಗಿ ಸರಯೂನನ್ನು ಕರೆತರುತ್ತೇನೆ. ಆಗಲಿ, ವ್ಯರ್ಥವಾಗಿ ಸಮಾಜಕ್ಕೆ ಹೆದರಿದರೆ ನರಕವೇ ನನಗೆ ಗತಿಯನಾದೀತು. ಸಮಾಜವೆಂದರೆ ಏನು? ನಾವೇ ಅಲ್ಲವೆ?" ಎಂದರು.

ಹರಕಾಲಿ ಇದನ್ನು ಕೇಳಿ ಅವಡುಗಚ್ಚುತ್ತ "ಅವರಿಗೇನು ಮುದಿಹುಚ್ಚು ಹಿಡಿಯಿತೆ?" ಎಂದಳು. ಆಮೇಲೆ ಕರಣಿಕರನ್ನು ಕರೆದು "ಚಂದ್ರನಾಥನ ಕೂಡ ಆದ ಮಾತುಕತೆ ಏನು?" ಕೇಳಿದಳು.

"ಹೆಚ್ಚಿಗೆ ಏನೂ ಇಲ್ಲ. ಕಾಶಿಗೆ ಇಂದಿನವರೆಗೆ ಎಷ್ಟು ರೂಪಾಯಿ ಕಳಿಸಿದೆಯೆಂದು ಅವರು ನನ್ನನ್ನು ಕೇಳಿದರು."

"ಅಷ್ಟೇ ಏನು? ಇದಕ್ಕೂ ಹೆಚ್ಚೂ ಏನೂ ಕೇಳಲಿಲ್ಲವೆ?" ಎಂದು ಉಗ್ರಮುಖಿಯಾಗಿ ಹೊರಟುಹೋದಳು.

೧೬

ಚಂದ್ರನಾಥನ ಬಳಿಯಲ್ಲಿ ಅಲ್ಹಾಬಾದಿನ ಟಿಕೀಟು ಇದ್ದಿತು. ಆದರೆ ಅಲ್ಲಿಗೆ ಹೋಗುವ ಸಂಕಲ್ಪವನ್ನು ಅಕಸ್ಮಾತ್ ಬದಲಾಯಿಸಿ ಕಾಶಿಯಲ್ಲಿಯೆ ಇಳಿದುಬಿಟ್ಟ.

ಸಂಗಡ ಇದ್ದ ಆಳುಮಕ್ಕಳಿಗೆ ಟಾಂಗಾ ಮಾಡಿಕೊಟ್ಟು ಅವರಲ್ಲಿ ಸಾಮಾನು ಇಡಿಸಿ ಪ್ರವಾಸಿಗಳ ಬಂಗ್ಲೆಗೆ ಹೋಗಿರೆಂದು ಕಳಿಸಿದ. ಮತ್ತು ತಾನು ಬರುವವರೆಗೆ ಅಲ್ಲಿಯೆ ದಾರಿ ಕಾಯುತ್ತ ಇರಲು ಹೇಳಿ ತಾನು ಕಾಲು ನಡಿಗೆಯಿಂದ ಹೊರಟ. ನಡೆಯುವಾಗ ಅವನಿಗೆ ದುಃಖವಾಗಿದ್ದಿತು, ಮುಖವು ಬಾಡಿದ್ದಿತು, ಕಳೆಯು ಕುಂದಿದ್ದಿತು; ಒಂದೊಂದು ಹೆಜ್ಜೆಯೂ ತನ್ನ ಎದೆಯ ಮೇಲೆಯೆ ಬೀಳುತ್ತಿದೆಯೊ ಎಂಬಂತೆ ಎನಿಸುತ್ತಿದ್ದಿತು. ಆದರೂ ಅವನು ನಡೆಯುತ್ತ ಮುಂದೆ ಸಾಗಿದ; ನಿಲ್ಲಲು ಮನಸ್ಸಾಗಲಿಲ್ಲ. ನಡೆಯುತ್ತಿದ್ದಂತೆ ಹರಿದಯಾಲರ ಮನೆ ಹತ್ತಿರ ಹತ್ತಿರವಾಗುತ್ತಿದ್ದಿತು.

ಅವನು ತನ್ನ ಪರಿಚಿತವಾದ ದಾರಿಯಲ್ಲಿಯೆ ಮುಂದಡಿಯಿಡುತ್ತ ಸಾಗಿದ್ದ. ಅದೇ ಮಾರ್ಗದಲ್ಲಿ ಒಬ್ಬ ಮಿಠಾಯಿಗಾರನ ಚಿಕ್ಕ ಅಂಗಡಿ ಮೊದಲು ಹೇಗೆ ಇತ್ತೋ ಈಗಲೂ ಹಾಗೆಯೆ ಇದ್ದಿತು. ಆ ಅಂಗಡಿಕಾರ ತನ್ನಷ್ಟೆ ದೊಡ್ಡ ಒಂದು ಮಣೆಯ ಮೇಲೆ ಕುಳಿತು ಒಡೆಗಳನ್ನು ಮಾಡುತ್ತಿದ್ದ. ಚಂದ್ರನಾಥ ಅಲ್ಲಿ ಸ್ವಲ್ಪ ನಿಂತ. ಅವನು ಚಂದ್ರನಾಥನನ್ನೇನೊ ನೋಡಿದ. ಆದರೆ ಸಾಹೇಬರ ಉಡುಪಿನಲ್ಲಿದ್ದ ವ್ಯಕ್ತಿಗೆ ಒಡೆ ತೆಗೆದುಕೊಳ್ಳಲು ಹೇಳುವುದೆಂತು ? ಆದ್ದರಿಂದ ಅವನ ಕಡೆಗೆ ಒಂದು ಸಲ ಸುಮ್ಮನೆ ನೋಡಿ ತನ್ನ ಕೆಲಸದಲ್ಲಿ ತೊಡಗಿಬಿಟ್ಟ.

ಚಂದ್ರನಾಥ ಮುಂದೆ ಸಾಗಿದ. ಆದರೆ ದಾರಿ ಹೊರಳುವ ವರೆಗೆ ಹೋದ ಮೇಲೆ ಹೆಜ್ಜೆ ಮುಂದೆ ಇಡಲಿಕ್ಕೇ ಆಗಲಿಲ್ಲ. ಆ ಇಕ್ಕಟ್ಟಾದ ಓಣಿಯಲ್ಲಿ ಗಾಳಿಯೂ ಸರಿಯಾಗಿ ಆಡುತ್ತಿರಲಿಲ್ಲ. ಉಸಿರಾಡಲಿಕ್ಕೂ ಚಂದ್ರನಾಥನಿಗೆ ತೊಂದರೆಯಾಗುತಿದ್ದಿತು. ಒಂದೆರಡು ಹೆಜ್ಜೆ ಮುಂದೆ ಹೋಗಿ ನಿಂತುಬಿಡುತ್ತಿದ್ದ. ಪುನಃ ನಡೆಯುತಿದ್ದ, ಮತ್ತೆ ನಿಲ್ಲುತಿದ್ದ. ದಾರಿ ಮಾತ್ರ ಮುಗಿಯಲೊಲ್ಲದು. ಈ ದಾರಿ ಮುಗಿಯಕೂಡದೆಂದು ಮನಃಪೂರ್ವಕವಾಗಿಯೂ ಅವನು ಬಯಸುತ್ತಿದ್ದ. ದಾರಿಯು ಮುಗಿದ ಕೂಡಲೆ ಅದಾವ ನೋಟ ದೃಷ್ಟಿಗೆ ಬೀಳುವುದೋ ಎಂದು ಯೋಚನೆ ಅವನಿಗೆ! ಅಂತೂ ಇಂತೂ ಅವನು ಹರಿದಯಾಲರ ಮನೆಯ ಎದುರಿನಲ್ಲಿ ಹೋಗಿ ನಿಂತ. ಅದೆಷ್ಟೊ ಹೊತ್ತು ಸುಮ್ಮನೆ ನಿಂತ; ಹರಿದಯಾಲರನ್ನು ಕೂಗಬೇಕೆಂದರೆ ಗಂಟಲು ಒಣಗಿದ್ದಿತು! ಕೊನೆಗೆ ಒಣಗಿದ ಗಂಟಲಿನಿಂದ ಹರಿದ ಶಬ್ದಗಳಲ್ಲಿ ಕೂಗಿಬಿಟ್ಟ. ಗಡಿಯಾರ ತೆಗೆದು ನೋಡಿದ. ೯ ಘಂಟೆಯಾಗಿ ಹೋಗಿದ್ದಿತು. ಪುನಃ ಸಾಹಸದಿಂದ "ಪಂಡಿತ ಹರಿದಯಾಲರೇ!" ಎಂದು ಕೂಗಿದ. ಆದರೆ ಉತ್ತರ ಬರಲಿಲ್ಲ. ದಾರಿ ಹೋಕರು ಯೂರೋಪಿಯನ್ ಉಡುಪಿನಲ್ಲಿದ್ದ ಚಂದ್ರನಾಥನನ್ನು ತಿರುತಿರುಗಿ ನೋಡುತ್ತಿದ್ದರು. ಚಂದ್ರನಾಥ "ಹರಿದಯಾಲರೇ!" ಎಂದು ಪುನಃ ಕೂಗಿದ.

ಒಬ್ಬ ಸ್ತ್ರೀ ಒಳಗಿನಿಂದಲೆ ಉತ್ತರವಿತ್ತಳು—'ಮನೆಯಲ್ಲಿ ಇಲ್ಲ' ಎಂದು. ಉತ್ತರ ಕೊಟ್ಟವಳು ಒಬ್ಬ ಬಂಗಾಲಿ ದಾಸಿ. ಅವಳು ಹೊರಗೆ ಬಾಗಿಲ ವರೆಗೂ ಬಂದು ಯೂರೋಪಿಯನ್ ಉಡುಪಿನಲ್ಲಿದ್ದ ಈ ಅಪರಿಚಿತನನ್ನು

ನೋಡಿ ಬಾಗಿಲಿಗೆ ಮರೆಯಾಗಿ ನಿಂತಳು. ಅವನು ತನ್ನ ಮಾತೃಭಾಷೆ ಯಲ್ಲಿಯೆ ಮಾತಾಡುವುದನ್ನು ನೋಡಿ ಗಾಬರಿಯಿಂದ ಓಡಿಹೋಕದೆ "ಅವರು ಮನೆಯಲ್ಲಿಲ್ಲ" ಎಂದು ಉತ್ತರವಿತ್ತಳು.

"ಯಾವಾಗ ಹಿಂತಿರುಗಿ ಬರುವರು ?"

"ಮಧ್ಯಾಹ್ನದ ಸುಮಾರಿಗೆ."

ಚಂದ್ರನಾಥ ಮನೆಯನ್ನು ಹೊಕ್ಕ. ಆನಂದ, ನಾಚಿಕೆ, ಸಂಶಯ ಈ ಮೂರರಿಂದಲೂ ಅವನ ಅಂತಃಕರಣವು ಅಲುಗಿತು. ಒಳಗೆ ಸರಯೂ ಇರುವಳೆಂದು ಅವನು ತಿಳಿದಿದ್ದ. ಆದರೆ ಒಳಗೆ ಹೋದ ಮೇಲೆ ಅವನಿಗೆ ಯಾರೂ ಕಾಣಲಿಲ್ಲ. ಆಗ "ಈ ಮನೆಯಲ್ಲಿ ಮತ್ತಾರೂ ಇಲ್ಲವೇನು ?" ಎಂದು ಅವಳನ್ನು ಕೇಳಿದ.

"ಇಲ್ಲ."

"ಅವರೆಲ್ಲಿದ್ದಾರೆ ?"

"ಯಾರು ?"

"ಒಬ್ಬ ಹೆಂಗಸರು—"

"ನನ್ನ ಹೊರತು ಇಲ್ಲಿ ಯಾರೂ ಇರುವುದಿಲ್ಲ."

"ಒಂದು ಚಿಕ್ಕ ಮಗುವಿದ್ದಿತಲ್ಲವೆ ?"

"ಇಲ್ಲ. ಇಲ್ಲಿ ಯಾರೂ ಇಲ್ಲ."

"ಹಾಗಾದರೆ ಅವರು ಎಲ್ಲಿಗೆ ಹೋದರು ?"

ದಾಸಿಗೆ ದಿಗಿಲುಬಿದ್ದಂತಾಯಿತು.

ಕೊನೆಗೆ ಮಣೆಯ ಮೇಲೆ ಕುಳಿತುಕೊಂಡು ಚಂದ್ರನಾಥ ಕೇಳಿದ.

"ಇಲ್ಲ, ಇಲ್ಲಿ ಯಾರೂ ಇರುವುದಿಲ್ಲ. ನನ್ನ ಹೊರತು ಇಲ್ಲಿ ಇರುವವರು ಪುರೋಹಿತರೊಬ್ಬರು ಮಾತ್ರ. ಒಂದು ತಿಂಗಳಾಯಿತು, ಇಲ್ಲಿಗೆ ಬಂದು ಹೋದವರು ಕೂಡ ಯಾರೂ ಇಲ್ಲ' ಎಂದಳು ಅವಳು.

ಚಂದ್ರನಾಥ ಸ್ತಬ್ಧನಾಗಿ ಸ್ವಲ್ಪ ಹೊತ್ತು ನೆಲದ ಕಡೆಗೆ ನೋಡುತ್ತ ಲಿದ್ದ. ಅವನ ಮನದಲ್ಲಿ ಏಳುತ್ತಿದ್ದ ಭಾವನಾಲಹರಿಗಳನ್ನು ಆ ದೇವರೆ ಬಲ್ಲ. ಅದೆಷ್ಟೋ ಸಮಯದ ಬಳಿಕ "ನೀನು ಎಷ್ಟು ದಿನಗಳಿಂದ ಇಲ್ಲಿ ಇರುವೆ ಯಮ್ಮಾ ?" ಎಂದು ಕೇಳಿದ.

"ಸುಮಾರು ೧|| ವರುಷದಿಂದ."

"ಸರಿ ನೀನು ಯಾರನ್ನೂ ಇಲ್ಲಿ ನೋಡಿಲ್ಲವೇನಮ್ಮಾ? ಒಬ್ಬ ಕೆಂಪಗಿನ ಹೆಂಗಸು. ಅವಳ ಕಂಕುಳಲ್ಲಿ ಗಂಡೋ ಹೆಣ್ಣೋ ಮಗು ವೊಂದಿದ್ದಿತು. ಅಥವಾ ಮಗುವು ಇಲ್ಲದೆಯೂ ಇರಬಹುದು. ನೀನು ಯಾರನ್ನೂ ನೋಡಿಲ್ಲವೆ?"

"ಇಲ್ಲ. ಯಾರನ್ನೂ ನೋಡಿಲ್ಲ."

"ಅವರ ವಿಷಯವಾಗಿ ಯಾರ ಬಾಯಿಂದಲೂ ಏನೂ ಕೇಳಿಲ್ಲವೇ?"

"ಇಲ್ಲ."

ಚಂದ್ರನಾಥ ಪುನಃ ಏನನ್ನೂ ಕೇಳಲಿಲ್ಲ. ಸುಮ್ಮನೆ ಕುಳಿತುಕೊಂಡು ಹರಿದಯಾಲರ ದಾರಿ ನೋಡಲಾರಂಭಿಸಿದ. ಸರಯೂ ಈ ಜಗತ್ತಿನಲ್ಲಿಲ್ಲ ವೆಂದು ಈಗ ಅವನಿಗೆ ಮನವರಿಕೆಯಾಯಿತು. ಆದರೂ ಈ ವಿಚಾರವನ್ನು ತಿಳಿದುಕೊಳ್ಳಬೇಕೆಂದು ಅಲ್ಲಿಯೇ ಕುಳಿತಿದ್ದ. ಆದರೆ ಒಂದೊಂದು ನಿಮಿಷ ಒಂದೊಂದು ವರುಷದಂತೆ ತೋರಿತು ಅವನಿಗೆ.

ಮಧ್ಯಾಹ್ನ ಹರಿದಯಾಲರು ಮನೆಗೆ ಬಂದರು. ಮೊದಲು ಚಂದ್ರ ನಾಥನನ್ನು ಕಂಡು ಅಚ್ಚರಿಯಾಯಿತು ಅವರಿಗೆ. ಆಮೇಲೆ ಗರುತು ಹಿಡಿದು "ಓಹೋ, ಚಂದ್ರನಾಥನೇನು? ಯಾವಾಗ ಬರೋಣವಾಯಿತು?" ಎಂದು ಶುಷ್ಕಸ್ವರದಿಂದ ಕೇಳಿದರು.

ಚಂದ್ರನಾಥ ಭಗ್ನ ಸ್ವರದಿಂದ ಕೇಳಿದ–"ಬಹಳ ಹೊತ್ತಾಯಿತು. ಅವರು ಎಲ್ಲಿದ್ದಾರೆ?"

"ಅವರೆ? ಹುಂ, ಅವರು........"

ಚಂದ್ರನಾಥ ನಡುಗುತ್ತ ಎದ್ದುನಿಂತ. ಆಮೇಲೆ ತನ್ನ ಎಲ್ಲ ಶಕ್ತಿಯನ್ನು ಉಪಯೋಗಿಸಿ ಕಂಬನಿಗಳನ್ನು ತಡೆದುಕೊಂಡು ಕೇಳಿದ–"ಅವಳು ಯಾವಾಗ ತೀರಿದಳು?"

"ಯಾರು? ಯಾವಾಗ ತೀರಿದಳು?"

ಚಂದ್ರನಾಥ ಶುಷ್ಕ ಹಾಗು ಭಗ್ನಸ್ವರದಿಂದ ಕೂಗಿ "ಸರಯೂ ಯಾವಾಗ ಸತ್ತಳು?" ಎಂದು ಕೇಳಿದ.

ಹರಿದಯಾಲರಿಗೆ ಈಗ ತಿಳಿಯಿತು. ಅವರು "ಅವಳು ಸತ್ತಿಲ್ಲ. ಚೆನ್ನಾಗಿ ಕ್ಷೇಮವಾಗಿದ್ದಾಳೆ." ಎಂದರು.

"ಎಲ್ಲಿದ್ದಾಳೆ ?"

"ಕೈಲಾಸಬಾಬುಗಳ ಮನೆಯಲ್ಲಿ."

"ಅವರು ಇರುವುದೆಲ್ಲಿ ?"

"ಈ ಓಣಿಯ ಕೊನೆಯಲ್ಲಿ—ಒಂದು ಹಲಸಿನ ಮರವಿದೆ. ಅದರ ಬುಡದಲ್ಲಿಯೆ ಅವರ ಮನೆ."

ಚಂದ್ರನಾಥ ತಲೆಹಿಡಿದುಕೊಂಡು ಕುಳಿತ. ಬಹಳ ಹೊತ್ತಿನವರೆಗೆ ಹಾಗೆಯೆ ಕುಳಿತುಕೊಂಡು, ಶಾಂತಚಿತ್ತನಾಗಿ "ಅವಳು ಇಲ್ಲಿ ಏಕಿಲ್ಲ ?" ಎಂದು ಕೇಳಿದ.

ನಾನೇನು ಅಂತಹ ಕೆಟ್ಟ ಕೆಲಸವನ್ನು ಮಾಡಿದ್ದೇನೆ ವ್ಯರ್ಥವಾಗಿ ಸಂಕೋಚಪಟ್ಟುಕೊಳ್ಳಲಿಕ್ಕೆ ಎಂದು ಯೋಚಿಸಿ ನುಡಿದರು ಹರಿದಯಾಲರು : "ನಿಮ್ಮ ಮನೆಯಲ್ಲಿ ಅವಳಿಗೆ ಸ್ಥಳ ಸಿಗಲಿಲ್ಲವೆಂದಮೇಲೆ ನನ್ನಲ್ಲಿ ಹೇಗೆ ಸಿಕ್ಕೀತು ? ನನಗೂ ನಾಲ್ಕು ಜನರು ಬೇಕು."

ಹರಿದಯಾಲರು ಹೇಳಿದ್ದು ಸರಿ ಎನಿಸಿತು ಚಂದ್ರನಾಥನಿಗೆ. ಅವನು ಸ್ವಲ್ಪ ಯೋಚಿಸಿ ಕೇಳಿದ—"ಕೈಲಾಸಬಾಬುಗಳ ಮನೆಗೆ ಅವಳು ಹೇಗೆ ಹೋದಳು ?"

"ಅವರೇ ಬಂದು ಕರೆದುಕೊಂಡು ಹೋದರು."

"ಅವರು ಯಾರು ?"

"ಕಾಶಿಯ ಒಬ್ಬ ಬಡ ಬ್ರಾಹ್ಮಣರು."

"ಸರಯೂಗೆ ಮೊದಲಿನಿಂದ ಅವರ ಪರಿಚಯವಿದ್ದಿತೆ ?"

"ಹೌದು, ಚೆನ್ನಾಗಿ ಪರಿಚಯವಿದ್ದಿತು."

"ಅವರ ವಯಸ್ಸೆಷ್ಟು ?"

ಹರಿದಯಾಲರು ಮನದಲ್ಲಿಯೆ ನಕ್ಕು "ಸುಮಾರು ೬೦ ವರ್ಷಗಳಾದರೂ ಇರಬಹುದು ಅವರಿಗೆ. ಸರಯೂನನ್ನು ಅವರು ಮಗಳ ಹಾಗೆ ತಿಳಿದು ಕೊಂಡಿದ್ದಾರೆ" ಎಂದರು.

"ಅಲ್ಲಿ ಮತ್ತೆ ಯಾರು ಇದ್ದಾರೆ ?"

"ಒಬ್ಬ ಕೆಲಸದವಳು, ಸರಯೂ ಮತ್ತು ವಿಶೂ."

"ವಿಶೂ ಯಾರು ?"

"ಸರಯೂನ ಮಗ."

ಚಂದ್ರನಾಥ ಎದ್ದು ನಿಂತು "ಇನ್ನು ನಾನು ಹೊರಡುತ್ತೇನೆ" ಎಂದ.

ಹರಿದಯಾಲರು ಅವನನ್ನು ತಡೆಯಲಿಲ್ಲ. ಚಂದ್ರನಾಥ ಮೆಲ್ಲಮೆಲ್ಲನೆ ಹೊರಟುಹೋದ. ಆ ಓಣಿಯ ಕೊನೆಗೆ ಬಂದು ಒಬ್ಬರನ್ನು "ಕೈಲಾಸ ಬಾಬುಗಳು ಯಾವ ಮನೆಯಲ್ಲಿದ್ದಾರೆ ಗೊತ್ತಿದೆಯೆ ತಮಗೆ ?" ಎಂದು ಕೇಳಿದ.

ಅವರು ಬೆರಳಿನಿಂದ ಮನೆ ತೋರಿಸಿದರು. ಚಂದ್ರನಾಥ ಒಮ್ಮೆಲೆ ಒಳಗೆ ಹೋದ. ಎದುರಿಗೆ ಯಾರೂ ಕಣ್ಣಿಗೆ ಬೀಳಲಿಲ್ಲ. ಆದರೆ ಹೌದು, ಒಂದು ಹೃಷ್ಟ ಪುಷ್ಟ ಮಗು—ಸುಂದರ ಮಗು—ಕೈಯಲ್ಲಿ ಒಂದು ಲೋಟ ನೀರು ಹಿಡಿದುಕೊಂಡು ಕುಡಿಯುತ್ತ ಮೈ ತೋಯಿಸಿಕೊಳ್ಳುತ್ತ ಕುಳಿತಿದ್ದಿತು; ನಡುನಡುವೆ, ಥಾಲಿಯ ನೀರಿನಲ್ಲಿ ನಡುಗುತ್ತಿರುವ ತನ್ನ ಮುಖವನ್ನು ನೋಡಿ ನೋಡಿ ಆನಂದ ಪಡುತಿದ್ದಿತು. ಚಂದ್ರನಾಥ ಕೂಡಲೆ ಆ ಮಗುವನ್ನು ಎತ್ತಿಕೊಂಡು ಕಿರುಮನೆಯನ್ನು ಪ್ರವೇಶಿಸಿದ. ಹುಡುಗನಿಗೆ ಆಶ್ಚರ್ಯವೂ ಆಗಲಿಲ್ಲ, ಹೆದರಿಕೆಯೂ ಆಗಲಿಲ್ಲ. ಗುರುತಿಲ್ಲದ ಜನರ ಹತ್ತಿರ ಹೋಗುವುದು ಅಭ್ಯಾಸವಾಗಿಬಿಟ್ಟಿತ್ತೇನೋ ಆ ಬಾಲಕನಿಗೆ? ಆ ಮಗು ತನ್ನ ಚಿಕ್ಕದಾದ ಕೋಮಲ ಕೈಯನ್ನು ಚಂದ್ರನಾಥನ ಮೂಗಿನ ಮೇಲಿಟ್ಟು "ನೀನು ಯಾರು ?" ಎಂದು ಕೇಳಿತು.

ಚಂದ್ರನಾಥ ಅತ್ಯಂತ ಸ್ನೇಹದಿಂದ ಆ ಹುಡುಗನಿಗೆ ಮುದ್ದಿಟ್ಟು "ನಾನು....ನಾನು....ಅಪ್ಪ" ಎಂದ.

"ಅಪ್ಪ ?"

"ಹೌದು, ಅಪ್ಪ. ನೀನು ಯಾರು ?"

"ನಾನು ವಿಶೂ."

ಚಂದ್ರನಾಥ ತನ್ನ ಗಡಿಯಾರ, ಸರಪಳಿ ತೆಗೆದು ಅವನ ಕೊರಳಲ್ಲಿ ಹಾಕಿದ. ತನ್ನ ಬೊಕ್ಕಣದೊಳಗಿನ ಚಾಕು, ಪೆನ್ಸಿಲು, ಹಣದ ಚೀಲ ಎಲ್ಲವನ್ನು

ಹೊರಗೆ ತೆಗೆದು ಅವನ ಕೈಯಲ್ಲಿ ಕೊಟ್ಟ. ಈಗ ಅವನ ಬಳಿಯಲ್ಲಿ ತನ್ನ ಮಗುವಿನ ಕೈಯಲ್ಲಿ ಕೊಡಬೇಕೆಂದರೆ ಏನೂ ಉಳಿಯಲಿಲ್ಲ. ಇದ್ದುದೆಲ್ಲ ವನ್ನೂ ಕೊಟ್ಟುಬಿಟ್ಟದ್ದ.

ಅದೆಷ್ಟೊ ಸಾಮಾನುಗಳನ್ನು ಕೈಯಲ್ಲಿ ಹಿಡಿದುಕೊಂಡು ವಿಶೂ ಪುಳಕಿತನಾಗಿ "ಅಪ್ಪಾ!" ಎಂದ.

ಚಂದ್ರನಾಥ ಅವನ ಚಿಕ್ಕ ಮುಖವನ್ನು ತನ್ನ ಮುಖಕ್ಕೆ ತಗಲಿಸಿಕೊಂಡು ''ಮಗೂ!'' ಎಂದ.

ಇಷ್ಟರಲ್ಲಿ ದಾಸಿಯೊಬ್ಬಳು ಇದೆಲ್ಲವನ್ನು ನೋಡಿ ಗಲಭೆ ಎಬ್ಬಿಸಿದಳು. ಯಾರೊ ಸಾಹೇಬರು ಮನೆಯಲ್ಲಿ ಬಂದಿದ್ದುದನ್ನೂ, ವಿಶೂನನ್ನು ಎತ್ತಿಕೊಂಡು ಅತ್ತಿತ್ತ ಅಲೆದಾಡುತ್ತಿದ್ದುದನ್ನೂ ಅವಳು ನೋಡಿ ಒಂದೇ ಉಸುರಿಗೆ ಅಡುಗೆಮನೆಗೆ ಓಡಿದಳು. ಮನೆಯಲ್ಲಿ ಕೈಲಾಸಬಾಬುಗಳಿರಲಿಲ್ಲ. ಬಹಳ ದಿನಗಳ ಮೇಲೆ ಈದಿವ ಅವರು ವಿಶ್ವೇಶ್ವರನ ದರ್ಶನಕ್ಕೆ ಹೋಗಿದ್ದರು. ಸ್ವಲ್ಪ ಮೊದಲು ಸರಯೂ ಕೂಡ ದರ್ಶನ ತೆಗೆದುಕೊಂಡು ಬಂದು ಅಡುಗೆ ಮಾಡುತ್ತಿದ್ದಳು. ದಾಸಿ ಗಾಬರಿಯಿಂದ ಉಸಿರುಬಿಡುತ್ತಾ ಬಂದು "ಅಮ್ಮಾ!" ಎಂದಳು.

"ಏನು ?"

"ಮನೆಯಲ್ಲಿ ಯಾರೊ ಸಾಹೇಬರು ಬಂದಿದ್ದಾರೆ. ವಿಶೂನನ್ನು ಎತ್ತಿಕೊಂಡು ತಿರುಗಾಡುತ್ತಿದ್ದಾರೆ'' - ಅವಳು ಗಾಬರಿಯಿಂದಲೇ ಹೇಳಿದಳು.

ಸರಯೂ ಚಕಿತಳಾಗಿ "ಯಾರಿರಬಹುದು ?" ಎನ್ನುತ್ತ ಹೊರಗೆ ಬಂದು ಬಾಗಿಲ ಮರೆಗೆ ನಿಂತು ನೋಡತೊಡಗಿದಳು. ಆದರೆ ಸರಿಯಾಗಿ ಕಾಣಲಿಲ್ಲ.

ದಾಸಿಯು ಅವಳ ಸೆರಗು ಹಿಡಿದು ಎಳೆದು ''ಇರಲಿ, ನೀನು ಅಲ್ಲಿಗೆ ಹೋಗಬೇಡ. ಬಾಬುಗಳೇ ಬರಲಿ'' ಎಂದಳು.

ಸರಯೂ ಅವಳ ಮಾತಿನ ಮೇಲೆ ವಿಶ್ವಾಸವಿಡಲಿಲ್ಲ. ಇನ್ನಿಷ್ಟು ಮುಂದಕ್ಕೆ ಹೋಗಿ ನೋಡಿದಳು. ದಾಸಿಯ ಮಾತು ಸುಳ್ಳೆನಿಸಲಿಲ್ಲ. ಸಾಹೇಬರೊಬ್ಬರು ವಿಶೂನನ್ನು ಎತ್ತಿಕೊಂಡು ಅವನೊಡನೆ ಮೆಲ್ಲನೆ ಮಾತನಾಡುತ್ತಿದ್ದಾರೆ. ಅವಳು ಒಳ್ಳೇ ಧೈರ್ಯದಿಂದ ಕಿಟಕಿಯ ಹತ್ತಿರ ಬಂದಳು.

ನೆರಳು ನೋಡಿ ಯಾರನ್ನು ಗುರುತಿಸುತ್ತಿದ್ದಳೊ ಅವರನ್ನು ಪ್ರತ್ಯಕ್ಷ ನೋಡಿ ಗುರುತಿಸಲಾರಳೆ ? ಅವರು ತನ್ನ ಸ್ವಾಮಿಯಾದ ಚಂದ್ರನಾಥರೆ ಎಂದು ಅರಿತಳು !

ಕೂಡಲೆ ತಲೆಗೆ ಸೆರಗು ಎಳೆದುಕೊಂಡು ಅವರ ಬಳಿ ಸಾರಿ ಅವರ ಪಾದಕ್ಕೆರಗಿ ಸ್ವಲ್ಪ ಹಿಂದಕ್ಕೆ ಸರಿದು ನಿಂತಳು.

ಚಂದ್ರನಾಥ "ಸರಯೂ !" ಎಂದ.

೧೭

ಗಂಡಹೆಂಡಿರಲ್ಲಿ ಮಾತುಕತೆಗಳಿಗೆ ಆರಂಭವಾಯಿತು. "ಬಹಳ ಸೊರಗಿ ಹೋಗಿದ್ದೀಯಾ !" ಎಂದ ಚಂದ್ರನಾಥ.

ಸರಯೂ ಚಂದ್ರನಾಥನ ಮುಖದ ಕಡೆಗೆ ನೋಡಿ ನಸುನಕ್ಕಳು- ತಾನು ಸೊರಗಿದುದರಲ್ಲಿ ಆಶ್ಚರ್ಯವೇನೆಂದು ಹೇಳಲಿಕ್ಕೊ ಏನೊ ! ಈಗ ಚಂದ್ರನಾಥ ವಿಶೂನ ಕೂಡ ಆಡುವುದರಲ್ಲಿಯೆ ತೊಡಗಿದ. ಸರಯೂ ಚಂದ್ರನಾಥನ ಬೂಟು, ಕೋಟುಗಳನ್ನು ಬಿಚ್ಚಿ ಗಾಳಿ ಬೀಸಿದಳು. ಅಂಗವಸ್ತ್ರವನ್ನು ಒದ್ದೆ ಮಾಡಿ ಅದರಿಂದ ಅವನ ಕಾಲುಗಳನ್ನು ತೊಳೆದಳು. ಇದು ತನ್ನ ಕರ್ತವ್ಯ ಕರ್ಮ, ದಿನವೂ ಮಾಡುತ್ತಿರುವ ಕೆಲಸ ಎಂಬ ಭಾವನೆಯಿಂದ ಮಾಡುವಂತೆ ಮಾಡಿದಳು. ಈ ಜೀವನದಲ್ಲಿಯೆ ಯಾರ ದರ್ಶನದ ಆಸೆಯೆ ಇರಲಿಲ್ಲವೊ ಅಂತಹ ತನ್ನ ಹೃದಯೇಶ್ವರ ಇಂದು ಎಷ್ಟೋ ದಿನಗಳ ಮೇಲೆ ಅಕಸ್ಮಾತ್ ಬಂದಿದ್ದಾನೆ. ಇಂದು ಅವಳಿಗೆ ಹೃದಯದೊಳಗಿನ ದುಃಖವೆಲ್ಲವೂ ಉಕ್ಕಿ ಬರಬೇಕಾಗಿದ್ದಿತು. ದೀರ್ಘ ನಿಶ್ವಾಸವೊಂದು ಹೊರಡಬೇಕಾಗಿದ್ದಿತು. ಆದರೆ ಹಾಗೇನೂ ಆಗಲಿಲ್ಲ. ತನ್ನ ಪತಿ ದಿನವೂ ತನ್ನ ಬಳಿ ಬರುತ್ತಿರುವಂತೆ ಇಂದೂ ಬಂದಿದ್ದಾನೆ. ಇಂದು ಮಾತ್ರ ಸ್ವಲ್ಪ ತಡಮಾಡಿ ಬಂದಿದ್ದಾನೆ ಅಷ್ಟೆ, ಎಂಬಂತೆ ಅವಳಿಗೆ ತೋರಿತು.

ಚಂದ್ರನಾಥನ ರೀತಿ ಬೇರೆ ತರವಾಗಿ ಕಾಣುತ್ತಿದೆ. ಅವನು ವಿಶೂನನ್ನು ಪ್ರೀತಿಸುವುದನ್ನು ನೋಡಿದರೆ ಈ ಮನೆಯಲ್ಲಿ ಅವನನ್ನು ಇಷ್ಟು ಪ್ರೀತಿಸುವವರು ಯಾರೂ ಇಲ್ಲವೇನೊ ಎಂದೆನಿಸುತ್ತದೆ. ಅಲ್ಲದೆ ನೋಡುವವರಿಗೆ

ಅವನ ಪ್ರೀತಿ ಕೃತ್ರಿಮ ಎನಿಸುವಂತಿದ್ದಿತು. ಆ ಕಿರುಮನೆಯಲ್ಲಿ ವಿಶೂನ ಹೊರತಾಗಿ ಯಾರೂ ಇರಲಿಲ್ಲ. ಇದ್ದುದಾಗಿದ್ದರೆ ತನ್ನ ಅಪರಾಧವನ್ನು ತಾನೇ ಮರೆತುಬಿಡಬೇಕೆಂದು ಅವನು ವಿಶೂನನ್ನು ಇಷ್ಟು ಪ್ರೀತಿಸುತಿದ್ದಾನೆ, ಎಂದು ಅವರು ಎನ್ನಬಹುದಾಗಿದ್ದಿತು.

ಸರಯೂ ವಿಶೂನಿಗೆ "ಹೋಗು ಮಗು, ಆಡು" ಎಂದಳು.

ವಿಶೂ ಮಂಚದಿಂದ ಕೆಳಗೆ ಇಳಿಯಲು ಹೆಣಗುತ್ತಿದ್ದ. ಚಂದ್ರನಾಥ ಯತ್ನಪೂರ್ವಕವಾಗಿ ಅವನನ್ನು ಕೆಳಗೆ ಇಳಿಸಿದ. ಇದಕ್ಕೂ ಮೊದಲು ತನ್ನ ತಾಯಿ ಚಂದ್ರನಾಥನಿಗೆ ನಮಸ್ಕರಿಸುವುದನ್ನು ವಿಶೂ ನೋಡಿದ್ದ. ತಾನೂ ಅದೇ ಪ್ರಕಾರ ತಂದೆಗೆ ತಲೆ ಬಗ್ಗಿಸಿ ನಮಸ್ಕರಿಸಿ ಅಲ್ಲಿಂದ ಓಡಿಹೋದ. ಚಂದ್ರನಾಥ ಅವನನ್ನು ಹಿಡಿಯಲು ಯತ್ನಿಸಿದ. ಆದರೆ ಅವನು ಸಿಕ್ಕದೆ ಓಡಿಬಿಟ್ಟ.

ಸರಯೂ ಚಂದ್ರನಾಥನ ಮೈ ಕೈ ಮುಟ್ಟಿನೋಡಿ "ಮೂಳೆಗಳೆ ಇವೆಯಲ್ಲ ಮೈಯಲ್ಲಿ? ಏನು ಬೇನೆ ಬಿದ್ದಿದ್ದಿರಾ?" ಎಂದಳು.

"ಇಲ್ಲ. ಹಾಗೇನೂ ಇಲ್ಲ."

"ಹಾಗಾದರೆ ಬಹಳ ಚಿಂತೆ ಮಾಡುತ್ತಿದ್ದಿರೇನು?"

ಆಕೆಯ ಮುಖವನ್ನು ನೋಡುತ್ತ "ನಿನಗೇನು ತೋರುತ್ತದೆ?" ಎಂದ ಚಂದ್ರನಾಥ.

ಸರಯೂ ಈ ಮಾತಿಗೆ ಉತ್ತರ ಕೊಡದೆ ಬೇರೊಂದು ವಿಷಯವನ್ನೆತ್ತಿದಳು—"ನಡೆಯಿರಿ ವೇಳೆಯಾಗಿದೆ, ಸ್ನಾನಮಾಡಿರಿ."

"ಈ ಮನೆಯ ಯಜಮಾನರೆಲ್ಲಿ?"

"ವಿಶ್ವನಾಥ ಮಂದಿರಕ್ಕೆ ಪೂಜೆಗೆ ಹೋಗಿದ್ದಾರೆ. ಸಂಜೆಯಾದ ಮೇಲೆ ಬರಬಹುದು."

"ನೀನು ಅವರನ್ನು ಏನೆಂದು ಕರೆಯುತ್ತಿ?"

"ಮೊದಲು ಮುತ್ತಜ್ಜ ಎನ್ನುತ್ತಿದ್ದೆ. ಈಗಲೂ ಹಾಗೆಯೆ ಕೂಗುತ್ತೇನೆ."

ಚಂದ್ರನಾಥ ಮತ್ತೇನೂ ಕೇಳಲಿಲ್ಲ. ಸರಯೂನೇ ಕೇಳಿದಳು - "ಸಂಗಡ ಮತ್ತೆ ಯಾರೂ ಬಂದಿಲ್ಲವೆ?"

"ಹರಿ ಮತ್ತು ಮಾಧು ಇಬ್ಬರು ಆಳುಮಕ್ಕಳು ಬಂದಿದ್ದಾರೆ. ಅವರು ಪ್ರವಾಸಿಗರ ಬಂಗಲೆಗೆ ಹೋಗಿದ್ದಾರೆ."

"ಅವರನ್ನು ಇಲ್ಲಿಗೆ ಕರೆದುಕೊಂಡು ಬರಲು ಸಾಹಸವಾಗಲಿಲ್ಲವೇನು ?"

ಚಂದ್ರನಾಥ ಈ ಮಾತಿಗೆ ಉತ್ತರವನ್ನೀಯಲಿಲ್ಲ.

ಚಂದ್ರನಾಥ ಊಟಕ್ಕೆ ಕುಳಿತಾಗ ಎದುರಿಗೆ ಪುರಿ ಬಡಿಸಿದ ತಟ್ಟೆಯನ್ನು ನೋಡಿ ಆತನಿಗೆ ವಿಸ್ಮಯವಾಯಿತು. ಅವನು ಸ್ವಲ್ಪ ಬೇಸರದಿಂದ ತಟ್ಟೆಯನ್ನು ಸರಿಸುತ್ತ "ದಿನದ ಅಡುಗೆ ಮಾಡದೆ ಅತಿಥಿಗಳ ಹಾಗೆ ಪುರಿ ಬಡಿಸಿ ಹಾಸ್ಯ ಮಾಡುವೆಯಾ ?" ಎಂದ.

ಸರಯೂ ದಿಙ್ಮೂಢಳಾಗಿ "ಅದೇನು, ಪುರಿ ತಿನ್ನುವುದಿಲ್ಲವೆ ?" ಎಂದಳು.

ಚಂದ್ರನಾಥ ಸ್ವಲ್ಪ ಹೊತ್ತು ಸರಯೂನ ಕಡೆಗೆ ನೋಡಿ "ಮಧ್ಯಾಹ್ನ ಎಂದಾದರೂ ಪುರಿ ತಿನ್ನುತ್ತೇನೇನು ?" ಎಂದ.

ಸರಯೂ ಮುಖ ಚಿಕ್ಕದು ಮಾಡಿಕೊಂಡು ಸುಮ್ಮನಾದಳು.

"ಇದೇ ಮೊದಲನೆಯ ದಿನವಲ್ಲ ನೀನು ನನಗೆ ಊಟಕ್ಕೆ ಬಡಿಸುತ್ತಿರುವುದು. ನಾನು ಏನು ಊಟಮಾಡುತ್ತೇನೆಂಬುದನ್ನು ನೀನು ಮರೆತಿರಲಿಕ್ಕಿಲ್ಲ."

ಸರಯೂನ ಕಣ್ಣಿನಿಂದ ಹನಿ ಉರುಳಿತು. ಇನ್ನು ಆ ದಿನಗಳು ಕಳೆದು ಹೋದುವೆಂದು ಅವಳು ಭಾವಿಸಿದಳು. ಆದುದರಿಂದಲೆ ಕೇಳಿದಳು – "ಅನ್ನ ಊಟ ಮಾಡುತ್ತೀರೇನು ? ಆದರೆ—"

"ಆದರೇನು ? ಅನ್ನ ಮಾಡಿಲ್ಲವೇ ?"

"ಇಲ್ಲಿಯೂ ಅನ್ನ ಮಾಡುತ್ತೇನೆ."

"ಮನೆಯಲ್ಲಿಯೂ ಅನ್ನ ಮಾಡುತ್ತಿದ್ದೆ."

ಸರಯೂ ಸ್ವಲ್ಪ ಹೊತ್ತು ಬಿಟ್ಟು "ನಾನು ಮಾಡಿದ ಅನ್ನ ಉಣ್ಣುವಿರಾ ನೀವು ?" ಎಂದಳು.

ಚಂದ್ರನಾಥ ತಲೆತಗ್ಗಿಸಿದ. ಸರಯೂ ಈಗ ಪರಕೀಯಳು, ಅವಳು ಮಾಡಿದ ಅನ್ನ ತಾನು ಉಣ್ಣುವಂತಿಲ್ಲ, ಎಂಬುದರ ಅರಿವು ಅವನಿಗಿರಲಿಲ್ಲ. ಸರಯೂನ ಮಾತಿನಲ್ಲಿ ಒಂದು ಬಗೆಯ ಜ್ವಾಲೆಯಿದ್ದಿತು. ಮೊದಲು

ಅವನು ಸುಮ್ಮನೆ ಕುಳಿತಿದ್ದ; ಬಳಿಕ ಮೆಲ್ಲನೆ ''ಸರಯೂ, ಇಂತಹ ಮಧ್ಯಾಹ್ನದಲ್ಲಿ ನನ್ನ ಕಣ್ಣೊಳಗೆ ನೀರು ನೋಡಿದ ಹೊರತು ನಿನಗೆ ತೃಪ್ತಿಯಾಗುವುದಿಲ್ಲವೆ ? " ಎಂದ.

ಸರಯೂ ಚಟ್ಟನೆದ್ದು "ಸರಿ, ಈಗಲೇ ತೆಗೆದುಕೊಂಡು ಬರುತ್ತೇನೆ " ಎಂದಳು.

ಒಳಗೆ ಹೋಗಿ ಅವಳು ಮನದಣಿಯಾಗಿ ಅತ್ತಳು. ಬಳಿಕ ಕಣ್ಣೀರು ಒರೆಸಿಕೊಂಡು ಮುಖಮಾರ್ಜನ ಮಾಡಿಕೊಂಡಳು. ಆದರೂ ಕಂಬನಿಯ ಧಾರೆ ನಿಲ್ಲಲೊಲ್ಲದು ; ಮನಸ್ಸಿಗೆ ಸಮಾಧಾನವಾಗಲೊಲ್ಲದು. ಕೊನೆಗೆ ತನ್ನ ಸ್ವಾಮಿ ಹಸಿದಿರುವುದನ್ನು ತಿಳಿದು ತಟ್ಟೆಯೊಂದಿಗೆ ಹೊರಗೆ ಬಂದಳು. ಮೊದಲು ಎದುರಿಗೆ ಕುಳಿತು ಅವನಿಗೆ ಊಟಕ್ಕೆ ಹಾಕುತ್ತಿದ್ದಂತೆಯೆ ಈ ಹೊತ್ತೂ ಎದುರಿನಲ್ಲಿ ಕುಳಿತು ಬಡಿಸಿದಳು. ಚಂದ್ರನಾಥ ಊಟಮಾಡಿ ಎದ್ದಮೇಲೆ ತಟ್ಟೆಯನ್ನು ಎತ್ತಿಕೊಂಡು ಮತ್ತೊಮ್ಮೆ ಅತ್ತು ಹೃದಯವನ್ನು ಹಗುರು ಮಾಡಿಕೊಳ್ಳಲು ಅಡುಗೆಮನೆಗೆ ಹೋದಳು.

ಎರಡು ಗಂಟೆಯಾಗಿದೆ. ಚಂದ್ರನಾಥನ ತೊಡೆಯ ಮೇಲೆ ವಿಶೂ ಆನಂದದಿಂದ ಪವಡಿಸಿದ್ದಾನೆ. ಇಷ್ಟರಲ್ಲಿ ಸರಯೂ ಬಂದಳು. ಆಗ "ಎಲ್ಲ ಕೆಲಸ ಆಗಿಹೋಯಿತೆ ?" ಎಂದು ಕೇಳಿದ ಚಂದ್ರನಾಥ.

''ಕೆಲಸವೇನೂ ಅಷ್ಟೊಂದು ಇರಲಿಲ್ಲ. ತಾತಯ್ಯನವರು ಇನ್ನೂ ಏಕೆ ಬರಲಿಲ್ಲವೊ ? ''

ಬಳಿಕ ಸರಯೂ ಮನೆತನದ ಮಾತುಕತೆ ಪ್ರಾರಂಭಿಸಿದಳು. ತನ್ನ ಮನೆಯ ಪ್ರತಿಯೊಂದು ಕೋಣೆ, ಸಾಮಾನು, ಆಳುಮಕ್ಕಳು, ಗೆಳತಿ ಹರಿಬಾಲೆ ಮೊದಲಾದ ಎಲ್ಲ ವಿಷಯ—ವ್ಯಕ್ತಿಗಳ ಬಗೆಗೂ ಕೇಳಿ ತಿಳಿದುಕೊಂಡಳು. ಈ ಎಲ್ಲ ಸಂಗತಿ ಕೇಳುವುದರಿಂದ ಸರಯೂನಿಗೆ ಏನೂ ಲಾಭವಿಲ್ಲ, ಅಥವಾ ಈ ಎಲ್ಲವನ್ನೂ ಹೇಳುವುದರಿಂದ ಚಂದ್ರನಾಥನಿಗೆ ಕಸಿವಿಸಿಯಾಗಬಹುದು, ತಮ್ಮಿಬ್ಬರಿಗೂ ಸ್ವಲ್ಪ ನಾಚಿಕೆ, ಸ್ವಲ್ಪ ಅಭಿಮಾನ, ಸ್ವಲ್ಪ ಸಂಕೋಚ ಎನಿಸಬಹುದು, ಎಂಬುದು ಇಷ್ಟು ಹೊತ್ತಿನ ವರೆಗೆ ಅವರಿಬ್ಬರಿಗೂ

ತೋರಲಿಲ್ಲ. ಒಬ್ಬರು ಅತಿ ಆನಂದದಿಂದ ಪ್ರಶ್ನೆ ಕೇಳುತ್ತಿದ್ದರು. ಇನ್ನೊಬ್ಬರು ಬಹಳ ಉತ್ಸಾಹದಿಂದ ಉತ್ತರ ಕೊಡುತ್ತಿದ್ದರು. ಬಹು ದಿನಗಳ ವರೆಗೆ ಅಗಲಿ ಇಂದು ಪುನಃ ಕೂಡಿದ ಪ್ರಾಣಮಿತ್ರರಂತೆ ಅವರು ತೋರುತಿದ್ದರು.

ಸರೂಯು ಒಮ್ಮೆಲೆ ಕೇಳಿದಳು—"ನೀವು ಮದುವೆ ಎಲ್ಲಿ ಮಾಡಿ ಕೊಂಡಿರಿ?" – ನಗೆಯಾಡಲು ಕೇಳುತ್ತಿದ್ದಳೇನೊ!

ಚಂದ್ರನಾಥನೆಂದ—"ಪಶ್ಚಿಮದ ಕಡೆಯ ಒಂದು ಹುಡುಗಿಯೊಡನೆ."

"ಅವಳು ಹೇಗಿದ್ದಾಳೆ?"

"ನಿನ್ನ ಹಾಗೆಯೆ."

ಈಗ ಸರಯೂನ ಹೃದಯದಲ್ಲಿ ಏನೊ ಒಂದು ವೇದನೆಯಾದಂತೆ ತೋರಿತು. ಅವಳಿಗೆ ತನ್ನ ಮೈಮೇಲಿನ ಎಚ್ಚರವೇ ಉಳಿಯಲಿಲ್ಲ. ಕುಳಿತ ವಳು ಹಾಗೆಯೆ ಹಿಂದಕ್ಕೆ ಬಿದ್ದುಬಿಟ್ಟಳು. ಮುಖದ ಮೇಲಿನ ಕಳೆಯು ಒಮ್ಮೆಲೆ ಕಂದಿಹೋಯಿತು.

ಚಂದ್ರನಾಥ ಗಾಬರಿಯಾಗಿ ಮಂಚದಿಂದ ಕೆಳಗಿಳಿದು ಬಂದು ಅವಳ ಕೈಹಿಡಿದು ಎಬ್ಬಿಸಲು ಯತ್ನಿಸಿದ. ಆದರೆ ಸಶಯೂ ಎಚ್ಚರದಪ್ಪಿ ಬಿದ್ದು ಬಿಟ್ಟಿದ್ದಳು. ಆಗ ಅವಳ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಅಳುತ್ತ ಕೂಗಲಾರಂಭಿಸಿದ—"ಸರಯೂ! ಸರಯೂ!" ಎಂದು.

ಸರಯೂ ಕಣ್ದೆರೆದಳು. ಕ್ಷಣಹೊತ್ತು ಪತಿಯ ಮುಖವನ್ನು ನೋಡಿ ಪುನಃ ಕಣ್ಣು ಮುಚ್ಚಿಕೊಂಡಳು. ಅವಳ ತುಟಿಗಳು ಅಲುಗುತ್ತಿದ್ದುವು. ಹೇಳುತ್ತಿದ್ದ ಮಾತು ಅಸ್ಪಷ್ಟವಾಗಿದ್ದುದರಿಂದ ಏನೆಂದು ತಿಳಿಯಲಿಲ್ಲ.

ಚಂದ್ರನಾಥ ಹೆದರಿ "ನೀರು, ನೀರು" ಎಂದು ಕೂಗತೊಡಗಿದ. ದಾಸಿ ಬಳಿಯಲ್ಲಿಯೆ ಇದ್ದಳು. ಅವಳೆ ಎದ್ದುಹೋಗಿ ಬೇಗನೆ ನೀರು ತಂದು ಕೊಟ್ಟಳು. ಆದರೆ ಗಾಬರಿಯಾಗದೆ "ಅಣ್ಣಾ, ಸ್ವಲ್ಪ ಹೊತ್ತಿನಲ್ಲಿ ಗುಣ ವಾಗುವುದು. ಆಗಾಗ ಹೀಗೆಯೆ ಆಗುತ್ತಿರುತ್ತದೆ ಇವಳಿಗೆ" ಎಂದಳು.

ಸರಯೂನ ಮುಖಕ್ಕೆ ಕಣ್ಣಿಗೆ ನೀರು ತಟ್ಟಿದರು, ಗಾಳಿ ಬೀಸಿದರು. ಆಗ ವಿಶೂ ಎದ್ದು ಬಂದು ಆಕೆಯ ಕೂದಲು ಹಿಡಿದೆಳೆಯುತ್ತ "ಅಮ್ಮಾ!" ಎಂದ.

ಸರಯೂಗೆ ಎಚ್ಚರವಾಯಿತು. ಅವಳು ನಾಚಿಕೆಯಿಂದ ತಲೆಯ ಮೇಲೆ ಸೆರಗು ಹೊದ್ದುಕೊಳ್ಳುತ್ತ ಎದ್ದು ಕುಳಿತಳು. ದಾಸಿ ತನ್ನ ಕೆಲಸಕ್ಕೆ ಹೋಗಿಬಿಟ್ಟಳು. ಚಂದ್ರನಾಥನ ಮುಖ ಹೆದರಿಕೆಯಿಂದ ಕಪ್ಪಾಗಿದ್ದಿತು.

ಸರಯೂ ಎಳೆನಗು ಬೀರಿ, ಅತ್ಯಂತ ಕೋಮಲವಾದ ದನಿಯಿಂದ "ಏನು, ಹೆದರಿಬಿಟ್ಟಿದ್ದಿರಾ ?" ಎಂದಳು.

ಚಂದ್ರನಾಥನ ಕಣ್ಣುಗಳಲ್ಲಿ ಕಂಬನಿಗಳು ಉಯ್ಯಾಲೆಯಾಡಿ ಉದುರುದುರಿ ಕೆಳಗೆ ಬೀಳುತ್ತಿದ್ದುವು. ಅವನು ಅವನ್ನು ಒರೆಸಿಕೊಳ್ಳುತ್ತ "ಇನ್ನೇನು ಕೆಲಸ ಮುಗಿಯಿತೆಂದೇ ತಿಳಿದುಕೊಂಡಿದ್ದೆ" ಎಂದ.

ನಿಮ್ಮ ತೊಡೆಯ ಮೇಲೆ ಸತ್ತಿದ್ದರೆ ನನ್ನ ಸೌಭಾಗ್ಯಕ್ಕೆ ಎಣೆಯಿತ್ತೆ? ಎಂದು ಮನದಲ್ಲಿಯೆ ಯೋಚಿಸಿಕೊಂಡು "ಆಗಾಗ ಹೀಗಾಗುತ್ತಿರುತ್ತದೆ" ಎಂದಳು ಚಂದ್ರನಾಥನಿಗೆ.

"ಮೊದಲು ಹೀಗೆ ಆಗುತ್ತಿರಲಿಲ್ಲ, ಈಗ ಆಗುತ್ತಿದೆ ಎಂಬುದನ್ನು ನೋಡುತ್ತಿದ್ದೇನೆ."

ಚಂದ್ರನಾಥ ಬಹಳ ಹೊತ್ತು ಸುಮ್ಮನಿದ್ದ. ಬಳಿಕ ತನ್ನ ಬೊಕ್ಕಣದೊಳಗಿಂದ ತುಕ್ಕುಹಿಡಿದ ಬೀಗದಕ್ಕೈ ಸರವನ್ನು ಹೊರತೆಗೆದು, ಅವಳ ಸೆರಗಿನ ತುದಿಯಲ್ಲಿ ಕಟ್ಟುತ್ತ "ಇಕೊ ಈ ಬೀಗದ ಕೈ ಗೊಂಚಲು. ನನಗೊಪ್ಪಿಸಿ ಹೊರಟು ಬಂದಿದ್ದಿ, ಇಂದು ತಿರುಗಿ ನಿನಗೊಪ್ಪಿಸುತಿದ್ದೇನೆ. ನೋಡು, ಇವನ್ನೊಂದಾದರೂ ಉಪಯೋಗಿಸಿರುವೆನೇನೊ ?" ಎಂದ.

ಅವು ಉಪಯೋಗವಾಗದೆ ಇದ್ದುದನ್ನು ನೋಡಿ "ಇವನ್ನು ಅವಳಿಗೇಕೆ ಕೊಡಲಿಲ್ಲ ?" ಎಂದಳು ಸರಯೂ.

ಚಂದ್ರನಾಥನ ಮಲಿನ ಶುಷ್ಕ ಮುಖದಲ್ಲಿ ಅಕೃತ್ರಿಮ ನಗೆಯೊಂದು ನಲಿಯಿತು. ಅವನ ಕಣ್ಣುಗಳಲ್ಲಿ ಸ್ನೇಹದ ಹನಿಗಳು ಆಡತೊಡಗಿದವು. ಅವನು ಅವುಗಳನ್ನು ತಡೆದುಕೊಂಡು "ಅವಳಿಗೇ ಕೊಟ್ಟಿದ್ದೇನೆ ಸರಯೂ !" ಎಂದ.

ಸರಯೂಗೆ ಚನ್ನಾಗಿ ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತು ಸ್ನೇಹಪೂರ್ವಕವಾಗಿ ಚಂದ್ರನಾಥನ ಮುಖವನ್ನು ನೋಡಿ ಕೋಮಲ ಸ್ವರದಲ್ಲಿ

"ನಾನು ನಿಮ್ಮ ಹೊಸ ಹೆಂಡತಿಯ ವಿಚಾರವಾಗಿ ಕೇಳುತಿದ್ದೇನೆ. ಅವಳಿಗೇಕೆ ಈ ಬೀಗದಕ್ಕೆ ಗೊಂಚಲು ಕೊಡಲಿಲ್ಲ?" ಎಂದಳು.

ಚಂದ್ರನಾಥನಿಗೆ ಪ್ರೀತಿ ಉಕ್ಕೇರಿ ಬಂದಿತು. ಕೂಡಲೆ ಅವಳನ್ನು ತನ್ನ ಕಡೆ ಸೆಳೆದು ಅಪ್ಪಿಕೊಂಡು "ಅವಳಿಗೇ ಕೊಟ್ಟಿದ್ದೇನೆ, ಸರಯೂ. ನನಗೆ ಇಬ್ಬರು ಹೆಂಡಿರಿಲ್ಲ. ಒಬ್ಬಳೇ. ಅವಳು ಎಂದೂ ಮುದುಕಿಯಾಗುವುದಿಲ್ಲ. ಹೊಸಬಳೆ ಇರುತ್ತಾಳೆ ಯಾವಾಗಲೂ. ಮೊದಲು ನಾನು ಇದೇ ಕಾಶಿಯಲ್ಲಿ ವಿಶ್ವನಾಥನ ಪ್ರಸಾದಪುಷ್ಪದಂತೆ ಪಡೆದು ಕರೆದುಕೊಂಡು ಹೋಗಲು ಬಂದಾಗ ಅವಳು ಹೇಗೆ ಇದ್ದಳೋ ಈಗ ವಿಶ್ವನಾಥನ ಚರಣಗಳ ಬಳಿಯಿಂದ ಕರೆದುಕೊಂಡು ಹೋಗಲು ಬಂದಿದ್ದಾಗಲೂ ಹಾಗೆಯೇ ಇದ್ದಾಳೆ" ಎಂದ.

* * *

ಸಾಯಂಕಾಲವಾಯಿತು. ದೀಪ ಹಚ್ಚಿ ವಿಶೂನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಪತಿಯ ಬಳಿಯಲ್ಲಿ ಸರಯೂ ಕುಳಿತಿದ್ದಾಳೆ. ಮಾತಿಗೆ ಆರಂಭವಾಯಿತು. "ನೀವು ತಾತಯ್ಯನವರನ್ನು ಕಾಣದೆ ಹೋಗಬೇಡಿರಿ. ಈಹೊತ್ತು ರಾತ್ರಿಯನ್ನಿಲ್ಲಿಯೆ ಕಳೆಯಬೇಕು ನೀವು" ಎಂದಳು ಸರಯೂ.

"ಈದಿನ ರಾತ್ರಿಯನ್ನು ಇಲ್ಲಿಯೆ ಕಳೆಯಬೇಕಾಗುವುದೆಂದು ನನಗೂ ಎನಿಸುತ್ತದೆ."

ಸರಯೂ ಯಾವುದೊ ಒಂದು ಮಾತನ್ನು ಕೇಳಬೇಕೆಂದು ಬಹಳ ಹೊತ್ತಿನಿಂದ ಯೋಚಿಸುತಿದ್ದಳು. ಆದರೆ ನಾಚಿಕೆಯಿಂದ ಕೇಳಲಾಗಿರಲಿಲ್ಲ. ಕೇಳಲು ಇದುವರೆಗೆ ಸಮಯವೂ ಸಿಕ್ಕಿರಲಿಲ್ಲ. ಈಗ ಸ್ವಲ್ಪ ಯೋಚಿಸಿ "ನಿಮ್ಮ ಮುಂದೆ ಹೇಳಲಿಕ್ಕೇನು ನಾಚಿಕೆ—" ಎಂದಳು.

ಸರಯೂನ ಮುಖದಕಡೆ ನೋಡುತ್ತ ಚಂದ್ರನಾಥ ಸುಮ್ಮನೆ ಕುಳಿತಿದ್ದ. ಸರಯೂ "ನಿಮಗೆ ಕಾಗದ ಬರೆಯಬೇಕೆಂದು ಯೋಚಿಸಿದ್ದೆ" ಎಂದಳು.

"ಏಕೆ ಬರೆಯಲಿಲ್ಲ? ನಾನೇನು ಬೇಡವೆಂದಿರಲಿಲ್ಲ."

"ನೀವೆಲ್ಲಿ ಕೋಪಿಸಿಕೊಳ್ಳುತ್ತೀರೋ ಎಂದು ಭಯವಾಗುತ್ತಿದ್ದಿತು. ಒಳ್ಳೇದು, ಇನ್ನು ನೀವೆಂದು ಬರುತ್ತೀರಿ?"

"ನೀನು ಹೇಳಿದ ದಿನ:"

ಕೇಳಬೇಕೆಂದ ಮಾತನ್ನು ಈಗಲೇ ಕೇಳಬೇಕೆಂದು ಸರಯೂ ಯೋಚಿಸಿದಳು. ಆದರೆ ಅಷ್ಟರಲ್ಲಿ ಮಾನವ ಶರೀರ ಶಾಶ್ವತವಲ್ಲವೆಂಬ ಯೋಚನೆಯಾಯಿತು. ಅವಳು ಹೇಳಬೇಕೋ ಹೇಳಬಾರದೊ ಎಂಬ ತೊಡಕಿನಲ್ಲಿ ಸಿಲುಕಿಕೊಂಡಳು. ಈಗ ಹೇಳದಿದ್ದರೆ ಇನ್ನೊಮ್ಮೆ ಹೇಳಲು ಸಾಧ್ಯವಾಗಲಾರದು. ಇನ್ನೊಮ್ಮೆ ಅವರು ಬರುವುದರೊಳಗಾಗಿ ಈ ಶರೀರ ಸುಟ್ಟು ಭಸ್ಮವಾಗಿ ಹೋದರೆ ಮನದಲ್ಲಿದ್ದುದು ಹಾಗೆಯೆ ಉಳಿಯಬಹುದಲ್ಲವೆ? ಹೀಗೆಲ್ಲ ಯೋಚಿಸಿ ಕೊನೆಗೆ "ನಿಮ್ಮೆದುರಿನಲ್ಲಿ ನನಗೇನು ನಾಚಿಕೆ?" ಎಂದಳು.

"ಹೌದು, ಎಷ್ಟು ಸಲ ಇವನ್ನು ಹೇಳುವುದು? ಮುಂದೇನಾದರೂ ಹೇಳುವೆಯೊ ಇಲ್ಲವೊ?"

ಸರಯೂ ಸ್ವಲ್ಪಹೊತ್ತು ತಡೆದು "ಇನ್ನು ನನಗೆ ಬದುಕುವ ಇಚ್ಛೆ ಇಲ್ಲ. ಹೀಗೆ ಬದುಕಿರುವುದು ಒಳಿತೆಂದೆನಿಸುವುದಿಲ್ಲ" ಎಂದಳು.

ಚಂದ್ರನಾಥನಿಗೆ ಇದು ನಗೆಯಾಟದ ಮಾತಲ್ಲವೆನಿಸಿತು. ಸರಯೂನ ಮುಖ ಪುನಃ ಕಳೆಗುಂದಿದುದನ್ನು ನೋಡಿದ. ಭಯವಾಯಿತವನಿಗೆ. "ಸರಯೂ, ನಿನಗೇನಾದರೂ ಬೇನೆ ಆಗಿದೆಯೆ?"—ಅವನು ಕೇಳಿದ.

ಸರಯೂ ಸಪ್ಪಗೆ "ಅದೇನೊ ನನಗೆ ತಿಳಿಯದು? ಆದರೆ ಆಗಾಗ ಹೃದಯದಲ್ಲೊಂದು ವೇದನೆಯಾಗುತ್ತದೆ" ಎಂದಳು.

"ಹೀಗೆ ಎಚ್ಚರ ತಪ್ಪುವುದು?"

"ಅಲ್ಲ, ಇದು ಅಂತಹದೇನೂ ಇಲ್ಲ."

"ಚಂದ್ರನಾಥ ಮನದಲ್ಲಿಯೆ "ಆಗಬೇಕಾದುದು ಆಗಿಹೋಯಿತು. ಇನ್ನು ನನ್ನ ಸರ್ವಸ್ವವನ್ನು ತ್ಯಾಗಮಾಡಿ ನೀನು ನೆಮ್ಮದಿಯಾಗುವಂತೆ ಮಾಡುವೆನು" ಎಂದು ಯೋಚಿಸಿದ.

"ಒಂದು ಭಿಕ್ಷೆಯಿದೆ. ಕೊಡುವಿರಾ?"

"ಏನು ಬೇಕು?"

ಸರಯೂ "ನನಗಾಗಿ ಏನೂ ಬೇಕಾಗಿಲ್ಲ. ನನ್ನ ಸತ್ತ ಸುದ್ದಿ ಕೇಳಿದ ಮೇಲೆ—"

ಅಷ್ಟರಲ್ಲಿ ವಿಶೂನನ್ನು ಚಂದ್ರನಾಥನ ಚರಣಗಳ ಬಳಿಯಲ್ಲಿ ಕುಳ್ಳಿರಿಸಿ "ಇಲ್ಲಿಗೆ ಬಂದು ಈ ಮಗನನ್ನು ಕರೆದುಕೊಂಡು ಹೋಗಿರಿ" ಎಂದಳು.

ಚಂದ್ರನಾಥ ಆವೇಗದಿಂದ ವಿಶೂನನ್ನು ಎತ್ತಿಕೊಂಡು ಅವನ ಮುಖಕ್ಕೆ ಮುದ್ದಿಟ್ಟ.

ಇಷ್ಟರಲ್ಲಿ ಹೊರಗಿನಿಂದ ಕೈಲಾಸಬಾಬುಗಳು "ವಿಶೂ! ವಿಶೂ!" ಎನ್ನುತ್ತ ಬಂದರು.

ವಿಶೂ ಕೂಡಲೆ ಕೆಳಗಿಳಿದು "ತಾತಾ!" ಎಂದ.

ಆಗ ಸರಯೂ ಎದ್ದುನಿಂತು "ನೋಡಿರಿ, ಮುತ್ತಜ್ಜ ಬಂದುಬಿಟ್ಟರು" ಎಂದಳು.

ಕೈಲಾಸಬಾಬುಗಳು ವಿಶೂನನ್ನು ಕ್ಷಣಕಾಲ ಎತ್ತಿಕೊಂಡು ಅಂಗಳದಲ್ಲಿ ನಿಂತರು. ಚಂದ್ರನಾಥನೂ ಹೊರಗೆ ಬಂದ. ಕೈಲಾಸಬಾಬುಗಳು ಈ ಮೊದಲು ಅವನನ್ನು ನೋಡಿರಲಿಲ್ಲ. ನೋಡಿದರೂ ಗುರುತಿಸುವುದು ಸಾಧ್ಯವಿರಲಿಲ್ಲ. ಆದ್ದರಿಂದ ಅವರು ಚಂದ್ರನಾಥನನ್ನು ಸ್ವಲ್ಪ ಹೊತ್ತು ಸುಮ್ಮನೆ ನೋಡುತ್ತ ನಿಂತರು. ವಿಶೂ ಚಂದ್ರನಾಥನ ಪರಿಚಯ ಮಾಡಿಕೊಟ್ಟ— "ಅಜ್ಜಾ, ಇವರು ಯಾರು? ಅ. .ಪ್ಪಾ!"

ಚಂದ್ರನಾಥ ನಮಸ್ಕರಿಸಿದ. ಕೈಲಾಸಬಾಬುಗಳು ತಮ್ಮ ಕೈಗಳನ್ನು ಮೇಲಕ್ಕೆತ್ತಿ ಆಶೀರ್ವದಿಸಿ "ಕುಳಿತುಕೊಳ್ಳಪ್ಪಾ, ಕುಳಿತುಕೊ" ಎಂದರು.

೧೮

ವಿಶೂ ಹಾಗು ಸರಯೂನನ್ನು ನಾಳೆ ಕರೆದುಕೊಂಡು ಹೋಗುವೆನೆಂದು ಚಂದ್ರನಾಥ ಹೇಳಿದ ಕೂಡಲೆ ಮುದುಕ ಕೈಲಾಸಬಾಬುಗಳಿಗೆ ಸಾವಿರಾರು ತೋಪುಗಳಿಂದ ಹೊಡೆದಂತೆನಿಸಿತು. ಕೈಲಾಸಬಾಬುಗಳಿಗೆ ತಾನು ಏನು ಹೇಳಿದೆನೆಂದು ತನಗೇ ಕೇಳಿಸಲಿಲ್ಲ; ಆದರೆ ಚಂದ್ರನಾಥನಿಗೆ ಮಾತ್ರ "ಇದಕ್ಕೂ ದೊಡ್ಡ ಸಂಗತಿಯಾವುದು?" ಎಂದು ಯಾರೊ ದೂರದಿಂದ ಹೇಳಿದ ಹಾಗೆ ಕೇಳಿತು.

ಸರಯೂನಿಗೂ ಈ ಮಾತು ಕೇಳಿಸಿತು. ಅವಳೂ ಶೋಕಭರಿತಳಾದಳು. ಕಣ್ಣುಗಳಿಂದ ಕಂಬನಿಗಳ ಧಾರೆ ಹರಿಯಲಾರಂಭಿಸಿತು. ಅವಳು ಸ್ವಾಮಿಯ ಚರಣಗಳ ಮೇಲೆ ತಲೆಯಿಟ್ಟು "ಈ ಹತಭಾಗ್ಯಳಿಗೆ ಚರಣ

ಧೂಳಿಯನ್ನು ಕೊಟ್ಟು ನನ್ನನ್ನು ಇಲ್ಲಿಯೆ ಬಿಟ್ಟು ಹೋಗಿರಿ, ಕರೆದುಕೊಂಡು ಹೋಗಬೇಡಿರಿ" ಎಂದಳು.

"ಏಕೆ ?"

ಸರಯೂನಿಂದ ಉತ್ತರ ಕೊಡುವುದಾಗಲಿಲ್ಲ. ಗಟ್ಟಿಯಾಗಿ ಅಳತೊಡಗಿದಳು ಮಾತ್ರ. ಅವಳ ಕಣ್ಣೆದುರು ಆಗಾಗ ವೃದ್ಧ ಕೈಲಾಸಬಾಬುಗಳ ಆ ಕಾತರ ಮುಖವು ಕುಣಿಯುತ್ತಿದ್ದಿತು.

ಸ್ವಲ್ಪ ಹೊತ್ತು ಕಳೆದ ಬಳಿಕ ಚಂದ್ರನಾಥ "ನಾನು ನಿನ್ನ ಪತಿ. ನಾನು ನಿನ್ನನ್ನು ಕರೆದುಕೊಂಡು ಹೋಗಬಯಸಿದರೆ ನಿನಗೆ ಮನಸ್ಸಿಲ್ಲದಿದ್ದರೂ ನಿನ್ನ ಇಚ್ಛೆ ನಡೆಯದು. ವಿಶೂನನ್ನು ನಾನು ಅಗಲಿ ಇರಲಾರೆ" ಎಂದ.

ಇನ್ನು ಮಾತನಾಡುವುದಕ್ಕೆ ಹಾದಿಯೆ ಇಲ್ಲವೆಂದು ತೋರಿತು ಸರಯೂನಿಗೆ.

ಮರುದಿನ ಕೈಲಾಸಬಾಬುಗಳು ವಿಶೂನನ್ನು ಎತ್ತಿಕೊಂಡು ಚದುರಂಗದ ಚೀಲದೊಂದಿಗೆ ಶಂಭೂಮಿಶ್ರರ ಮನೆಗೆ ಹೊರಟರು. ಅಲ್ಲಿ ಅವರನ್ನು ಕೂಗಿ ಕರೆದು "ಮಿಶ್ರರೇ, ಇಂದು ನನಗೆ ಸುದಿನ. ಇಂದು ವಿಶೂ ತನ್ನ ಮನೆಗೆ ಹೋಗುತ್ತಾನೆ. ಅವನು ಈಗ ದೊಡ್ಡವನಾಗಿದ್ದಾನೆ. ಈ ಚಿಕ್ಕ ಮನೆಯಲ್ಲಿ ಇಟ್ಟುಕೊಳ್ಳಲಾರೆ" ಎಂದರು.

ಇದನ್ನು ಕೇಳಿ ಮಿಶ್ರರಿಗೂ ಸಂತೋಷವಾಯಿತು. ಕೈಲಾಸಬಾಬುಗಳು ಚದುರಂಗದ ಮನೆಯನ್ನು ಹಾಸಿ ತಮ್ಮ ಆಟ ಹೂಡಿ "ಬನ್ನಿ, ಕೂತುಕೊಳ್ಳಿ. ಈ ಹೊತ್ತು ನಿಮ್ಮನ್ನು ಸೋಲಿಸಿಬಿಡುತ್ತೇನೆ" ಎಂದರು.

ಆದರೆ ಆಟಕ್ಕೆ ಕುಳಿತೊಡನೆಯೆ ಅವರ ಒಂದೊಂದೇ ಕಾಯಿ ಹಾರಲಾರಂಭಿಸಿದವು. ಅವರು ಆನೆ ಬಿಡಬೇಕಾದಲ್ಲಿ ಒಂಟೆ ಬಿಡುತ್ತಿದ್ದರು; ಒಂಟೆ ಬಿಡಬೇಕಾದಲ್ಲಿ ಆನೆ ಬಿಡುತ್ತಿದ್ದರು. ಹೀಗೆ ಅವರ ಆಟ ಬಹಳ ಸಡಿಲಾಯಿತು. ಆಟ ಕೆಡಲಾರಂಭಿಸಿತು. ಇದನ್ನು ನೋಡಿ ಶಂಭೂಮಿಶ್ರರು "ಈ ಹೊತ್ತು ನಿಮ್ಮ ಮನಸ್ಸಿಗೆ ನೆಮ್ಮದಿ ಇಲ್ಲವೆಂದು ತೋರುತ್ತದೆ. ಆದುದರಿಂದಲೇ ನೀವು ಹೀಗೆ ತಪ್ಪು ಆಡುತ್ತಿರಬಹುದು" ಎಂದರು.

ಕೈಲಾಸಬಾಬುಗಳು ಒಂದು ಆಟ ಸೋತರು, ಎರಡು ಸೋತರು. ಮೂರನೆ ಆಟ ಆಡದೆ ಚದುರಂಗದ ಸೇನೆಯನ್ನು ಚೀಲದಲ್ಲಿ ಕಟ್ಟಿದರು.

ಆದರೆ ಕೆಂಪು ಬಂಣದ ಮುಂತ್ರಿಯನ್ನು ಮಾತ್ರ ಕಟ್ಟದೆ, ವಿಶೂನ ಕೈಯಲ್ಲಿ ಕೊಟ್ಟು "ಇದನ್ನು ತೆಗೆದುಕೊ ವಿಶೂ, ಇನ್ನೆಂದಿಗೂ ಇದನ್ನು ಬೇಡುವುದಿಲ್ಲ" ಎಂದರು. ದಾರಿಯಲ್ಲಿ ಸಿಕ್ಕಿದ ತಮ್ಮ ಎಲ್ಲ ಮಿತ್ರರಿಗೆ ಇದನ್ನೆ—ಈ ಶುಭ ಸಮಾಚಾರವನ್ನೇ—ಹೇಳುತ್ತ ಸಾಗಿದ್ದರು.

ಕೈಲಾಸಬಾಬುಗಳು ಇಂದು ಎಲ್ಲ ಕೆಲಸಗಳನ್ನು ಉತ್ಸಾಹದಿಂದ ಮಾಡುತ್ತಿದ್ದಾರೆ. ಆದರೆ ಬಹಳ ಕೆಲಸ ಮಾಡಬೇಕೆಂದರೂ ಸಾಧ್ಯವಾಗ ಲೊಲ್ಲದು. ಚದುರಂಗದ ಆಟದಂತೆ ಕೆಲಸಗಳನ್ನೂ ಮರೆತುಬಿಡುತ್ತಾರೆ. ದಿನ ಕಳೆದಂತೆ ಮರೆವೂ ಹೆಚ್ಚುತೊಡಗಿತು. ಅವರ ಈ ಮರೆವನ್ನು ನೋಡಿ ಸರಯೂಗೆ ದುಃಖ ಒತ್ತರಿಸಿ ಬರತೊಡಗಿತು. ಆದರೆ ಈ ಮುದಿ ಕೈಲಾಸ ಬಾಬುಗಳ ಉತ್ಸಾಹ ಮಾತ್ರ ಕಡಿಮೆಯಾಗಲಿಲ್ಲ. ಸರಯೂ ಅವರನ್ನು ಮರೆಗೆ ಕರೆದು ಅವರ ಪಾದಧೂಳಿಯನ್ನು ಮಸ್ತಕದ ಮೇಲಿರಿಸಿಕೊಂಡು ಅಳತೊಡಗಿ ದಳು. ಆಗ ವೃದ್ಧ ಕೈಲಾಸಬಾಬುಗಳು ಹೊರಬೀಳಬೇಕೆನ್ನುವ ತಮ್ಮ ಕಂಬನಿ ಗಳನ್ನು ತಡೆದು ಆಶೀರ್ವದಿಸುತ್ತ "ಮಗೂ, ಅಳಬೇಡ. ಈ ಮುದುಕನ ಆಶೀ ರ್ವಾದಬಲದಿಂದ ನೀನು ರಾಣಿಯಾಗುವಿ. ಒಂದು ವೇಳೆ ಎಂದಾದರೂ ಕಾಶಿಗೆ ಬಂದರೆ ಈ ಮುದುಕನ ಗುಡಿಸಲನ್ನು ಮರೆಯಬೇಡ, ಇಲ್ಲಿಗೇ ಬಾ" ಎಂದರು.

ಸರಯೂ ಇನ್ನಷ್ಟು ಅಳತೊಡಗಿದಳು. ಅಂದು ಅವಳು ಭಿಕ್ಷುಕಿಯೂ ನಿರಾಶ್ರಿತಳೂ ಆಗಿ ಕಾಶಿಗೆ ಬಂದಿದ್ದಳು. ಆದರೆ ಇಂದು? ಈ ನೆನಪು ಅವಳಿಗೆ ಕ್ಷಣಕ್ಕೊಮ್ಮೆ ಬರುತಿತ್ತು.

"ತಾತಯ್ಯಾ, ನನ್ನನ್ನು ಬಿಟ್ಟು ನೀವು ಇರಲಾರಿರಾ?"

"ಮಗೂ, ನಾನು ಇನ್ನೆಷ್ಟು ದಿನ ಬದುಕಬೇಕಾಗಿದೆ?" ಎಂದರು. ಆಮೇಲೆ ಮನಸ್ಸಿನಲ್ಲಿಯೆ "ನನಗೆ ಈಗಾಗಲೆ ಕರೆ ಬಂದಿದೆ. ಸಂಸಾರದಲ್ಲಿ ಸಂಕಟಪಡುತ್ತಿರುವ ಈ ಪ್ರಾಣಕ್ಕೆ ಶಾಂತವಾಗುವ ಕಾಲ ಹತ್ತಿರಬಂದಿದೆ" ಎಂದುಕೊಂಡರು.

ಸರಯೂ ಕಣ್ಣೊರಸಿಕೊಳ್ಳುತ್ತ ವ್ಯಾಕುಲಳಾಗಿ "ನಾನು ಬಹಳ ಕೃತಘ್ನಳು—" ಎಂದಳು.

"ಶಿವ, ಶಿವ. ಮಗೂ ಇಂತಹ ಮಾತಾಡಬೇಡ. ನಿನ್ನ ಹೃದಯವನ್ನು ನಾನು ಚೆನ್ನಾಗಿ ಅರಿತುಕೊಂಡಿದ್ದೇನೆ."

ರಾತ್ರಿ ೧೧ ಗಂಟೆಗೆ ಎಲ್ಲರೂ ಸ್ಟೇಷನ್ನಿಗೆ ಹೋದರು. ಗಾಡಿಯ ವೇಳೆ ಮೆಲ್ಲಮೆಲ್ಲನೆ ಹತ್ತಿರ ಬರತೊಡಗಿತು.

ವಿಶೂ ಮಲಗಿದ್ದ. ಆದರೂ ಕೆಂಪು ಬಣ್ಣದ ಮಂತ್ರಿಯನ್ನು ಕೈಯಲ್ಲಿಯೆ ಹಿಡಿದಿದ್ದ. ವೃದ್ಧ ಕೈಲಾಸಬಾಬುಗಳು ಅವನನ್ನು ಅಲ್ಲಾಡಿಸಿ ಎಚ್ಚರಿಸಿದರು. ಎದ್ದ ಕೂಡಲೆ ಅವನು ಅಳುವುದರಲ್ಲಿದ್ದ; ಅಷ್ಟರಲ್ಲಿ ಕೈಲಾಸಬಾಬುಗಳು ತಮ್ಮ ಮುಖವನ್ನು ಅವನ ಮುಖಕ್ಕೆ ತಗಲಿಸಿ "ಮಗೂ, ವಿಶೂ!" ಎಂದರು. ಕೂಡಲೇ ವಿಶೂ ನಕ್ಕು "ತಾತಯ್ಯ!" ಎಂದ.

"ವಿಶೂ ಎಲ್ಲಿಗೆ ಹೋಗುತ್ತಿರುವೆಯಪ್ಪಾ?"

"ಹೋಗುತ್ತೇನೆ" ಎಂದು, ಕೈಯಲ್ಲಿಯ ಕೆಂಪು ಮಂತ್ರಿಯನ್ನು ತೋರಿಸಿ "ಮಂತಲಿ!" ಎಂದ.

"ಹೌದು ಮಗೂ, ಅದನ್ನು ಕಳೆಯಬೇಡ, ಹಾಂ."

ಹಸ್ತಿದಂತದ ಈ ಕೆಂಪು ಮಂತ್ರಿಯ ವಿಷಯದಲ್ಲಿ ವಿಶೂ ಜಾಗರೂಕತೆಯಿಂದ ಇರುವಂತೆ ಕೈಲಾಸಬಾಬುಗಳು ಎಚ್ಚರಿಸಿದರು. ವಿಶೂ ತಲೆ ಅಲ್ಲಾಡಿಸಿ "ಇಲ್ಲ ತಾತಯ್ಯ" ಎಂದ.

ಗಾಡಿ ಬಂದಿತು. ಸರಯೂ ಕೈಲಾಸಬಾಬುಗಳಿಗೆ ವಂದಿಸಿ ಅವರ ಪಾದ ಧೂಳಿಯನ್ನು ಮಸ್ತಕದ ಮೇಲಿರಿಸಿಕೊಂಡು ಗಾಡಿಯಲ್ಲಿ ಕುಳಿತಳು. ವೃದ್ಧ ಕೈಲಾಸಬಾಬುಗಳ ಆಶೀರ್ವಾದವು ನಡಗುತ್ತಿರುವ ತುಟಿಗಳಿಂದ ಹೊರಗೆಬರಲಿಲ್ಲ.

ಗಾಡಿ ಹೊರಡಲು ಹೆಚ್ಚು ಸಮಯವಿಲ್ಲ ಎಂದು ತಿಳಿದು ಕೈಲಾಸಬಾಬುಗಳು ವಿಶೂನನ್ನು ಚಂದ್ರನಾಥನ ತೊಡೆಯ ಮೇಲೆ ಕುಳ್ಳಿರಿಸಿ "ಮಗೂ ವಿಶೂ!" ಎಂದರು.

"ತಾತಯ್ಯ!"

"ಮಂತ್ರಿ."

ಮಂತ್ರಿಯನ್ನು ನೋಡಿ ನಗುತ್ತ ವಿಶೂ "ಮಂತಲಿ" ಎಂದ.

"ಕಳೆಯಬೇಡ."

"ಇಲ್ಲ, ತಾತಯ್ಯ."

ಮುದುಕನ ಒಣಗಿಹೋದ ಕಣ್ಣುಗಳಲ್ಲಿ ಈಗ ನೀರು ತುಂಬಿ ಬಂತು. ಗಾಡಿ ಹೊರಟ ಕೂಡಲೇ ಕಿಟಕಿಯಲ್ಲಿ ಮುಖವಿಟ್ಟು "ಸರಯೂ, ಮಗೂ,

ಗಿ ಬರುತ್ತೇನೆ " ಎಂದು, ಮತ್ತೊಮ್ಮೆ ಗಟ್ಟಿಯಾಗಿ "ಮಗೂ ವಿಶೂ!" ದು ಕೂಗಿದರು.

ಆದರೆ ಗಾಡಿಯ ಚಲನದ ಶಬ್ದದಲ್ಲಿ ಮತ್ತು ಜನರ ಆ ಗದ್ದಲದಲ್ಲಿ ಾಸಬಾಬುಗಳ ಕೂಗು ವಿಶೂಗೆ ಕೇಳಿಸಲಿಲ್ಲ. ಗಾಡಿಯ ಶಬ್ದ ಕೇಳಿ ವವರೆಗೂ ಗಾಡಿಯು ಹೋದ ಕಡೆಗೇ ನೋಡುತ್ತ ಕೈಲಾಸಬಾಬುಗಳು ತಲ್ಲಿಯೆ ನಿಂತರು; ಒಂದು ಅಂಗುಲ ಕೂಡ ಹಿಂದಕ್ಕೆ ಸರಿದಿರಲಿಲ್ಲ. ಮೇಲೆ ಮೆಲ್ಲಮೆಲ್ಲನೆ ಹೊರಟುಹೋದರು.

೧೯

ರಾತ್ರಿ ಒಂದೊಂದೆ ಹೆಜ್ಜೆಯನ್ನಿಡುತ್ತ ಕೈಲಾಸಬಾಬುಗಳು ಮನೆಗೆ ಂತಿರುಗಿ ಬಂದರು. ತುಲಸೀಕಟ್ಟೆಯ ಮೇಲೆ ದೀಪ ಉರಿಯುತ್ತಿದ್ದರೂ ವರಿಗೆ ಅಂಧಕಾರವೇ ಗೋಚರವಾಗುತ್ತಿತ್ತು. ಇಲ್ಲಿಯ ವರೆಗೆ ಮನೆಯಲ್ಲಿ ಲ್ಲರೂ ಇದ್ದರು; ಆದರೆ ಈಗ ಯಾರೂ ಇರಲಿಲ್ಲ. ಮಣ್ಣಿನ ಒಂದು ಪಣತಿ ಮಾತ್ರ ಉರಿಯುತ್ತಿದ್ದಿತು. ಆದರ ಆಯುಷ್ಯವೂ ಮುಗಿಯುತ್ತ ಬಂದಿದೆ· ನ್ನು ಆರಿ ತಣ್ಣಗಾಗುವುದು ಮಾತ್ರ ಉಳಿದಿದೆ. ಈ ದೀಪವನ್ನು ಸರಯೂ ಹೋಗುವಾಗ ಹಚ್ಚಿ ಹೋಗಿದ್ದಳು.

ಕೈಲಾಸಬಾಬುಗಳು ಬಂದು ಮಂಚದಮೇಲೆ ಬಿದ್ದುಕೊಂಡರು. ಕಣ್ಣು ಳಲ್ಲಿ ತೂಕಡಿಕೆಯು ಗುಂಗು ತೂಗುತಿದ್ದಿತು. ಆದರೆ ಆಗಾಗ ಅವರಿಗೆ 'ತಾತಯ್ಯ!" ಎಂದು ಯಾರೊ ಕೂಗಿ ಕರೆಯುತ್ತಿರುವಂತೆ ಎನಿಸುತ್ತಿದ್ದಿತು. ದಶರಥರಾಜನು ಮೃತ್ಯುಶಯ್ಯೆಯ ಮೇಲೆ ಮಲಗಿ ಕ್ಷೀಣ ಬಲಹೀನ ತುಟಿಗಳಿಂದ "ಬಾ, ಓಡಿ ಬಾ, ಓಡಿ ಬಾ," ಎಂದು ಹೇಳುವಂತೆ ಕೈಲಾಸ ಬಾಬುಗಳು ಕನಸು ಕಂಡರು.

ಕೈಲಾಸಬಾಬುಗಳು ಬೆಳಗಿನಲ್ಲೆದ್ದು ಹೊರಗೆ ಬಂದು ನಿತ್ಯಕ್ರಮದಂತೆ "ವಿಶೂ!" ಎಂದು ಕೂಗಿದರು. ಕೂಗಿದ ಮೇಲೆ ವಿಶೂ ತನ್ನ ಮನೆಗೆ ಹೊರಟು ಹೋಗಿರುವನೆಂಬ ನೆನಹು ಬಂದಿತು! ಆಗ ಚದುರಂಗದ ಚೀಲ ವನ್ನು ಕೈಯಲ್ಲಿ ಹಿಡಿದುಕೊಂಡು ಶಂಭೂಮಿಶ್ರರ ಮನೆಗೆ ಹೋಗಿ "ಮಿಶ್ರರೇ, ನಮ್ಮ ವಿಶೂ ಹೊರಟುಹೋದ!" ಎಂದರು.

ವಿಶೂನನ್ನು ಎಲ್ಲರೂ ಪ್ರೀತಿಸುತ್ತಿದ್ದರು. ವಿಶೂ ಹೊರಟುಹೋದು

ದಕ್ಕಾಗಿ ಮಿಶ್ರರಿಗೂ ದುಃಖವಾಯಿತು. ಶಂಭೂಮಿಶ್ರರು ಆಟಕ್ಕೆ ಕುಳಿತು ಚದುರಂಗದ ಹಾಸು ಹಾಸಿ ಕಾಯಿಗಳೆಲ್ಲವನ್ನೂ ಇಟ್ಟಮೇಲೆ "ನಿಮ್ಮ ಆ ಕೆಂಪು ಮಂತ್ರಿ ಏನಾಯಿತು ?" ಎಂದುಕೇಳಿದರು.

ಕೈಲಾಸಬಾಬುಗಳು ನಿಡಿದಾದ ಉಸಿರುಬಿಟ್ಟು "ಹೌದು ಮಿಶ್ರರೇ, ವಿಶೂ ಅದನ್ನು ತನ್ನ ಕೂಡ ತೆಗೆದುಕೊಂಡು ಹೋಗಿದ್ದಾನೆ. ಆ ಕೆಂಪು ಕಾಯಿ ಕಂಡರೆ ಅವನಿಗೆ ತುಂಬಾ ಪ್ರೀತಿ. ಹುಡುಗ, ಅವನಿಗೆ ತಿಳಿವಳಿಕೆ ಇದೆಯೆ ? " ಎಂದರು.

ಈ ಮಾತನ್ನು ಹೇಳುವಾಗ, ತನಗೆ ಅತಿಪ್ರಿಯವಾದ ಈ ಕಾಯಿ ವಿಶೂ ನಿಗೆ ತಾನೇ ಕೊಟ್ಟದ್ದೆಂಬುದನ್ನು ನೆನೆದು ಕೈಲಾಸಬಾಬುಗಳಿಗೆ ನಾಚಿಕೆ ಎನಿಸಿತು.

ಮಿಶ್ರರು "ಇನ್ನೊಂದು ಕಾಯಿ ತರಲೆ ? " ಎಂದರು.

"ತನ್ನಿ" ಎಂದರು ಕೈಲಾಸಬಾಬುಗಳು.

ಆಟದಲ್ಲಿ ಕೈಲಾಸಬಾಬು ಸೋತುಹೋದರು. ಅವರೊಂದಿಗೆ ಶಂಭು ಮಿಶ್ರರು ಬಹಳ ದಿನಗಳಿಂದ ಆಡುತ್ತಲಿದ್ದರು. ಆದರೆ ಅವರನ್ನು ಸೋಲಿಸು ವುದು ಸಾಧ್ಯವಾಗಿರಲಿಲ್ಲ. ಕೈಲಾಸಬಾಬುಗಳು ಸೋತ ಕಾರಣವು ಮಿಶ್ರರಿಗೆ ತನ್ನಿಂದ ತಾನೇ ತಿಳಿಯಿತು. ಅವರು ಕೇಳಿದರು–"ಕೈಲಾಸಬಾಬೂ, ನಿಮ್ಮ ಎಲ್ಲ ಆಟದ ಕಲೆಯನ್ನು ವಿಶೂ ತನ್ನೊಡನೆ ತೆಗೆದುಕೊಂಡು ಹೋದ, ಅಲ್ಲವೆ?"

ಕೈಲಾಸಬಾಬುಗಳ ತುಟಿಗಳು ಹಿಗ್ಗಿದುವು. "ಇನ್ನೊಂದು ಆಟ ಆಡೋಣ" ಎಂದರು ಅವರು.

ಆಟಕ್ಕೆ ಆರಂಭವಾಯಿತು. ಆಟ ಭರದಿಂದ ಸಾಗಿದ್ದಿತು. ಕೈಲಾಸ ಬಾಬುಗಳು ಆಟ ಚೆನ್ನಾಗಿ ಹೂಡಿದ್ದರು. ಆಗ ಅವರಿಗೆ ಹುರುಪು ಬಂದಂತಾಗಿ " ವಿಶೂ " ಎಂದು ಕೂಗಿದರು.

ಶಂಭುಮಿಶ್ರರು ನಗುತ್ತ "ಇಲ್ಲಿ ಶಹಾ ಹತ್ತಿದೆ, ವಿಶೂ ಇಲ್ಲಿ ಇಲ್ಲವಲ್ಲ ?" ಎಂದರು.

ಇಬ್ಬರೂ ನಕ್ಕುಬಿಟ್ಟರು.

ಶಂಭೂಮಿಶ್ರರು ಶಹಾಕೊಟ್ಟು "ಈಗ ನಿಮ್ಮ ಎರಡು ಕಾಯಿ ಹೋದವು ನೋಡಿರಿ ತಾತಾ " ಎಂದರು.

ಇದನ್ನು ಕಂಡು ಕೈಲಾಸಬಾಬುಗಳು "ಬಾ ಮಗೂ, ಬೇಗ ಬಾ" ಎಂದು ಮತ್ತೊಮ್ಮೆ ಕೂಗಿದರು.

ಆಮೇಲೆ ಅವರು ಏನನ್ನೊ ನಿರೀಕ್ಷಿಸತೊಡಗಿದರು. ಯಾವುದೊ ಒಂದು ಚಿಕ್ಕ ಕೋಮಲ ಶರೀರವೊಂದು ಬಂದು ತೊಡೆಯನ್ನೇರಿ ತನ್ನ ಇಡೀ ದೇಹವನ್ನೇ ತಬ್ಬಿಕೊಳ್ಳುವುದೆಂದು ಅವರು ಯೋಚಿಸ ತೊಡಗಿದರು. ಆಟಕ್ಕೆ ತಡವಾಗುತ್ತಿರುವುದನ್ನು ಕಂಡು ಶಂಭುಮಿಶ್ರರು "ನೀವು ಈ ಕಾಯಿ ಉಳಿಸಿಕೊಳ್ಳಲಾರಿರಿ" ಎಂದರು.

ಮುದಿ ಕೈಲಾಸಬಾಬು ಬೆಚ್ಚಿಬಿದ್ದು "ಹಾಗಾದರೆ ಎರಡು ಕಾಯಿ ಹೋದಹಾಗೆ" ಎಂದರು.

ಆಟ ಮುಗಿಯಿತು. ಶಂಭುಮಿಶ್ರರೇನೊ ಗೆದ್ದರು. ಅದರೆ ಅವರಿಗೆ ಸಂತೋಷವಾಗಲಿಲ್ಲ. ಅವರು ಹಾಸು, ಕಾಯಿ, ಎರಡನ್ನೂ ಬದಿಗೆ ಸರಿಸಿ "ಇನ್ನೊಂದು ದಿನ ಮತ್ತೆ ಆಡೋಣ. ಇಂದು ಏಕೋ ನಿಮ್ಮ ಮನಸ್ಸಿನ ಸ್ಥಿತಿ, ಸರಿಯಾಗಿದ್ದಂತೆ ತೋರಲಿಲ್ಲ" ಎಂದರು.

ಕೈಲಾಸಬಾಬುಗಳು ಮನೆ ಸೇರುವಾಗ ಮಧ್ಯಾನ್ಹವಾಗಿತ್ತು. "ಹೇಗೂ ವಿಶೂ ಮನೆಯಲ್ಲಿಲ್ಲ. ತಡಮಾಡಿ ಹೋದರೆ ತಾನೆ ಏನು ?" ಎಂದು ಯೋಚಿಸ ತೊಡಗಿದರು.

ಮನೆಯಲ್ಲಿ ದಾಸಿ ಅಡುಗೆಯ ಸಾಮಾನು ಅಣಿಮಾಡುತ್ತಿದ್ದಳು. ಇಂದು ತಾನೇ ಅಡುಗೆ ಮಾಡಿಕೊಳ್ಳಬೇಕು, ಬಡಿಸಿಕೊಳ್ಳಬೇಕು, ಒಬ್ಬನೆ ಕುಳಿತುಕೊಂಡು ಉಣ್ಣಬೇಕು. ಇನ್ನೇನು, ತನಗೆ ಬೇಕಾದಾಗ ಉಣ್ಣಬಹುದು. ಊಟಕ್ಕೆ ಅವಸರವಿಲ್ಲ; ಯಾರೂ ತಡೆಯುವವರಿಲ್ಲ ; ತುಂಟತನಕ್ಕೆ ವಿಶೂನೂ ಇಲ್ಲ. ಬೇಕಾದಷ್ಟು ಸ್ವಾತಂತ್ರ್ಯವಿದೆ. ಆದರೂ ಅವರ ಮನಸ್ಸಿಗೆ ನೆಮ್ಮದಿಯಿಲ್ಲ. ಅವರು ಅಡುಗೆಮನೆಗೆ ಬಂದರು. ಅಲ್ಲಿ ಒಂದು ಹಿಡಿ ಅಕ್ಕಿ, ಒಂದೆರಡು ಬಟಾಟೆ, ಒಂದಿಷ್ಟು ಬೇಳೆ ಇತ್ತು. ಅವರ ಕಣ್ಣಿನಲ್ಲಿ ನೀರು ತುಂಬಿತು. ಎರಡು ವರ್ಷದ ಹಿಂದಿನ ಸಂಗತಿ ನೆನಪಾಯಿತವರಿಗೆ. ಇಂದಿನಂತೆಯೆ ಅವರು ಆಗ ಅಡುಗೆ ಮಾಡಿಕೊಳ್ಳಬೇಕಾಗುತ್ತಿದ್ದಿತು. ಆಗಲೂ ಇದೇ ಕೆಲಸದವಳು ಎಲ್ಲ ಸಾಮಾನುಗಳನ್ನು ಅಣಿಮಾಡಿಕೊಡುತ್ತಿದ್ದಳು. ಆಗ ವಿಶೂ ಬಂದಿರಲೂ ಇಲ್ಲ, ಹೋಗಿರಲೂ ಇಲ್ಲ.

ಹಲಸಿನ ಮರದ ಕೆಳಗೆ ಇನ್ನೂ ವಿಶೂನ ಚಿಕ್ಕದೊಂದು ಆಟದ ಮನೆ ಇದೆ. ಅದರಲ್ಲಿ ಒಡೆದ ಎರಡು ಗಡಿಗೆ, ಮಣ್ಣಿನ ಮುರಿದ ಗೊಂಬೆ, ಒಂದು ಮುರಿದ ಕೊಳಲು ಮೊದಲಾದುವು ಬಿದ್ದುಕೊಂಡಿವೆ. ಅವರು ಚಿಕ್ಕ ಮಕ್ಕಳಂತೆ ಅವೆಲ್ಲವನ್ನೂ ಎತ್ತಿಕೊಂಡು ಹೋಗಿ ಮಲಗುವ ಕಿರುಮನೆಯಲ್ಲಿಟ್ಟರು.

ಮತ್ತೆ ಮೊದಲಿನಂತೆ ಮಧ್ಯಾಹ್ನದಲ್ಲಿ ಗಂಗಾಪಾಂಡೆಯವರ ಮನೆಯಲ್ಲಿ ಆಟವನ್ನಾರಂಭಿಸಿದರು. ಸಾಯಂಕಾಲ ಮುಕುಂದಘೋಷರ ಮನೆಯಲ್ಲಿ ಸೇರುವ ಆಟಕ್ಕೆ ಜನರು ಮುತ್ತತೊಡಗಿದರು. ಆದರೆ ಆಟದಲ್ಲಿ ಕೈಲಾಸ ಬಾಬುಗಳ ಮೊದಲಿನ ಆ ಹೆಸರು ಈಗ ಇಲ್ಲ. ಮೊದಲು ಅವರಿಗೆ ಗೆಲವು ಕಟ್ಟಿಟ್ಟ ಹಾಗೆಯೇ. ಈಗ ಆಟವೆಂದರೆ ಸುಮ್ಮನೆ 'ಆಟ' ಅಷ್ಟೆ. ಮೊದಲು ಯಾರಿಗೆ ಆಟವನ್ನು ಕಲಿಸಿದ್ದರೋ ಅವರೇ ಈಗ ಇವರಿಗೆ ಹೇಳಿ ಕೊಡುತ್ತಿದ್ದಾರೆ.

ಅವರಿಗೆ ಆಡುವ ಇಚ್ಛೆ ಇನ್ನೂ ಇದೆ, ಆದರೆ ಆಡುವ ಸಾಮರ್ಥ್ಯವಿಲ್ಲ. ಆಗಾಗ ಒಂದೆರಡು ಆಟ ಚೆನ್ನಾಗಿ ಆಡುತ್ತಿದ್ದಾರೆ. ಹಿಂದೆ ಅವರಿಗೆ ಚದುರಂಗವೆಂದರೆ ಹೆಮ್ಮೆಯ ವಿಷಯ. ಆದರೆ ಈಗ ಅದೆಂದರೆ ನಾಚಿಕೆ. ಹೀಗಿದ್ದರೂ ಶಂಭುಮಿಶ್ರರು ಅವರಿಗೆ ಇನ್ನೂ ಆದರ ತೋರಿಸುತ್ತಾರೆ. ಅವರಿಗೆ ಪ್ರತಿದ್ವಂದ್ವಿಗಳಾಗಿ ಆಡುವುದಿಲ್ಲ. ಅವಶ್ಯವಿದ್ದಲ್ಲಿ ಕೈಲಾಸಬಾಬುಗಳ ನೆರವಿಗೆ ಬರುತ್ತಾರೆ.

ಕೈಲಾಸಬಾಬುಗಳ ಮನೆಯಲ್ಲಿಯೂ ಈಗ ಸ್ವಲ್ಪ ಗಡಬಿಡಿ ಆರಂಭವಾಗಿದೆ. ದಾಸಿ ಕೋಪಿಸಿಕೊಳ್ಳುತ್ತಿದ್ದಾಳೆ. ಒಂದೆರಡು ಸಲ ಕಣ್ಣೀರು ಸುರಿಸಿದ್ದೂ ಉಂಟು. ಅವಳು ಕಸಿವಿಸಿಯಿಂದ "ತಾತಯ್ಯ, ಊಟ ತಿಂಡಿ ತಿನಸು ಎಲ್ಲವನ್ನೂ ಬಿಟ್ಟುಬಿಟ್ಟರಿ. ಕನ್ನಡಿ ಹಿಡಿದುಕೊಂಡು ನೋಡಿಕೊಳ್ಳಿ ಸ್ವಲ್ಪ ನಿಮ್ಮ ಮುಖವನ್ನು!" ಎಂದಳು.

ಕೈಲಾಸಬಾಬುಗಳು ನಸುನಕ್ಕು "ಈಗ ಅಡುಗೆ ಮಾಡುವುದು ಮರೆತು ಹೋಗಿದೆ. ಒಲೆಯ ಎದುರು ಕುಳಿತುಕೊಳ್ಳಲಾಗುವುದಿಲ್ಲ" ಎಂದರು.

ದಾಸಿ ಬಹಳ ಹಳೆಬಳು. ಕಾಡಿಸಿ ಪೀಡಿಸಿ ಅವರಿಂದ ಒಂದಿಷ್ಟು ಅನ್ನ ಮಾಡಿಸಿಯೆ ಬಿಡುತ್ತಾಳೆ.

ಹೀಗೆ ಒಂದು ತಿಂಗಳು ಕಳೆಯಿತು. ಮೂರು ನಾಲ್ಕು ದಿನಗಳ ವರೆಗೆ

ಕೈಲಾಸಬಾಬುಗಳು ಯಾರ ಕಣ್ಣಿಗೂ ಬೀಳಲಿಲ್ಲ. ಶಂಭೂಮಿಶ್ರರು ಯೋಚನೆ ಮಾಡಲಾರಂಭಿಸಿದರು. ಅವರು ನೋಡುವುದಕ್ಕೆಂದು ಮನೆಗೆ ಬಂದು "ಕೈಲಾಸಬಾಬೂ !" ಎಂದು ಕೂಗಿದರು.

ದಾಸಿ ಉತ್ತರವಿತ್ತಳು - "ಅವರಿಗೆ ಜ್ವರ ಬರುತ್ತಿದೆ."

ಶಂಭೂಮಿಶ್ರರು ಒಳಗೆ ಬಂದು ಹಾಸಿಗೆಯ ಹತ್ತಿರ ಕುಳಿತು "ಏನು ಜ್ವರ ಬಂದಿದೆಯೆ ತಾತಯ್ಯ ?" ಎಂದರು.

ಕೈಲಾಸಬಾಬುಗಳು ನಕ್ಕು "ಹೌದು ಮಿಶ್ರರೇ, ನನಗೆ ಕರೆಬಂದಿದೆ. ಸಾವಕಾಶವಾಗಿ ಸಾಗಿದ್ದೇನೆ" ಎಂದರು.

"ರಾಮ ! ರಾಮ ! ಇದೇನು ಹೀಗೆ ಹೇಳಿದರೆ ? ಇನ್ನು ಮೂರು ನಾಲ್ಕು ದಿನಗಳಲ್ಲಿ ಗುಣವಾಗುವುದು."

"ಇನ್ನು ಈ ಮುಪ್ಪಿಗೆ ವಿಶ್ರಾಂತಿ ಎಲ್ಲಿ ? ಇನ್ನು ಪಯಣ ಬೆಳಿಸುವುದೇ ಸರಿ."

"ವೈದ್ಯರನ್ನು ಕರೆಕಳುಹಲಾ ?"

ಕೈಲಾಸಬಾಬುಗಳು ನಗುತ್ತ "ಮಿಶ್ರರೇ, ವೈದ್ಯರು ಬಂದು ಈ ೬೦ ವರ್ಷದ ಮುದುಕನಿಗೆ ಏನು ತಾನೆ ಮಾಡಬಲ್ಲರು, ಹೇಳಿರಿ ನೋಡೋಣ ?" ಎಂದರು.

"೬೦ ವರ್ಷದ ಮುಪ್ಪಿಗೆ ಮುಪ್ಪೆನ್ನಬಹುದೆ, ತಾತಯ್ಯ ? ಎಷ್ಟೋ ಜನ ಇನ್ನೂ ೬೦ ವರ್ಷ ಬದುಕುತ್ತಾರೆ."

ಕೈಲಾಸಬಾಬುಗಳು ಈ ಮಾತಿಗೆ ಉತ್ತರ ಕೊಡದೆ "ಆಗಲಿ ಮಿಶ್ರರೆ, ನಮ್ಮ ವಿಶೂ ಕಾಗದ ಬರೆದಿದ್ದಾನೆ. ಸ್ವಲ್ಪ ಕಿಟಕಿ ತೆರೆಯಮ್ಮಾ, ಮಿಶ್ರರಿಗೆ ಕಾಗದ ಓದಿ ಹೇಳುತ್ತೇನೆ" ಎಂದು ದಿಂಬಿನ ಕೆಳಗಿದ್ದ ಕಾಗದವನ್ನು ಹೊರದೆಗೆದು ಮೊದಲಿನಿಂದ ಕೊನೆಯ ವರೆಗೆ ಬಹಳ ಕಷ್ಟದಿಂದ ಓದಿ ಹೇಳಿದರು. ಕಾಗದ ಬಂಗಾಲಾ* ದಲ್ಲಿದ್ದಿತು. ಹಿಂದೀ ಭಾಷೆಯ ಮಿಶ್ರರಿಗೆ ಆ ಕಾಗದ ಚೆನ್ನಾಗಿ ಅರ್ಥವಾಗಲಿಲ್ಲ.

* 'ಬಂಗಾಲಾ' ಬಂಗಾಲದ ಭಾಷೆಯ ಶುದ್ಧ ರೂಪ. 'ಬಂಗಾಲೀ' ಎಂದರೆ ಬಂಗಾಲದ ಮನುಷ್ಯ ಎಂದರ್ಥ. ಬಂಗಾಲದ ಭಾಷೆಗೆ 'ಬಂಗಾಲೀ' ಎನ್ನುವುದು ತಪ್ಪು.

ರಾತ್ರಿ ಶಂಭೂಮಿಶ್ರರು ವೈದ್ಯರನ್ನು ಕರೆದುಕೊಂಡು ಬಂದರು. ವೈದ್ಯರು ಬಂಗಾಲಿಗಳು. ಅವರಿಗೆ ಕೈಲಾಸಬಾಬುಗಳ ಪರಿಚಯ ಚೆನ್ನಾಗಿತ್ತು. ವೈದ್ಯರ ಪ್ರಶ್ನೆಗೆ ಉತ್ತರಕೊಟ್ಟು ಕೈಲಾಸಬಾಬುಗಳು "ವೈದ್ಯರೇ, ನನ್ನ ಮೊಮ್ಮಗ ವಿಶೂ ಪತ್ರ ಬರೆದಿದ್ದಾನೆ. ಓದುತ್ತೇನೆ ಸ್ವಲ್ಪ ಕೇಳಿರಿ" ಎಂದರು. ವೈದ್ಯರಿಗೆ ವಿಶೂ ಯಾರೆಂಬುದು ಗೊತ್ತಿಲ್ಲ. ಆದಕ್ಕಾಗಿ ಕೇಳಿದರು–"ವಿಶೂ ಯಾರು?" ಎಂದು.

"ವಿಶೂ ನನ್ನ ಮೊಮ್ಮಗ. ಅವನದು ಈ ಪತ್ರ ಏನಮ್ಮಾ, ದೀಪ ಸ್ವಲ್ಪ ಇಲ್ಲಿಗೆ ತಾರಮ್ಮಾ" ಎಂದರು ಕೈಲಾಸಬಾಬುಗಳು.

ದೀಪದ ಬೆಳಕಿನಲ್ಲಿ ಇಡೀ ಕಾಗದವನ್ನು ಅವರು ಓದಿದರು. ತಾನು ಓದುವುದನ್ನು ವೈದ್ಯರು ಕೇಳುತ್ತಿರುವರೊ ಇಲ್ಲವೊ ಎಂಬುದನ್ನು ಅವರು ಗಮನಿಸಲಿಲ್ಲ. ಅದನ್ನು ವಿಶೂನ ಹೆಸರಿನಿಂದ ಸರಯೂ ಬರೆದಿದ್ದಳು. ಕೈಲಾಸಬಾಬುಗಳಿಗೆ ಇದೇ ಸಂತೋಷದ ಸಂಗತಿಯಾಯಿತು. ವೈದ್ಯರು ಔಷಧ ಕೊಟ್ಟು ಹೋಗಿಬಿಟ್ಟರು. ಕೈಲಾಸಬಾಗಳು ಶಂಭುಮಿಶ್ರರಿಗೆ ವಿಶೂನ ರೂಪ, ಗುಣ, ಬುದ್ಧಿ, ಮುಂತಾದುವನ್ನು ಬಣ್ಣಿಸತೊಡಗಿದರು.

ಎರಡು ವಾರ ಕಳೆದರೂ ಕೈಲಾಸಬಾಬುಗಳ ಜ್ವರ ಕಡಿಮೆಯಾಗಲಿಲ್ಲ. ಆಗ ಅವರು ಓಣಿಯಲ್ಲಿಯ ಒಬ್ಬ ಹುಡುಗನನ್ನು ಕರೆಯಿಸಿ ವಿಶೂಗೆ ಪತ್ರ ಬರೆಯಿಸಿದರು. ಅದರ ಆಶಯವಿಷ್ಟೆ: "ನಾನು ಒಳಿತಾಗಿದ್ದೇನೆ. ಆದರೂ ಮೈಯಲ್ಲಿ ಸ್ವಲ್ಪ ಸರಿಯಾಗಿಲ್ಲ. ಚಿಂತೆಗೆ ಕಾರಣವೇನೂ ಇಲ್ಲ."

ಕೈಲಾಸಬಾಬುಗಳು ಬದುಕುವ ಆಶೆಯಿಲ್ಲವೆಂದು ಕೇಳಿದ ಮೇಲೆ ಹರಿದಯಾಲರು ಅವರನ್ನು ಕಾಣುವುದಕ್ಕೆ ಬಂದರು. ಬೇರೆ ಒಂದೆರಡು ಮಾತು ಆಡಿದ ಬಳಿಕ ಮತ್ತೆ ಕೈಲಾಸಬಾಬುಗಳು ದಿಂಬಿನ ಕೆಳಗಿನ ಆ ಪತ್ರವನ್ನು ತೆಗೆದು ಹರಿದಯಾಲರ ಕೈಗೆ ಕೊಡುತ್ತ "ಓದಪ್ಪ ಈ ಪತ್ರ, ವಿಶೂನದು" ಎಂದರು.

ಪತ್ರ ಹೊಸದಾಗಿದ್ದಿತು. ಒಂದೆರಡು ಕಡೆ ಹರಿದೂ ಹೋಗಿದ್ದರಿಂದ ಪೂರ್ತಿಯಾಗಿ ಓದಲಿಕ್ಕಾಗಲಿಲ್ಲ. ಹರಿದಯಾಲರು ಓದಿ "ಇದು ಸರಯೂ ಬರೆದುದು" ಎಂದರು.

"ಸರಯೂ ಬರೆದುದು ನಿಜ. ಆದರೆ ಕಾಗದವೇನೊ ವಿಶೂನದೇ."

"ಹೌದು, ಕೆಳಗೆ ಅವನ ಹೆಸರೇ ಇದೆ."

ಈ ಮಾತಿನಿಂದ ಕೈಲಾಸಬಾಬುಗಳಿಗೆ ಸಂತೋಷವಾಗಲಿಲ್ಲ. ಅವರೆಂದರು – "ಹೆಸರೂ ಅವನದೇ ; ಕಾಗದವೂ ಅವನದೇ. ಸರಯೂ ಬರೆದವಳು ಮಾತ್ರ. ಬರೆಯಲು ಕಲಿತಮೇಲೆ ಸ್ವತಃ ಅವನೆ ನನಗೆ ಪತ್ರ ಬರೆಯುತ್ತಾನೆ."

ಹರಿದಯಾಲರು ತಲೆಯಲ್ಲಾಡಿಸಿದರು.

ಕೈಲಾಸಬಾಬುಗಳು ಉತ್ಸಾಹದಿಂದ ಕೇಳಿದರು – "ಏನು, ಓದಿದೆಯಾ ಕಾಗದ ? ರಾತ್ರಿಯೆಲ್ಲ ನಮ್ಮ ವಿಶೂ 'ತಾತಾ, ತಾತಾ' ಎಂದು ಕೂಗುತ್ತಾನೆ, ಅಳುತ್ತಾನೆ. ನನ್ನನ್ನು ಅವನು ಮರೆಯಬಲ್ಲನೆ ಎಂದಾದರೂ ?" ಕೈಲಾಸಬಾಬುಗಳ ಕಣ್ಣುಗಳಿಂದ ಒಂದೆರಡು ಕಂಬನಿಗಳುದುರಿದುವು ದಿಂಬಿನ ಮೇಲೆ.

ದಾಸಿ ಹತ್ತಿರವೇ ಇದ್ದಳು. ಅವಳು ಹರಿದಯಾಲರನ್ನು ಹೊರಗೆ ಕರೆದು "ಪುರೋಹಿತರೆ, ನೀವು ಹೋಗಿರಿ ಇನ್ನು. ನೀವು ಇದ್ದರೆ ದಿನವೆಲ್ಲ ಇವರು ಇದೇ ರೀತಿಯಾಗಿ ಮಾತನಾಡುವರು" ಎಂದಳು.

ನಾಲ್ಕೈದು ದಿನ ಸಂದುವು. ಈಗ ಅವರ ಸ್ಥಿತಿ ತೀರ ಕೆಟ್ಟಿದೆ. ಶಂಭುಮಿಶ್ರರು ಹಗಲೂ ರಾತ್ರಿ ಕೈಲಾಸಬಾಬುಗಳ ಹತ್ತಿರದಲ್ಲಿಯೆ ಇರುತ್ತಾರೆ. ಆಗಾಗ ವೈದ್ಯರೂ ಬಂದು ನೋಡಿ ಹೋಗುತ್ತಾರೆ. ಇಂದು ಇಡಿಯ ದಿನ ಕೈಲಾಸಬಾಬುಗಳಿಗೆ ಎಚ್ಚರವಿರಲಿಲ್ಲ. ಸಾಯಂಕಾಲ ಮೆಲ್ಲಮೆಲ್ಲಗೆ ಸ್ವಲ್ಪ ಎಚ್ಚರ ಬಂದಿತು. ಆಮೇಲೆ ಅರ್ಧ ಎಚ್ಚರ ಅರ್ಧಮೂರ್ಛೆಯಲ್ಲಿಯೆ ಇದ್ದರು. ಮಧ್ಯರಾತ್ರಿಯಲ್ಲಿ "ಮಗೂ ವಿಶೂ, ನಮ್ಮ ಮಂತ್ರಿಯನ್ನು ಕೊಡಪ್ಪಾ ; ಇಲ್ಲದೆ ಹೋದರೆ ನಾನು ಸೋಲಬೇಕಾಗುತ್ತದೆ ನೋಡು" ಎಂದರು.

"ಏನು ಮಾತನಾಡುತ್ತಿದ್ದೀರಿ ?" ಎಂದರು ಶಂಭೂಮಿಶ್ರರು.

ಕೈಲಾಸಬಾಬುಗಳು ಒಮ್ಮೆ ಶಂಭುಮಿಶ್ರರ ಮುಖನೋಡಿದರು. ಆಮೇಲೆ ಗಾಬರಿಯಿಂದ ದಿಂಬಿನ ಕೆಳಗೆ ಕೈಹಾಕಿದರು. ಆಗ ಅವರಿಗೆ ತನ್ನ ಯಾವುದೊ ಒಂದು ವಸ್ತು ಕಳೆದುಹೋಗಿದೆ, ಈಗ ಅದು ಬೇಕಾಗಿದೆ, ಎಷ್ಟು ಹುಡುಕಿದರೂ ಸಿಕ್ಕಲೊಲ್ಲದು ಎನ್ನುವಂತೆ ತೋರಿತು. ಅವರು ಹತಾಶರಾಗಿ ಅತ್ತಿತ್ತ ಹೊರಳಾಡುತ್ತ "ಮಗೂ ವಿಶೂ, ಈಗಲಾದರೂ ಮಂತ್ರಿಯನ್ನು ಕೊಟ್ಟುಬಿಡು. ಮಂತ್ರಿಯಿಲ್ಲದೆ ಎಷ್ಟೊತ್ತು ಆಡಲಿ ?" ಎಂದರು.

ಈ ವಿಶ್ವರೂಪೀ ಚದುರಂಗದ ಆಟದಲ್ಲಿ ಕೈಲಾಸಬಾಬುಗಳ ಮಂತ್ರಿ ಕಳೆದುಹೋಗಿದ್ದಾನೆ. ಅವರು ವಿಶ್ವಪತಿಯನ್ನು "ಮಂತ್ರಿಯನ್ನು ಕೊಡು"

ಎಂದು ಭಿಕ್ಷೆಬೇಡುತ್ತಿದ್ದರೊ ಏನೋ! ಶಂಭೂಮಿಶ್ರರು ಅವರ ಬಳಿ ನಿಂತು ಕೊಂಡರು. ದಾಸಿ ದೀಪ ತೆಗೆದುಕೊಂಡು ಬಂದು ನೋಡಿದಳು. ಅವರ ಕಣ್ಣು ನೆತ್ತಿಗೇರಿದ್ದವು. ತುಟಿಗಳು ಮಾತ್ರ ನಡುನಡುಗಿ ಇನ್ನೂ ಹೇಳುತ್ತಿದ್ದ ವೇನೋ– "ವಿಶ್ವೇಶ್ವರ, ಮಂತ್ರಿಯಿಲ್ಲದೆ ನಾನೆಲ್ಲಿಯ ವರೆಗೆ ಆಡಬಲ್ಲೆ! ತೆಗೆದು ಕೊಂಡು ಬಾ ಅಪ್ಪಾ, ಮಂತ್ರಿಯನ್ನು ಕೊಟ್ಟುಬಿಡು!"

ಮರುದಿನ ಹರಿದಯಾಲರು "ಕೈಲಾಸಬಾಬುಗಳು ಸ್ವರ್ಗಸ್ಥರಾದರು" ಎಂದು ಚಂದ್ರನಾಥನಿಗೆ ಪತ್ರ ಬರೆದರು.

## ೨೦

ಮಣಿಶಂಕರರರು ಧೈರ್ಯ ಕೊಟ್ಟದ್ದರಿಂದ ಇದ್ದ ಅಲ್ಪಸ್ವಲ್ಪ ಭಯವೂ ಈಗ ಚಂದ್ರನಾಥನಿಗೆ ಉಳಿಯಲಿಲ್ಲ. "ಮಗೂ, ಪಾಪ ಮಾಡಿದರೆ ಪ್ರಾಯ ಶ್ಚಿತ್ತ ಮಾಡಿಕೊಳ್ಳಬೇಕು. ಪಾಪವನ್ನೇ ಮಾಡದವನಿಗೆ ಪ್ರಾಯಶ್ಚಿತ್ತ ಎಲ್ಲಿ ಯದು? ಸರಯೂ ಯಾವ ಪಾಪವನ್ನೂ ಮಾಡಿಲ್ಲ; ಪ್ರಾಯಶ್ಚಿತ್ತದ ಮಾತನ್ನೆತ್ತಿ ವ್ಯರ್ಥವಾಗಿ ಆಕೆಯ ಅಪಮಾನ ಮಾಡಬೇಡ." – ಮಣಿ ಶಂಕರರ ಬಾಯಿಂದ ಈ ಮಾತು ಕೇಳಿ ಚಂದ್ರನಾಥನಿಗೆ ತೀರ ಆಶ್ಚರ್ಯ ವಾಯಿತು. ಅವನು ಅವರ ಮುಖವನ್ನು ನೋಡುತ್ತ ನಿಂತುಬಿಟ್ಟ. ಪುನಃ ಮಣಿಶಂಕರರರು ಎನ್ನತೊಡಗಿದರು – "ಪ್ರತಿಯೊಬ್ಬರ ಮನೆಯಲ್ಲಿ ಒಂದಿ ಲ್ಲೊಂದು ಬಗೆಯ ದೋಷ, ಒಂದಿಲ್ಲೊಂದು ಬಗೆಯ ನಾಚಿಕೆಗೇಡಿತನದ ಸಂಗತಿ ಇದ್ದೇ ಇದೆ ಎಂಬುದನ್ನು ನೋಡುವುದರಲ್ಲಿಯೆ ನಾನು ಮುದುಕ ನಾಗಿದ್ದೇನೆ. ಮನುಷ್ಯನು ದೀರ್ಘ ಕಾಲದ ವರೆಗೆ ಬದುಕಿರಬೇಕಾಗುವುದು. ಅವನು ತನ್ನ ಜೀವನಪಥದಲ್ಲಿ ಸಿಕ್ಕಿ ಬೀಳಬೇಕಾಗುವುದು, ಜಾರಬೇಕಾಗು ವುದು, ಏರು ಇಳಿತಗಳನ್ನು ದಾಟಬೇಕಾಗುವುದು. ಆದರೇನು ಮಗೂ, ಜನರು ತಮ್ಮ ಜಾರಿಕೆಯ ವಿಷಯವಾಗಿ ಏನೂ ಹೇಳುವುದಿಲ್ಲ; ಬೇರೆಯವರ ಜಾರಿಕೆಯ ವಿಚಾರವನ್ನು ಮಾತ್ರ ಆಡಿಕೊಳ್ಳುವರು. ಅವರು ತಮ್ಮ ದೋಷ ಮುಚ್ಚಿಡುವುದಕ್ಕೆ ಅನ್ಯರ ದೋಷ, ಅನ್ಯರ ನಾಚಿಕೆಗೇಡಿತನದ ನಡತೆಯನ್ನು ಕೂಗಿ ಕೂಗಿ ಹೇಳಿಕೊಳ್ಳುತ್ತಾರೆ—ಎರಡನೆಯವರ ಸದ್ದು ಗದ್ದಲದಲ್ಲಿ ತಮ್ಮ ದೋಷ ಮುಚ್ಚಿಹೋಗುವುದೆಂದು ಅವರು ಭಾವಿಸಿಕೊಳ್ಳುತ್ತಾರೆ." ಚಂದ್ರ ನಾಥ ಸುಮ್ಮನೆ ಆಲಿಸುತ್ತಿದ್ದ. ಮಣಿಶಂಕರರರು ಸ್ವಲ್ಪ ತಡೆದು ಪುನಃ ಹೇಳ

ತೊಡಗಿದರು—"ನಾನೊಂದು ಹೊಸ ಪಾಠ ಕಲಿತಿದ್ದೇನೆ. ಪರನನ್ನು ತನ್ನವನನ್ನಾಗಿ ಮಾಡಿಕೊಳ್ಳಬಹುದು. ತನ್ನವನನ್ನು ಪರನನ್ನಾಗಿ ಮಾಡಿ ಕೊಳ್ಳಬಹುದು. ಆದರೆ ತನ್ನವನನ್ನು ಪರನನ್ನಾಗಿ ಯಾರಾದರೂ ಮಾಡ ಬಲ್ಲರೆ ? ಇಷ್ಟು ದಿನ ನಾನು ಕುರುಡನಾಗಿದ್ದೆ. ಇಂದು ವಿಶೂ ನನ್ನ ಕಣ್ದೆರೆದ ; ಅವನ ಪುಣ್ಯದಿಂದ ಎಲ್ಲವೂ ಪವಿತ್ರವಾಗಿ ಹೋಗಿದೆ. ಈ ಹೊತ್ತು ದ್ವಾದಶಿ. ಹುಣ್ಣಿಮೆಯ ದಿನ ನಿನ್ನ ಮನೆಗೆ ಊಟಕ್ಕೆ ಬರಬೇಕೆಂದು ಇಡೀ ಊರಿಗೇ ಆಮಂತ್ರಣ ಕೊಟ್ಟಿದ್ದೇನೆ. ಮೊದಲು ಅಣ್ಣ ಇದ್ದರು. ಎಲ್ಲ ಕೆಲಸ ವನ್ನೂ ಅವರೇ ಮಾಡುತ್ತಿದ್ದರು. ನನ್ನಿಂದ ಯಾವುದನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಪುನಃ ವಿಶೂನ ಅನ್ನಪ್ರಾಶನ ಮಾಡಿಸ ಬೇಕೆನ್ನುತ್ತೇನೆ.''

ಚಂದ್ರನಾಥ ಸ್ವಲ್ಪ ಯೋಚಿಸಿ ಕೇಳಿದ ''ಆದರೆ ಸಮಾಜ ? "

ಮಣಿಶಂಕರರು ನಗುತ್ತ "ಸಮಾಜವೆಂದರೆ ಬೇರೆ ಯಾರೂ ಅಲ್ಲ. ಸಮಾಜವೆಂದರೆ ನಾನು, ನೀನು. ಇಲ್ಲಿ - ಸಮಾಜದಲ್ಲಿ - ಮತ್ತಾರೂ ಇಲ್ಲ. ಯಾರ ಬಳಿ ದುಡ್ಡು ಇದೆಯೋ ಅವರೇ ಸಮಾಜದ ಒಡೆಯರು. ನಾನು ಬಯ ಸಿದರೆ ನಿನ್ನ ಜಾತಿ ಕೆಡಿಸಬಹುದು. ನೀನು ಬಯಸಿದರೆ ನನ್ನ ಜಾತಿ ಕೆಡಿಸ ಬಹುದು. ಸಮಾಜಕ್ಕಾಗಿ ಹೆದರಬೇಡ. ಇದು ವರೆಗೆ ಹೇಳದಿದ್ದ ಒಂದು ಮಾತು ಹೇಳುತ್ತೇನೆ. ಯಾರಲ್ಲಿಯೂ ಹೇಳಬಾರದೆಂದು ಯೋಚಿಸಿದ್ದೆ. ನಿನ್ನಲ್ಲಿ ಹೇಳಿದರೆ ಹಾನಿಯೇನೂ ಕಾಣುವುದಿಲ್ಲ. ನಿನಗೆ ರಾಖಾಲದಾಸ ಭಟ್ಟಾಚಾರ್ಯರ ನೆನಪಿದೆಯೇನು ? " ಎಂದರು.

''ಹೌದು, ಹರಿದಯಾಲರ ಪತ್ರದಲ್ಲಿ ಅವರ ವಿಷಯವಾಗಿ ಓದಿದ್ದೆ.''

"ನಮ್ಮ ಮನೆತನದ ಮರ್ಯಾದೆ ಕಳೆಯಲು ಬರುವಂತಿದ್ದಿದ್ದರೆ ಅವರು ಕಳೆಯಬಹುದಾಗಿದ್ದಿತು. ಆದರೆ ಇನ್ನು ಅವರು ಯಾವ ಗುಟ್ಟನ್ನೂ ರಟ್ಟು ಮಾಡಲಾರರು. ನಾನು ಅವರನ್ನು ಸೆರೆಮನೆಗೆ ಅಟ್ಟಿಬಿಟ್ಟಿದ್ದೆ. ಕೆಲವು ದಿನಗಳ ಹಿಂದೆ ಸೆರೆಮನೆಯಿಂದ ಬಿಡುಗಡೆಯಾಗಿ ಅದೆಲ್ಲಿಗೊ ಹೊರಟು ಹೋಗಿದ್ದಾರೆ. ಇನ್ನು ಇಲ್ಲಿಗೆ ಬರಲು ಕನಸು ಮನಸ್ಸಿನಲ್ಲಿಯೂ ಅವರು ಯೋಚಿಸಲಾರರು."

ಮಣಿಶಂಕರರು ರಾಖಾಲನ ಆದ್ಯಂತ ಕತೆಯನ್ನು ವಿವರಿಸಿದರು.

ಅದನ್ನು ಕೇಳಿ ಚಂದ್ರನಾಥನಿಗೆ ಖೇದವೆನಿಸಿತು.

ಹುಣ್ಣಿಮೆಯ ದಿನ ಚಂದ್ರನಾಥನ ಮನೆಯಲ್ಲಿ ಊರಿನ ಎಲ್ಲ ಜನರಿಗೂ ಊಟ ಉಡಿಗೆ ಆಯಿತು. ಇಡಿಯ ಊರಿನಲ್ಲಿ ಯಾರೂ ಯಾವ ಕೊಂಕು ಮಾತನ್ನೂ ಹೇಳಲಿಲ್ಲ. ಮಣಿಶಂಕರರ ರೀತಿಯನ್ನು ನೋಡಿ ಸುಮ್ಮಸುಮ್ಮನೆ ಅಪವಾದವೆದ್ದಿತೆಂದು ಜನರು ತಿಳಿದುಕೊಂಡರು. ಅದೂ ಒಂದು ಜಮಾನು ದಾರಿಯ ಯುಕ್ತಿಯೋ ಏನೊ!

ಹರಕಾಲಿ ತಾನೇ ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ಉಂಡಳು. ಇನ್ನು ಅವರು ಈ ಊರಿನಲ್ಲಿ ಇರಲಾರರು. ತಮ್ಮ ಊರಿಗೆ ಹೋಗುವರು. ಹರಕಾಲಿ "ಜೀವ ಹೋದರೂ ಚಿಂತೆಯಿಲ್ಲ. ಧರ್ಮ ಬಿಡಲಿಕ್ಕಿಲ್ಲ" ಎಂದಳು.

ಅವಳು ಊರಿಗೆ ಹೋಗುವುದು ಒಳಿತಿಗೊ ಕೆಡುಕಿಗೊ ಗೊತ್ತಿಲ್ಲ. ಆದರೆ ಚಂದ್ರನಾಥ ಆ ದಂಪತಿಗಳಿಗೆ ತಿಂಗಳಿಗೆ ೫೦ ರೂಪಾಯಿಗಳ ಬದಲು ೧೦೦ ರೂಪಾಯಿ ಕಳಿಸುವ ಏರ್ಪಾಡು ಮಾಡಿದ.

ಉತ್ಸವವು ಸಂಗೀತ—ನೃತ್ಯ ಎಲ್ಲವೂ ಮುಗಿಯಿತು. ರಾತ್ರಿ ಬಹಳ ವಾಗಿದ್ದಿತು. ಚಂದ್ರನಾಥ ಒಳಗೆ ಬಂದು ನೋಡಿದ—ಸರಯೂ ರಾಜರಾಜೇಶ್ವರಿಯಂತೆ ಸರ್ವಾಲಂಕಾರಭೂಷಿತಳಾಗಿ ತೊಡೆಯ ಮೇಲೆ ಮಗನನ್ನು ಮಲಗಿಸಿಕೊಂಡು ಪತಿಯ ಆಗಮನದ ದಾರಿಯನ್ನು ನೋಡುತ್ತ ಕುಳಿತಿದ್ದಳು.

ಈ ಹೊತ್ತು ಹುಣ್ಣಿಮೆ.

"ಈ ಹೊತ್ತು ಇಷ್ಟೇನು ಠೀವಿ!" ಎಂದ ಚಂದ್ರನಾಥ.

ಸರಯೂ ನಸುನಕ್ಕು "'ಸಖಿ'ಯು ಕೇಳಲೆ ಇಲ್ಲ. ತೊಡಿಸಿದಳು!" ಎಂದಳು.

ಮುದ್ರಕರು:
**ಎಚ್. ಎಲ್. ಪ್ರಸಾದ್**
ಟೌನ್ ಪ್ರೆಸ್, ಪತ್ರಪ್ಪ ಬೀದಿ
ಬೆಂಗಳೂರು ನಗರ

ಪ್ರಕಾಶಕರು:
**ಮ. ಅನಂತಮೂರ್ತಿ**
ಈಸ್ಟ್ ರೋಡು, ವಿಶ್ವೇಶ್ವರಪುರ
ಬೆಂಗಳೂರು ನಗರ

# ಶರಚ್ಚಂದ್ರರ

## ಸರ್ವೋತ್ಕೃಷ್ಟ ಕಾದಂಬರಿಗಳು

---

**ದೇವದಾಸ**

ಗುರುನಾಥ ಜೋಶಿ

**ಚಂದ್ರನಾಥ**

ಗುರುನಾಥ ಜೋಶಿ

**ಕಾಶೀನಾಥ ಮತ್ತು ವೃಂದಾವನ**

ಗುರುನಾಥ ಜೋಶಿ, ಎಂ. ಎ. ಕುಪ್ಪಮ್ಮ

**ಅಕ್ಕಾಜಿ**

ಮೇವುಂಡಿ ಮಲ್ಲಾರಿ

**ಅರಗಿನ ಮನೆ**

ಮೇವುಂಡಿ ಮಲ್ಲಾರಿ

---

ದೊರೆಯುವ ಸ್ಥಳ :

ಸಾಹಿತ್ಯ ಭಾಂಡಾರ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಹುಬ್ಬಳ್ಳಿ